7. ಪ್ರಮಾಣ ವಚನ ಸ್ವೀಕಾರ

ಶ್ರೀಮತಿ ಅನಿತಾ ಕುಮಾರಸ್ವಾಮಿ [ಮಧುಗಿರಿ] :- ಶ್ರೀಮತಿ ಅನಿತಾ ಕುಮಾರಸ್ವಾಮಿ ಎಂಬ ಹೆಸರಿನವಳಾದ ನಾನು ವಿಧಾನ ಸಭೆಯ ಸದಸ್ಯಳಾಗಿ ನಿರ್ವಾಚನ ಹೊಂದಿದವಳಾಗಿ ವಿಧಿದ್ವಾರಾ ಸ್ಥಾಪಿತವಾದ ಭಾರತದ ಸಂವಿಧಾನದ ವಿಷಯದಲ್ಲಿ ಶ್ರದ್ಧೆಯಿಂದಲೂ, ನಿಷ್ಠೆಯಿಂದಲೂ ಕೂಡಿರುತ್ತೇನೆಂದೂ, ನಾನು ಭಾರತದ ಪರಮಾಧಿಕಾರವನ್ನು ಮತ್ತು ಸಮಗ್ರತೆಯನ್ನು ಸಮರ್ಥಿಸುತ್ತೇನೆಂದೂ, ನಾನು ಈಗ ಕೈಗೊಳ್ಳಲಿರುವ ಕರ್ತವ್ಯವನ್ನು ಶ್ರದ್ಧಾಪೂರ್ವಕವಾಗಿ ನಿರ್ವಹಿಸುತ್ತೇನೆಂದೂ ಭಗವಂತನ ಹೆಸರಿನ ಮೇಲೆ ಪ್ರಮಾಣ ಮಾಡುತ್ತೇನೆ.

ಶ್ರೀಮತಿ ಕಲ್ಪನಾ ಸಿದ್ಧರಾಜು [ಮದ್ದೂರು] :- ಶ್ರೀಮತಿ ಕಲ್ಪನಾ ಸಿದ್ಧರಾಜು ಎಂಬ ಹೆಸರಿನವಳಾದ ನಾನು ವಿಧಾನ ಸಭೆಯ ಸದಸ್ಯಳಾಗಿ ನಿರ್ವಾಚನ ಹೊಂದಿದವಳಾಗಿ ವಿಧಿದ್ವಾರಾ ಸ್ಥಾಪಿತವಾದ ಭಾರತದ ಸಂವಿಧಾನದ ವಿಷಯದಲ್ಲಿ ಶ್ರದ್ಧೆಯಿಂದಲೂ, ನಿಷ್ಠೆಯಿಂದಲೂ ಕೂಡಿರುತ್ತೇನೆಂದೂ, ನಾನು ಭಾರತದ ಪರಮಾಧಿಕಾರವನ್ನು ಮತ್ತು ಸಮಗ್ರತೆಯನ್ನು ಸಮರ್ಥಿಸುತ್ತೇನೆಂದೂ, ನಾನು ಈಗ ಕೈಗೊಳ್ಳಲಿರುವ ಕರ್ತವ್ಯವನ್ನು ಶ್ರದ್ಧಾಪೂರ್ವಕವಾಗಿ ನಿರ್ವಹಿಸುತ್ತೇನೆಂದೂ ಸತ್ಯ ನಿಷ್ಠೆಯಿಂದ ಪ್ರತಿಜ್ಞೆ ಮಾಡುತ್ತೇನೆ.

ಅಧ್ಯಕ್ಷರು :- ಈಗ ಮಾನ್ಯ ಸಚಿವರಾದ ಹಾಲಪ್ಪನವರು ಬಿಪಿಎಲ್ ಕಾರ್ಡಿನ ಬಗ್ಗೆ ಒಂದು ಹೇಳಿಕೆಯನ್ನು ನೀಡುತ್ತಾರೆ.

ಶ್ರೀ ಟಿ.ಬಿ. ಜಯಚಂದ್ರ :- ಈಗ ಹೇಳಿಕೆಯನ್ನು ಕೊಡುತ್ತಿದ್ದಾರಲ್ಲ, ನಾವು ಕೂಡ ಆಹಾರ ವಿಚಾರದಲ್ಲಿ ಧ್ವನಿಗೂಡಿಸುವವರಿದ್ದೇವೆ, ಪತ್ರಿಕೆಯಲ್ಲಿ ಬಂದಿರುವುದಕ್ಕೆ ಹೇಳಿಕೆ ಕೊಡುವುದಕ್ಕಿಂತ ಮುಂಚೆ, ಇವತ್ತು ಕಾರ್ಡಿಗೆ ಜನರು ಸಾಲು ಸಾಲಾಗಿ ನಿಂತಿದ್ದಾರೆ.

8. ಸಚಿವರ ಹೇಳಿಕೆ

ವಿಷಯ :- ರಾಜ್ಯದಲ್ಲಿ ಪಡಿತರ ಚೀಟಿ ವಿತರಣೆ ಬಗ್ಗೆ :-

ಶ್ರೀ ಹಾಲಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :- ಕರ್ನಾಟಕ ರಾಜ್ಯದಲ್ಲಿ 2005ರ ಮನೆ-ಮನೆ ಸಮೀಕ್ಷೆಯಂತೆ ಒಟ್ಟು 1,23,44,962 ಕುಟುಂಬಗಳಿದ್ದು, ಸದ್ಯಕ್ಕೆ ರಾಜ್ಯದಲ್ಲಿ 78,46,405 ಬಿ.ಪಿ.ಎಲ್ ಹಾಗೂ 54,91,232

ಎ.ಪಿ.ಎಲ್ ಒಟ್ಟು : 1,33,37,637 ಪಡಿತರ ಚೀಟಿಗಳನ್ನು (ಇದರಲ್ಲಿ 2005ರ ನಂತರದ ಹೊಸ ಕುಟುಂಬಗಳಿಗೆ ಜಿ9 ಅಡಿಯಲ್ಲಿ 10,70,162 ಪಡಿತರ ಚೀಟಿ ಸೇರಿ) ವಿತರಿಸಲಾಗಿದೆ. ಈ ಪೈಕಿ ಬಿ.ಪಿ.ಎಲ್ ಮತ್ತು ಎ.ಪಿ.ಎಲ್ ಸೇರಿಸಿ 1,01,42,373 ಪಡಿತರ ಚೀಟಿಗಳಿಗೆ ಭಾವಚಿತ್ರ ಹಾಗೂ ಜೀವಮಾಪಕ ಸೆರೆಹಿಡಿಯಲಾಗಿದೆ. ಇವುಗಳಲ್ಲಿ 69,51,990 ಬಿ.ಪಿ.ಎಲ್ ಮತ್ತು 31,90,383 ಎ.ಪಿ.ಎಲ್ ಕುಟುಂಬಗಳು ಆಗಿರುತ್ತವೆ.

ನೆಮ್ಮದಿ ಕೇಂದ್ರದ ಮುಖಾಂತರ ಈಗಾಗಲೇ ಅರ್ಜಿಗಳನ್ನು ಸ್ವೀಕೃತಿ ಮಾಡಲಾಗುತ್ತಿದೆ. ದಿನಾಂಕ : 16-01-2009ರ ವರೆಗೆ 772 ನೆಮ್ಮದಿ ಕೇಂದ್ರಗಳ ಮುಖಾಂತರ 5,48,027 ಅರ್ಜಿಗಳನ್ನು ವಿತರಿಸಲಾಗಿದ್ದು, 29,412 ಅರ್ಜಿದಾರರ ಭಾವಚಿತ್ರ ಸೆರೆಹಿಡಿಯಲಾಗಿದೆ. ಅರ್ಜಿಗಳನ್ನು ಸ್ವೀಕರಿಸಲು ದಿನಾಂಕ : 27-01-2009 ಕೊನೆ ದಿನವಾಗಿ ಸರ್ಕಾರ ಸುತ್ತೋಲೇ ಹೊರಡಿಸಿದ್ದು, ಈಗ 31-01-2009ರ ವರೆಗೆ ಅರ್ಜಿಗಳನ್ನು ಸ್ವೀಕರಿಸಲು ಕಾಲಾವಕಾಶ ಕಲ್ಪಿಸಿ ಕೊಡಲಾಗಿದೆ. ಈ ಸಂಬಂಧ ಸುತ್ತೋಲೆ ಹೊರಡಿಸಲು ಸೂಚನೆ ನೀಡಲಾಗಿದೆ. ಈಗಾಗಲೇ ಈ ಬಗ್ಗೆ ನಾನು ಎಲ್ಲಾ ಸನ್ಮಾನ್ಯ ಸಚಿವರಿಗೆ, ವಿಧಾನ ಸಭಾ ಸದಸ್ಯರು ಹಾಗೂ ವಿಧಾನ ಪರಿಷತ್ ಸದಸ್ಯರುಗಳಿಗೆ ಪತ್ರ ಬರೆದು ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಅವರ ಸಹಕಾರವನ್ನು ಕೋರಿರುತ್ತೇನೆ. ನೆಮ್ಮದಿ ಕೇಂದ್ರಗಳಲ್ಲಿ ವಿಶೇಷವಾಗಿ ನಗರ ಮತ್ತು ಅನೌಪಚಾರಿಕ ಪಡಿತರ ಪ್ರದೇಶಗಳಲ್ಲಿ ಕೆಲವೆಡೆ ಗೊಂದಲ ಉಂಟಾಗಿದ್ದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ಸಮಸ್ಯೆಗಳನ್ನು ಬಗೆಹರಿಸಲು ಹೆಚ್ಚು ಗಣಕ ಯಂತ್ರಗಳನ್ನು ಅಳವಡಿಸಿ, ಅರ್ಜಿಗಳನ್ನು ಪಡೆದು ಪಡಿತರ ಚೀಟಿ ತ್ವರಿತವಾಗಿ ವಿತರಣೆ ಮಾಡುವಂತೆ ಸೂಚನೆ ನೀಡಲಾಗಿದೆ.

ಈ ಅರ್ಜಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ಪಡಿತರ ಚೀಟಿ ನೀಡಲು ತಡವಾಗುವ ಸಂಭವವಿದ್ದು, ನೆಮ್ಮದಿ ಕೇಂದ್ರದಲ್ಲಿ ಸ್ವೀಕರಿಸುವ ಅರ್ಜಿಗಳ ಪರಿಶೀಲನೆಗೆ ಒಳಪಟ್ಟು, ಯಾವುದೇ ಪಡಿತರ ಚೀಟಿ ಹೊಂದಿಲ್ಲದ ಕುಟುಂಬಗಳಿಗೆ ತಾತ್ಕಾಲಿಕವಾಗಿ ಎ.ಪಿ.ಎಲ್./ಬಿ.ಪಿ.ಎಲ್. ಪಡಿತರ ಚೀಟಿಗಳನ್ನು ದಿನಾಂಕ : 01-02-2009 ರಿಂದ ನೀಡಲು ಹಾಗೂ 2009 ಮಾರ್ಚ್ ತಿಂಗಳಿಂದ ಅರ್ಹ ಬಿ.ಪಿ.ಎಲ್. ಕುಟುಂಬಗಳಿಗೆ ಆಹಾರ ಧಾನ್ಯಗಳನ್ನು ವಿತರಿಸುವಂತೆ ಕ್ರಮ ಕೈಗೊಳ್ಳಲು ಸರ್ಕಾರವು ತೀರ್ಮಾನಿಸಿದೆ. ಸದರಿ ತಾತ್ಕಾಲಿಕ ಪಡಿತರ ಚೀಟಿಗಳನ್ನು 3-4 ತಿಂಗಳೊಳಗಾಗಿ ಪರಿಶೀಲಿಸಿ ಅವರ ಕುಟುಂಬದ ಸದಸ್ಯರ ಭಾವಚಿತ್ರ ಹಾಗೂ

ಜೀವಮಾಪಕವನ್ನೊಳಗೊಂಡ ಖಾಯಂ ಪಡಿತರ ಚೀಟಿಯನ್ನು ವಿತರಿಸಲು ಕ್ರಮ ತೆಗೆದುಕೊಳ್ಳಲಾಗುವುದು. ತಪ್ಪು ಮಾಹಿತಿ ನೀಡಿ ಪಡಿತರ ಚೀಟಿ ಪಡೆದಲ್ಲಿ ಪಡಿತರ ಚೀಟಿಯನ್ನು ರದ್ದುಗೊಳಿಸಿ, ಕಾನೂನಿನನ್ವಯ ಕಠಿಣ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಲಾಗಿದೆ.

ಶ್ರೀ ಟಿ.ಬಿ. ಜಯಚಂದ್ರ :- ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸಚಿವರು ಬಹಳ ಬುದ್ಧಿವಂತಿಕೆ ಮಾಡಿ ಹೇಳಿಕೆ ಕೊಟ್ಟಿದ್ದಾರೆ. ಆದರೆ ಇದನ್ನು ನೀವು ಯಾವುದಾದರೂ ರೂಪದಲ್ಲಿ ಚರ್ಚೆಗೆ ಅವಕಾಶ ಮಾಡಿ ಕೊಡುವುದಾದರೆ ಖಂಡಿತವಾಗಿ ಸಹಾಯ ವಾಗುತ್ತದೆ.ಇವತ್ತು ಕಾರ್ಡಿನ ಸಮಸ್ಯೆ ಪಕ್ಷಾತೀತವಾಗಿ ಎಲ್ಲರೂ ಒಪ್ಪತಕ್ಕಂಥದ್ದು ಅದನ್ನು ಬಗೆಹರಿಸಲೇಬೇಕು. ಹಿಂದೆ ಉಪ ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಶಿವಮೊಗ್ಗದ ಗಲ್ಲಿಗಲ್ಲಿಗಳಲ್ಲಿ ಓಡಾಡಿದಂತಹವರು ಇವತ್ತು ಮುಖ್ಯ ಮಂತ್ರಿಗಳಾಗಿದ್ದಾರೆ, ಸಮಸ್ಯೆ ಅವರಿಗೆ ಅರಿವಾಗಿದೆ. ಅದು ಬಗೆಹರಿಸಬೇಕಾದ ಸಂದರ್ಭದಲ್ಲಿ ನೀವು ಅನುಸರಿಸತಕ್ಕಂತಹ ಕ್ರಮದಲ್ಲಿ ಲೋಪದೋಷಗಳಿವೆ.

ಶ್ರೀ ಸುರೇಶ್ ಕುಮಾರ್ :- ಚರ್ಚೆ ಬೇಡ. You can seek clarification.

ಶ್ರೀ ಡಿ.ಕೆ. ಶಿವಕುಮಾರ್ :- ಮಂತ್ರಿಗಳು ಹೇಳಿಕೆ ಕೊಟ್ಟಿದ್ದಾರೆ ನಿಜ. ಮಂತ್ರಿಗಳು clarification ಕೇಳಿ ಎಂದು ಹೇಳಿದ್ದಾರೆ ನಾವು ಕೇಳುತ್ತಿದ್ದೇವೆ. Discussion ಮಾಡುವುದು ಬೇಡ ಎಂದು ಹೇಳಿದರೆ ಹೇಗೆ? ನಾವು ಅಧ್ಯಕ್ಷರಿಗೆ ಕೇಳುತ್ತಿದ್ದೇವೆ. Let the Speaker reject it.

ಶ್ರೀ ಸುರೇಶ್ ಕುಮಾರ್ :- ಚರ್ಚೆಗೆ ಅವಕಾಶ ಇಲ್ಲ.

ಶ್ರೀ ಟಿ.ಬಿ. ಜಯಚಂದ್ರ :- 2004ರಲ್ಲಿ ನಾನೂ ಕೂಡ ಆಹಾರ ಸಚಿವ ನಾಗಿದ್ದೆ. ಅವತ್ತೂ ಕೂಡ ನಾನು 77 ಲಕ್ಷ ತಾತ್ಕಾಲಿಕವಾದ ಪಡಿತರ ಕಾರ್ಡುಗಳನ್ನು ಕೊಟ್ಟೆ, ತದ ನಂತರ ಬಂದಂತಹ ಸರ್ಕಾರಗಳು 60 ಲಕ್ಷಕ್ಕೆ ಇಳಿಸುವುದಕ್ಕೆ ಹೋಗಿ APL ಇದ್ದುದು BPL ಆಯಿತು, BPL ಇದ್ದುದು APL ಆಯಿತು. ಈ ಸಮಸ್ಯೆ ಹುಟ್ಟಿಕೊಳ್ಳುವುದಕ್ಕೆ ಮೂಲ ಕಾರಣ ಏನೆಂದು ಬಹುಶ: ಸರ್ಕಾರಕ್ಕೆ ಗೊತ್ತಿಲ್ಲವೆಂದು ಕಾಣುತ್ತದೆ. ಯಾವತ್ತು ನೀವು KOMAT ಎನ್ನುವ ಸಂಸ್ಥೆಗೆ ಫೋಟೋ ತೆಗೆಯುವುದಕ್ಕೆ ಕೊಟ್ಟಿದ್ದೀರಿ ಹಳ್ಳಿಗಳಲ್ಲಿ ಗೊಂದಲ ಎಬ್ಬಿಸತಕ್ಕಂಥವನು ಅವನೇ. ಯಾವ ಹಳ್ಳಿಗಳಿಗೂ ಕೂಡ ಬರುವುದಿಲ್ಲ. ನೀನು ಈ ಊರಿಗೆ ಬಾರಪ್ಪ ಎಂದರೆ ನಾನು ಆ

ಊರಿಗೆ ಬರುವುದಿಲ್ಲ ಈ ಊರಿಗೆ ಹೋಗುತ್ತೇನೆಂದು ಹೇಳುತ್ತಾನೆ. ತಹಶೀಲ್ದಾರ್‌ರವರು ಮತ್ತು ಡೆಪ್ಯೂಟಿ ಕಮೀಷನರ್‌ರವರು ಹಾಕಿ ಕೊಟ್ಟಂತಹ ಪಟ್ಟಿ ಏನಿದೆ, ಆ ಪಟ್ಟಿ ಪ್ರಕಾರ ಹೋಗುವುದಿಲ್ಲ. ಇವತ್ತು ಸಾಕಷ್ಟು ಗೊಂದಲ ನಿರ್ಮಾಣವಾಗಿದೆ. ಜನರಿಗೆ ವಿಶ್ವಾಸ ಹೋಗಿರುವಂತಹ ಸಂದರ್ಭದಲ್ಲಿ ನೀವು ಅನುಸರಿಸತಕ್ಕಂತಹ ಕ್ರಮಗಳಲ್ಲಿ ಲೋಪದೋಷಗಳಿವೆ. ನೀವು ಅರ್ಜಿ ಕೊಡುವಂತಹ ವಿಷಯವನ್ನು ನಾನು ಒಪ್ಪುತ್ತೇನೆ. ನೀವು ಅರ್ಜಿ ಕೊಡಬೇಕಾದರೆ 50 ರೂ. ದುಡ್ಡು ಕಟ್ಟಬೇಕು. 45 ರೂಪಾಯಿ ಫೋಟೋಗೆ, ಐದು ರೂ. ಅರ್ಜಿಗೆ ಎಂದು ಹೇಳಿ 50 ರೂ. ಕಟ್ಟಬೇಕು. ಅರ್ಜಿ ಕೊಟ್ಟ ಮೇಲೆ Revenue Inspector ಹತ್ತಿರ ಮತ್ತು ತಹಶೀಲ್ದಾರ್ ಹತ್ತಿರ verification ಗೆ ಹೋಗುತ್ತದೆ. Revenue Inspector ಏನು ಮಾಡುತ್ತಾರೆ, ಅದಕ್ಕೆ ನಿಯಮಗಳಿವೆ. ಆ ನಿಯಮಗಳಡಿಯಲ್ಲಿ ವೆರಿಫಿಕೇಷನ್ ಮಾಡಿ ಮತ್ತೆ ರಿಜೆಕ್ಟ್ ಮಾಡುತ್ತಾರೆ.ಇದರಿಂದ ಬಡವರಿಗೆ, ಕಾರ್ಡ್ ಸಿಗದೆ ಇರುವ ಫಲಾನುಭವಿಗಳಿಗೆ ಕಾರ್ಡುಗಳನ್ನು ಕೊಡಬೇಕಾದ ಉದ್ದೇಶ ಸಫಲವಾಗುವುದಿಲ್ಲ. ತಾವು ಈಗ ಅಫಿಡವಿಟ್ ತೆಗೆದುಕೊಳ್ಳುತ್ತಿದ್ದೀರಿ, ಅಫಿಡವಿಟ್ ತೆಗೆದುಕೊಂಡ ಮೇಲೆ ಅಫಿಡವಿಟ್ ಆಧಾರದ ಮೇಲೆಯೇ ನೀವು ತಾತ್ಕಾಲಿಕವಾದ ಕಾರ್ಡುಗಳನ್ನು ಇಶ್ಯೂ ಮಾಡಿ. ಒಂದು ವೇಳೆ ಅವರೇನಾದರೂ ಮಿಸ್‌ಲೀಡ್ ಮಾಡಿದ್ದರೆ, mis-represent ಮಾಡಿದರೆ ಅವನಿಗೆ ಪ್ರಾಸಿಕ್ಯೂಟ್ ಮಾಡುವುದಕ್ಕೆ ಅವಕಾಶ ಇದೆ. ನೀವು ಪ್ರಾಸಿಕ್ಯೂಟ್ ಮಾಡಿ. ಆದರೆ ಮೂರು ತಿಂಗಳವರೆಗೆ ಇವರಿಗೆ ತಾತ್ಕಾಲಿಕವಾಗಿ ಆಹಾರ ಧಾನ್ಯಗಳನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ನಿಮಗೆ ಕೆಟ್ಟ ಹೆಸರು ಬಂದಿರುವುದು ನಿಮಗೆ ಅರ್ಥವಾಗಿದೆಯೋ ಇಲ್ಲವೋ, ಆದರೆ ಕೊಮ್ಯಾಟ್ ಎಂಬ ಸಂಸ್ಥೆಯಿಂದ ಇದೆಲ್ಲವೂ ಹಾಳಾಗಿದೆ. ಅದನ್ನು ನೀವು ಸರಿಪಡಿಸಬೇಕು. ಹಳ್ಳಿಗಳಲ್ಲಿ ಏನಾಗಿದೆ ಎಂದು ನಾನು ಪತ್ರಿಕೆಗಳಲ್ಲಿ ಹಾಗೂ ಟಿ.ವಿ.ಗಳಲ್ಲಿ ನೋಡಿದ್ದೇನೆ.ಹಳ್ಳಿಗಳ ಜನರೆಲ್ಲಾ ಇವತ್ತು ನೆಮ್ಮದಿ ಕೇಂದ್ರದ ಮುಂದೆ ತಾಲ್ಲೂಕು ಆಫೀಸ್‌ಗಳ ಮುಂದೆ ಹಾಗೂ ಬ್ಯಾಂಕುಗಳ ಮುಂದೆ stamp paper ಗೋಸ್ಕರ ಕ್ಯೂ ನಿಂತಿದ್ದಾರೆ. ಇದನ್ನು ನಿಮಗೆ ನಿಯಂತ್ರಣ ಮಾಡುವುದಕ್ಕೆ ಸಾಧ್ಯ ವಾಗುತ್ತಿಲ್ಲ. ಇವತ್ತು ಇಡೀ ರಾಜ್ಯದಲ್ಲಿ law and order situation create ಆಗಿದೆ. ನೀವು ಅದನ್ನೆಲ್ಲಾ ಯೋಚನೆ ಮಾಡಬೇಕು.ನಾವು ಇದರ ಬಗ್ಗೆ ಸಾಕಷ್ಟು ಸಲಹೆಗಳನ್ನು ಕೊಟ್ಟಿದ್ದೇವೆ. ಜಿಲ್ಲಾಧಿಕಾರಿಗಳ ಮುಂದೆ ಚರ್ಚೆ ಮಾಡಿ ಇದು ತಪ್ಪಾಗುತ್ತದೆ ಎಂದು ಹೇಳಿದ್ದೇವೆ.

ನೀವು ಏನಾದರೂ ಟೈಮ್ ಟೇಬಲ್ ಹಾಕಿದ್ದೀರಾ? ನೀವು 15 ದಿವಸಗಳೊಳಗೆ ಅರ್ಜಿ ಕೊಡಬೇಕೆಂದು ಹೇಳಿದ್ದೀರಿ. ತಾಲ್ಲೂಕು ಆಫೀಸ್‌ನಲ್ಲಿ ಒಂದು ಪಾಂಪ್ಲೆಟ್ ಪ್ರಿಂಟ್ ಮಾಡಿದರು ಅದನ್ನು ಇಟ್ಟುಕೊಂಡು ಕುಳಿತರು. ಯಾರಿಗೂ ಮಾಹಿತಿ ಇಲ್ಲ. ಜನ ಇವತ್ತು ಕೊಡುತ್ತಾರೆ, ಇವತ್ತು ಕೊಡುತ್ತಾರೆಂದು ಹೇಳಿ ನೂಕು ನುಗ್ಗಲು ಮಾಡುತ್ತಿದ್ದಾರೆ. ಏಕೆ ಇದೆಲ್ಲಾ confusion? ನೀವು advance information ಕೊಡದೆ ಬೈ ಎಲೆಕ್ಷನ್ ಇತ್ತು ಎನ್ನುವ ಕಾರಣಕ್ಕಾಗಿ ಈ ಕಾರ್ಯಕ್ರಮ ಜಾರಿಯಾಗಿದೆ. ನೀವು advance information ಕೊಟ್ಟು ಈ ಕಾರ್ಯಕ್ರಮ ಮಾಡಿದ್ದರೆ ಸರಿಯಾಗುತ್ತಿತ್ತು. ದಯಮಾಡಿ ನಾವು ಇಷ್ಟೇ ಕೇಳತಕ್ಕಂಥದ್ದು. ನೀವು ಒಂದು ಸಾರಿ ಅಫಿಡವಿಟ್ ಕೊಟ್ಟ ಮೇಲೆ ಹೆಚ್ಚು ವೆರಿಫಿಕೇಷನ್ ಮಾಡುವುದಕ್ಕೆ ಹೋಗಬೇಡಿ. ಹೆಚ್ಚು ವೆರಿಫಿಕೇಷನ್ ಮಾಡದೆ ನೀವು ತಾತ್ಕಾಲಿಕವಾದ ಕಾರ್ಡುಗಳನ್ನು ಕೊಡಿ. ಜನ ಅತ್ಯಂತ ಕಷ್ಟದಲ್ಲಿದ್ದಾರೆ. ನಾನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ನೀವು ಯಾವುದೇ ಹಳ್ಳಿಗೆ ಹೋಗಿ, ಶಿಕಾರಿಪುರದಲ್ಲಿರತಕ್ಕಂತಹ ಗ್ರಾಮಗಳಿಗೆ ಹೋಗೋಣ. ನೀವು ಹೋದ ತಕ್ಷಣ ನಮಗೆ ಎದುರಾಗತಕ್ಕಂಥದ್ದು ಏನೆಂದರೆ, ನಿರ್ಗತಿಕರು, ವಯಸ್ಸಾಗಿ ರತಕ್ಕಂತಹವರು, ಕುರುಡರು, ಹಾಗೂ ಕುಂಟರು. ಅವರಿಗೆ ಕಾರ್ಡ್‌ಗಳಿಲ್ಲ. ಕಾರ್ಡ್‌ಗಳು ಯಾರೋ ಒಬ್ಬ ಶ್ರೀಮಂತರ ಪಾಲಾಗಿವೆ. ಅದಕ್ಕೆ ನಾವು ಪತ್ರಿಕೆಯವರನ್ನು ದೂಷಿಸುತ್ತಿದ್ದೇವೆ. ಕಂಪ್ಯೂಟರ್‌ನಿಂದ ಆಗಿರತಕ್ಕಂತಹ ದೋಷ. ಕೊಮ್ಯಾಟ್ ಎಂಬ ಸಂಸ್ಥೆಗೆ ಕೊಟ್ಟು ಇವತ್ತು ಸರ್ಕಾರದ ಮೇಲೆ ಹೊರೆಯಾಗಿದೆ. ಅದನ್ನು simplify ಮಾಡತಕ್ಕಂತಹ ಕೆಲಸವನ್ನು ಮಾಡಿದರೆ ಖಂಡಿತ ಸಹಾಯವಾಗುತ್ತದೆ. ದಯಮಾಡಿ ಮಾನ್ಯ ಮುಖ್ಯ ಮಂತ್ರಿಗಳು ಈ ವಿಚಾರದಲ್ಲಿ ರಾಜ್ಯದ ಜನತೆಗೆ ಒಂದು ಸಂದೇಶವನ್ನು ಕೊಡಬೇಕಾಗುತ್ತದೆ.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್ (ಕನಕಪುರ) :- ಮಾನ್ಯ ಅಧ್ಯಕ್ಷರೆ ಇದು ಬಹಳ ಗಂಭೀರವಾದ ವಿಚಾರ. ಮಾನ್ಯ ಆಹಾರ ಸಚಿವರು ತೆಗೆದುಕೊಳ್ಳುವಂತಹ ನಿರ್ಣಯ ಇತಿಹಾಸಕ್ಕೆ ಸೇರುವಂತಹ ವಿಚಾರ. ಹಳ್ಳಿಗಳಲ್ಲಿ ವಾಸಿಸುವವರಿಗೆ BPL ಕಾರ್ಡ್ ಒಂದು ದೊಡ್ಡ ಆಸ್ತಿ. ಅವರ ಜೀವನದ ಆಧಾರ. ಅಂತಹ ಒಂದು ವ್ಯವಸ್ಥೆ ಇದೆ. ಸರ್ಕಾರದವರು ಸಬ್ಸಿಡಿ ಕೊಡಬೇಕಾದರೆ ಬೇಕಾದಷ್ಟು ಹಣ ಖರ್ಚಾಗುತ್ತದೆ ನಾನು ಒಪ್ಪಿಕೊಳ್ಳುತ್ತೇನೆ.ಆದರೆ ಒಂದು ಸಂದರ್ಭದಲ್ಲಿ ಹಿಂದೆ ಇದ್ದಂತಹ

ಸರ್ಕಾರಗಳು ನಮ್ಮ ಸಮ್ಮಿಶ್ರ ಸರ್ಕಾರ ಇರಬಹುದು, ಈಗ ಅಧಿಕಾರಕ್ಕೆ ಬಂದಿರುವಂತಹ ಮಾನ್ಯ ಯಡ್ಯೂರಪ್ಪನವರ ಸರ್ಕಾರ ಇರಬಹುದು, ಯಾವ್ಯಾವ ಸಚಿವರು ಏನು ಹೇಳಿಕೆಗಳನ್ನು ಕೊಟ್ಟಿದ್ದಾರೆ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಮೈಸೂರಿನಲ್ಲಿ below Poverty Line ಗೆ ಎಷ್ಟು ಹಣವನ್ನು ಫಿಕ್ಸ್ ಮಾಡಿದರು, ಬಜೆಟ್ ಸಂದರ್ಭದಲ್ಲಿ ಏನು ಹೇಳಿದರು, ರಾಜ್ಯಪಾಲರ ಬಾಷಣದಲ್ಲಿ ಏನು ಹೇಳಿದರು, ಇದನ್ನು ತಾವು ಈ ಸಂದರ್ಭದಲ್ಲಿ ಗಮನಿಸಬೇಕು. BPL ಕಾರ್ಡ್ ಕೊಡಬೇಕಾದವರಿಗೆ APL ಕಾರ್ಡ್ ಕೊಟ್ಟಿದ್ದಾರೆ, APLಕಾರ್ಡ್ ಕೊಡಬೇಕಾದವರಿಗೆ BPL ಕಾರ್ಡ್ ಕೊಟ್ಟಿದ್ದಾರೆ. ಇಲ್ಲಿ ತಾವು ಏನು ಹೇಳಿದ್ದೀರಿ ಎಂದರೆ, ಯಾವುದೇ ಕಾರ್ಡ್ ಇಲ್ಲದಿರುವವರು ಹೊಸದಾಗಿ ಕಾರ್ಡ್ ತೆಗೆದುಕೊಳ್ಳುವುದಕ್ಕಾಗಿ ಅರ್ಜಿ ಕೊಡಿ ಎಂದು ಹೇಳಿದ್ದೀರಿ.

ಯಾರ್ಯಾರಿಗೆ ಬಿ.ಪಿ.ಎಲ್. ಕಾರ್ಡ್‌ನ್ನು ಕೊಡಬೇಕಾಗಿತ್ತೋ ಅವೆಲ್ಲವನ್ನು ಕಡಿಮೆ ಮಾಡಿ 30 ರಿಂದ 40% ತೆಗೆದುಹಾಕಿ ಅವರಿಗೆ ಎ.ಪಿ.ಎಲ್. ಕಾರ್ಡ್ ಕೊಟ್ಟಿದ್ದೀರಿ. ಅಧಿಕಾರಿಗಳಿಗೆ ತಾವು ಇದರಲ್ಲಿ ಯಾವ ರೀತಿಯ ಮಾರ್ಗದರ್ಶನವನ್ನೂ ಕೂಡ ಹೇಳಿಲ್ಲ. ಇದರಿಂದಾಗಿ ಸುಮಾರು 40 % ಜನರಿಗೆ ಬಹಳ ತೊಂದರೆಯಾಗಿದೆ. ಮೊದಲು ತಾವು ಆರ್.ಪಿ.ಐ ಅನ್ನು ಫಿಕ್ಸ್ ಮಾಡಬೇಕು. ಫಿಕ್ಸ್ ಮಾಡಿ 30 ಸಾವಿರ ಎಂದು ಹೇಳಿದ್ದಾರೆ. ಆದರೆ ಇದರಲ್ಲಿ ಸಿಟಿಗೆ ಒಂದು ಮತ್ತು ಗ್ರಾಮೀಣ ಪ್ರದೇಶಕ್ಕೆ ಒಂದು ಎಂದು ಫಿಕ್ಸ್ ಮಾಡುವುದಕ್ಕೆ ಆಗುವುದಿಲ್ಲ. ಹಿಂದೆ ಮಾನ್ಯ ಮುಖ್ಯಮಂತ್ರಿಗಳೇ ಹಲವು ಬಾರಿ ಅನೌನ್ಸ್‌ಮೆಂಟ್‌ನ್ನು ಏನು ಮಾಡಿದ್ದಾರೋ ಅದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಈ ವಿಚಾರದಲ್ಲಿ ವ್ಯಾಪಕವಾದಂಥ ಚರ್ಚೆಯನ್ನು ಮಾಡಿ ಈ ಗೊಂದಲವನ್ನು ನಿವಾರಣೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಿ. ಇದನ್ನು ನಿಲ್ಲಿಸಿ ಎಂದು ನಾವು ಹೇಳುವುದಿಲ್ಲ. ನೀವೇನು ಒಂದು ಹೊಸ ಪ್ರಯೋಗವನ್ನು ಮಾಡುತ್ತಿದ್ದರೆ ಅದನ್ನು ತಾವು ಮಾಡಿ. ಫಿಕ್ಸ್ ಮಾಡುವಾಗ ಸಬ್ಸಿಡಿ ಕೊಡುವುದಕ್ಕೆ ಹಣದ ತೊಂದರೆಯಾಗುತ್ತದೆಂದು ಹೇಳಿಕೊಂಡು ಸರ್ಕಾರದಲ್ಲಿ ಈ ಹಣವನ್ನು ಭರಿಸುವುದಕ್ಕೆ ತೊಂದರೆಯಾಗುತ್ತದೆಂದು ಹೇಳಿ ಈಗಾಗಲೇ ಏನು ಒಂದು ಕ್ರಮವನ್ನು ಸರ್ಕಾರ ತೆಗೆದುಕೊಂಡಿದೆ ಈ ಬಗ್ಗೆ ಇಡೀ ರಾಜ್ಯದಲ್ಲಿ ದೊಡ್ಡ ಗೊಂದಲವಾಗಿದೆ. ಯಾರು ಬಡವರಿಗೆ ಸಿಗಬೇಕೋ ಅವರಿಗೆ ಸಿಗುತ್ತಿಲ್ಲ. ಆದುದರಿಂದ ಇದರ ಬಗ್ಗೆ ಒಂದು ವಿಶೇಷವಾದಂಥ ಚರ್ಚೆಯನ್ನು ಮಾಡಲು ಎಲ್ಲಾ ಸದಸ್ಯರಿಗೂ ಕೂಡ ಒಂದು ಅವಕಾಶವನ್ನು ಮಾಡಿಕೊಟ್ಟು

ಹೊಸದಾಗಿ ಕಾರ್ಡ್ ಯಾರ್ಯಾರಿಗೆ ಸಿಕ್ಕಿಲ್ಲವೋ, ಎ.ಪಿ.ಎಲ್. ಕಾರ್ಡ್‌ಗಳನ್ನು ಸೈಡ್‌ಗಿಟ್ಟು ಹೊಸದಾಗಿ ಅವರಿಗೂ ಕೂಡ ಅರ್ಜಿಯನ್ನು ಹಾಕಿಕೊಳ್ಳುವುದಕ್ಕೆ ಒಂದು ಅವಕಾಶವನ್ನು ಮಾಡಿಕೊಡಬೇಕೆಂದು ಸರ್ಕಾರಕ್ಕೆ ನಾನು ತಮ್ಮ ಮುಖೇನ ಒತ್ತಾಯವನ್ನು ಮಾಡುತ್ತೇನೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ(ಚಿಕ್ಕೋಡಿ:ಸದಲಗ) :-ಮಾನ್ಯ ಅಧ್ಯಕ್ಷರೆ, ಮೊಟ್ಟ ಮೊದಲನೆಯದಾಗಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಈ ಎ.ಪಿ.ಎಲ್., ಬಿ.ಪಿ.ಎಲ್. ಕಾರ್ಡ್ ವಿಚಾರದಲ್ಲಿ ಎಲ್ಲಾ ಶಾಸಕರಿಗೆ ನೋವು ಬಂದಂತಾಗಿದೆ. ನಮ್ಮ ತಾಲ್ಲೂಕಿನಲ್ಲಿ ಮನೆ ಮನೆಗೆ ಹೋಗಿ ಸರ್ವೆ ಮಾಡಿ ಬಿ.ಪಿ.ಎಲ್. ಕಾರ್ಡ್‌ಗಳನ್ನು ಹಿಂದೆ ಹಂಚಿಕೆ ಮಾಡಿದ್ದಾರೆ. ಆಮೇಲೆ ತಹಶೀಲ್ದಾರರು ಸುಮಾರು 20 ಸಾವಿರ ಬಿ.ಪಿ.ಎಲ್.ಕಾರ್ಡ್‌ಗಳನ್ನು ಹೊಂದಿರುವವರು ಅನರ್ಹರಿದ್ದಾರೆಂದು ಹೇಳಿ ಅವರನ್ನು ಎ.ಪಿ.ಎಲ್. ಕಾರ್ಡ್‌ಗೆ ಬರುವಂತೆ ಮಾರ್ಪಾಟನ್ನು ಮಾಡಿದರು. ಈ ರೀತಿ ಏಕೆ ಮಾಡಲಾಯಿತು ಎಂಬ ಬಗ್ಗೆ ಕಾರಣವನ್ನು ಅವರು ಕೊಡಲೇ ಇಲ್ಲ. ಚಿಕ್ಕೋಡಿ ತಾಲ್ಲೂಕಿನಲ್ಲಿ ಈ ರೀತಿ 20 ಸಾವಿರ ಬಿ.ಪಿ.ಎಲ್. ಕಾರ್ಡ್‌ಗಳನ್ನು ಏಕೆ ರದ್ದು ಮಾಡಿದರು ಮತ್ತು ಇದನ್ನು ಎ.ಪಿ.ಎಲ್. ಕಾರ್ಡ್‌ಗಳಿಗೆ ಏಕೆ ಮಾರ್ಪಾಟು ಮಾಡಿದರು ಎಂಬ ಬಗ್ಗೆ ಪ್ರತಿಯೊಂದು ಸಭೆಯಲ್ಲಿಯೂ ಕೂಡ ನಾನು ಕೇಳುತ್ತಿದ್ದೇನೆ. ಇದಕ್ಕೆ ಸರಿಯಾದ ಉತ್ತರ ಇದುವರೆಗೂ ನಮಗೆ ಸಿಕ್ಕಿಲ್ಲ. ಈಗ ಮತ್ತೆ ಆ 20 ಸಾವಿರ ಎ.ಪಿ.ಎಲ್. ಕಾರ್ಡ್‌ನವರು ಮತ್ತೆ ನೆಮ್ಮದಿ ಕೇಂದ್ರಕ್ಕೆ ಹೋಗಿ ಅರ್ಜಿಯನ್ನು ಕೊಡುವುದಾದರೆ ಆ 20 ಸಾವಿರ ಕುಟುಂಬದವರು ಹೋಗಿ ಕ್ಯೂನಲ್ಲಿ ನಿಂತರೆ ಒಂದು ದಿವಸ, ಎರಡು ದಿವಸ, ಮೂರು ದಿವಸ ನಿಂತು ಅಲ್ಲಿ ಒಂದು ರೀತಿಯಲ್ಲಿ ದೊಡ್ಡ ಗದ್ದಲವೇ ಪ್ರಾರಂಭವಾಗಿದೆ. ಅದನ್ನು ನಿಯಂತ್ರಿಸುವುದೇ ನಮಗೆ ಒಂದು ದೊಡ್ಡ ತ್ರಾಸ ಆಗಿದೆ. ದಯವಿಟ್ಟು ಈ ಬಗ್ಗೆ ಯಾವುದಾದರೂ ಒಂದು ಹೊಸ ಪದ್ಧತಿಯನ್ನು ತಂದು ಕಡು ಬಡವರಿಗೆ ಬಿ.ಪಿ.ಎಲ್. ಕಾರ್ಡ್ ಕೊಡುವಂಥ ಪ್ರಾಮಾಣಿಕ ವ್ಯವಸ್ಥೆಯನ್ನು ದಯವಿಟ್ಟು ಸರ್ಕಾರ ಮಾಡಬೇಕು. ಈ ಬಗ್ಗೆ ಒಮ್ಮೆ ಹೊಸ ಸರ್ಕಾರ ಬಂದಾಗ ಒಂದು ಹೊಸ ಸೂಚನೆಯನ್ನು ತರುತ್ತದೆ. ಮತ್ತೊಂದು ಸರ್ಕಾರ ಬಂದಾಗ ಮತ್ತೊಂದು ಹೊಸ ಸೂಚನೆಯನ್ನು ತರುತ್ತದೆ. ಪ್ರತಿ ಬಾರಿ ಸರ್ಕಾರ ಬದಲಾವಣೆಯಾದಾಗ ಹೊಸ ಹೊಸ ನಿಯಮಗಳನ್ನು ತಂದು ಇದುವರೆವಿಗೂ ಕೂಡ ಬಡವರಿಗೆ ಬಿ.ಪಿ.ಎಲ್. ಕಾರ್ಡ್ ಸಿಕ್ಕೇ ಇಲ್ಲ. ಕೇವಲ ಅರ್ಜಿ ಹಾಕುವುದು, ತಹಶೀಲ್ದಾರರ ಕಡೆ ಹೋಗುವುದು, ಆ ಅರ್ಜಿಯನ್ನು ತಹಶೀಲ್ದಾರರು

ಗ್ರಾಮ ಪಂಚಾಯತಿ ಕಾರ್ಯದರ್ಶಿ ಕಡೆ ಕಳುಹಿಸುವುದು. ಅವರು ಅರ್ಹರಿರುತ್ತಾರೋ, ಇಲ್ಲವೋ, ಹೀಗೆ ಎಲ್ಲಿಯೂ ಕಾರ್ಡ್ ಸಿಗದೆ ಕಡೆಗೆ ನಮ್ಮ ಹತ್ತಿರ ಬರುತ್ತಾರೆ. ನಮ್ಮ ಹತ್ತಿರ ಬಂದು ಶಿಫಾರಸ್ಸು ಪತ್ರ ಕೊಡಿ ಎಂದು ಬರುತ್ತಾರೆ. ನಾವು ಹೇಗೆ ಪತ್ರ ಕೊಡಲು ಬರುತ್ತದೆ ಹೇಳಿ. ಏಕೆಂದರೆ ಅವರು ಅರ್ಹರಿದ್ದಾರೋ ಅಥವಾ ಇಲ್ಲವೋ ಎಂಬ ಬಗ್ಗೆ ನಮಗೆ ಗೊತ್ತಿರುವುದಿಲ್ಲ. ಆದುದರಿಂದ ದಯವಿಟ್ಟು ಇದರ ಬಗ್ಗೆ ಕೂಲಂಕುಷವಾಗಿ ಚರ್ಚೆ ಮಾಡಿ ಮಾನ್ಯ ಸಚಿವರು ಬಡವರಿಗೆ ಪ್ರಾಮಾಣಿಕವಾಗಿ ಬಿ.ಪಿ.ಎಲ್. ಕಾರ್ಡ್‌ಗಳನ್ನು ಕೊಡುವ ಬಗ್ಗೆ ಪ್ರಾಮಾಣಿಕವಾದಂಥ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮಲ್ಲಿ ಕಳಕಳಿಯ ವಿನಂತಿಯನ್ನು ಮಾಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ) :-ಮಾನ್ಯ ಅಧ್ಯಕ್ಷರೆ, ಈಗಾಗಲೇ ಈ ಪಡಿತರ ಚೀಟಿ ಬಗ್ಗೆ ನಮ್ಮ ಆಹಾರ ಸಚಿವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ತಾತ್ಕಾಲಿಕವಾಗಿ ಕಾರ್ಡ್ ಎಂದು ಹೇಳಿದ್ದಾರೆ. ಅಂದರೆ ಇದನ್ನು ಲೋಕಸಭಾ ಚುನಾವಣೆ ಮುಗಿಯುವವರೆವಿಗೂ ಮಾತ್ರ ಇಟ್ಟುಕೊಂಡಿರುತ್ತೀರೋ ಅಥವಾ ಇದನ್ನು ರದ್ದು ಮಾಡುವ ಬಗ್ಗೆ ಕಾರ್ಯಕ್ರಮವನ್ನೇನಾದರೂ ಬಜೆಟ್‌ನಲ್ಲಿ ಇಡುತ್ತೀರ ಎಂಬ ಬಗ್ಗೆ ಆಹಾರ ಸಚಿವರು ಹೇಳಬೇಕು. ಇದರ ಜೊತೆಗೆ ತಹಶೀಲ್ದಾರ್‌ರವರಿಗೆ ಕಾರ್ಡ್ ಬಗ್ಗೆ ಒಂದು ಕಟ್ಟುನಿಟ್ಟಿನ ಸೂಚನೆಯನ್ನು ಕೊಡಬೇಕು. ಏಕೆಂದರೆ ಈಗಾಗಲೇ ಶಿವಕುಮಾರ್‌ರವರು ಹೇಳಿದರು. ಎ.ಪಿ.ಎಲ್. ಇರುವವರಿಗೆ ಬಿ.ಪಿ.ಎಲ್ ಮಾಡಿದ್ದಾರೆ, ಬಿ.ಪಿ.ಎಲ್. ಇರುವವರಿಗೂ ಎ.ಪಿ.ಎಲ್. ಮಾಡಿದ್ದಾರೆಂದು. ಇದರ ಜೊತೆಗೆ ಹಿಂದೆ ಬಿ.ಪಿ.ಎಲ್. ಕಾರ್ಡ್‌ನ್ನು ಹೊಂದಿದ್ದದವರ ಪಟ್ಟಿಯನ್ನು ಕಿತ್ತು ಹಾಕಿದ್ದಾರೆ. ಪರ್ಸೆಂಟೇಜ್ ಎಂದು ಹೇಳಿ 60%, 70% ಎಂದು ಹೇಳಿ ಅದನ್ನೆಲ್ಲಾ ಕಿತ್ತುಹಾಕಿದ್ದಾರೆ. ಇವೊತ್ತಿನವರೆವಿಗೂ ಕಾರ್ಡ್‌ನ್ನು ಕೊಡುವುದಕ್ಕೆ ಇವರಿಗೆ ಆಗಿಲ್ಲ. ಈಗ ಸದನದಲ್ಲಿ ಹಿಂದೆ ಆಹಾರ ಸಚಿವರಾಗಿದ್ದ ಮಹದೇವಪ್ರಸಾದ್‌ರವರು ಇದ್ದಾರೆ, ಮಾನ್ಯ ಕಾಜೋ೯ಳ್‌ರವರು ಕೂಡ ಇದ್ದಾರೆ. ಇನ್ನು ಎಷ್ಟು ದಿವಸದಲ್ಲಿ ತಾತ್ಕಾಲಿಕ ಕಾರ್ಡ್‌ನ್ನು ಕೊಡುತ್ತೀರಿ ಎಂಬ ಬಗ್ಗೆ ಹೇಳಬೇಕು. ಅಧಿಕಾರಿಗಳು ಈ ಕಾರ್ಡ್‌ನ್ನು ಕೊಡದಿದ್ದರೆ ಅವರ ಮೇಲೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರ ಎಂಬ ಬಗ್ಗೆ ಹೇಳಬೇಕು. ತಾತ್ಕಾಲಿಕ ಕಾರ್ಡ್‌ನ್ನು ಕೊಡುವುದಾದರೆ ಅದನ್ನು ಕೊಡುವ ಸಂಬಂಧ ಅಧಿಕಾರಿಗಳು ಏನಾದರೂ ಲೋಪ ಮಾಡಿದರೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಯು.ಟಿ. ಖಾದರ್ (ಉಳ್ಳಾಳ) :-ಮಾನ್ಯ ಅಧ್ಯಕ್ಷರೆ, ಪಡಿತರ ಚೀಟಿಯನ್ನು ಬಡವರು ಪಡೆಯಬೇಕಾದರೆ ಅರ್ಜಿಯನ್ನು ಹಾಕಲು ನೆಮ್ಮದಿ ಕೇಂದ್ರವನ್ನು ಸ್ಥಾಪನೆ ಮಾಡಿದ್ದಾರೆ. ಆದರೆ ಇಂದು ಈ ನೆಮ್ಮದಿ ಕೇಂದ್ರ ನೆಮ್ಮದಿಯನ್ನು ಕೆಡಿಸುವ ರೀತಿಯಲ್ಲಿ ಕೆಲಸ ಮಾಡುತ್ತಿದೆಯೆಂದು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಈ ಮೊದಲು ನೆಮ್ಮದಿ ಕೇಂದ್ರಕ್ಕೆ ಕೇವಲ ಆರ್.ಟಿ.ಸಿ. ಗೆ ಸಂಬಂಧಪಟ್ಟಂತೆ ಮಾತ್ರ ಕೆಲಸ ಮಾಡಲು ಅವಕಾಶವನ್ನು ಕಲ್ಪಿಸಲಾಗಿತ್ತು. ಆಗ ಲಾಭದಾಯಕವೆಂದು ಹೇಳಿ ಒಂದು ಸಂಘ ಮಾಡಿ ಕಂಪ್ಯೂಟರ್ ಕೊಟ್ಟು ದಾಖಲೆ ಇಡಲು ಪ್ರಾರಂಭ ಮಾಡಲಾಯಿತು. ಅದರಲ್ಲಿದ್ದ ಅಧಿಕಾರಿಗಳು ಸುತ್ತೋಲೆಯನ್ನು ಮಾಡಿರುವುದರಿಂದ ಈಗ ಪಡಿತರ ಚೀಟಿ, ಆದಾಯ ಪತ್ರ ಮತ್ತಿತರ ಎಲ್ಲ ದಾಖಲೆ ಪಡೆಯಲು ನೆಮ್ಮದಿ ಕೇಂದ್ರಕ್ಕೆ ಅರ್ಜಿ ಹಾಕಬೇಕಾಗಿದೆ. ಅಲ್ಲಿ ಪಡಿತರ ಚೀಟಿಗೆ ಅರ್ಜಿ ಹಾಕಲು ಬಡವರು ಹೋಗಬೇಕು. ಒಂದು ಹೋಬಳಿಗೆ ಒಂದು ನೆಮ್ಮದಿ ಕೇಂದ್ರವಿದೆ. ಗ್ರಾಮೀಣ ಜನರು ಅರ್ಜಿ ಸಲ್ಲಿಸಲು ಹೋದರೆ ಮಹಿಳೆಯರು ಅಲ್ಲಿ ಕುಳಿತುಕೊಳ್ಳುವುದಕ್ಕೂ ಕೂಡ ಸರಿಯಾದ ಸ್ಥಳವಿಲ್ಲ. ಕುಡಿಯುವುದಕ್ಕೆ ನೀರು ಸಹ ಸಿಗುವುದಿಲ್ಲ. ಬೆಳಿಗ್ಗೆಯಿಂದ ಸಂಜೆಯವರೆಗೂ ಕಾಯುವಂಥ ಪರಿಸ್ಥಿತಿ ಇದೆ. ನೆಮ್ಮದಿ ಕೇಂದ್ರದಲ್ಲಿ ಕರೆಂಟ್ ಹೋದರೆ ಬದಲಿ ವ್ಯವಸ್ಥೆ ಜನರೇಟರ್ ಕೂಡ ಕಂಪ್ಯೂಟರ್ ರನ್ ಆಗಲು ಇಲ್ಲ. ಈ ಬಗ್ಗೆ ಡಿ.ಸಿ.ಯವರ ಹತ್ತಿರ ಮತ್ತು ಆಹಾರ ಇಲಾಖೆಯ ಅಧಿಕಾರಿಗಳೊಂದಿಗೆ ಮಾತನಾಡಿದರೂ ಕೂಡ ಈ ಸೌಲಭ್ಯಗಳನ್ನು ಒದಗಿಸಿಕೊಡುತ್ತೇವೆಂದು ಹೇಳಿದ್ದಾರೆಯೇ ವಿನ: ಇದುವರೆಗೂ ಯಾವುದೇ ಒಂದು ಸವಲತ್ತು ಕೂಡ ಆಗಿಲ್ಲ. ಮಾನ್ಯ ಆಹಾರ ಸಚಿವರನ್ನೇ ನಾನು ಕೇಳುವುದೇನೆಂದರೆ, ಈ ನೆಮ್ಮದಿ ಕೇಂದ್ರ ಸ್ಥಾಪನೆ ಮಾಡಿದ್ದು ಬಡ ಜನರಿಗೆ ಸಹಾಯ ಮಾಡುವುದಕ್ಕೋಸ್ಕರವೋ ಅಥವಾ ಈ ನೆಮ್ಮದಿ ಕೇಂದ್ರದಲ್ಲಿ ಕಂಪ್ಯೂಟರ್ ಸಿಸ್ಟಂ ಅನ್ನು ಅಳವಡಿಸಿರುವ ಸಂಸ್ಥೆಯವರೇನಾದರೂ ಹಣವನ್ನು ಮಾಡಿಕೊಳ್ಳುವುದಕ್ಕೋ ಎನ್ನುವ ಬಗ್ಗೆ ಆಲೋಚನೆಯನ್ನು ಮಾಡಬೇಕಾಗಿದೆ. ಆದುದರಿಂದ ನನ್ನ ಕಳಕಳಿಯ ಮನವಿಯೆಂದರೆ ಇಂಥ ನೆಮ್ಮದಿ ಕೇಂದ್ರದಿಂದ ಬಡವರಿಗೆ ಆಗುತ್ತಿರುವಂಥ ತೊಂದರೆ ಬಗ್ಗೆ ವಿಶೇಷವಾಗಿ ಚರ್ಚಿಸಬೇಕು. ಅಧಿಕಾರಿಗಳು ಯಾವ ರೀತಿಯಲ್ಲಿದ್ದಾರೆಂದರೆ ಕರಾವಳಿ ಉತ್ಸವ, ಇನ್ನಿತರ ಉತ್ಸವ ಮಾಡಬೇಕಾದರೆ ದಿವಸಕ್ಕೆ ಎರಡು ಗಂಟೆಗಳ ಕಾಲ ಮೀಟಿಂಗ್ ಮಾಡುತ್ತಾರೆ. ಆದರೆ ಜನ ಸಾಮಾನ್ಯರ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಯಾವುದೇ ರೀತಿಯ ಕ್ರಮವನ್ನು ತೆಗೆದುಕೊಳ್ಳದಿರುವುದು ಬೇಸರ

ತರುವಂಥ ವಿಷಯವಾಗಿದೆ. ಆದುದರಿಂದ ನನ್ನ ಕಳಕಳಿಯ ಮನವಿಯೆಂದರೆ ಯಾವ ರೀತಿಯಲ್ಲಿ ಬಡವರಿಗೆ ಈ ನೆಮ್ಮದಿ ಕೇಂದ್ರದಿಂದ ತೊಂದರೆಗಳಾಗುತ್ತಿವೆಯೋ ಅದನ್ನು ತಿಳಿದು ತಕ್ಷಣವೇ ಇದರ ಬಗ್ಗೆ ವಿಶೇಷವಾದ ನಿಯಮಗಳನ್ನು ರೂಪಿಸಿ ಸಾಮಾನ್ಯ ಜನರಿಗೆ ಕಾರ್ಯಕ್ರಮಗಳನ್ನು ರೂಪಿಸಬೇಕು. ಇವೊತ್ತು ನನ್ನ ಒಂದೇ ಒಂದು ಕೋರಿಕೆ ಏನೆಂದರೆ, ಜನಸಾಮಾನ್ಯರಿಗೆ, ಬಡವರಿಗೆ ಏನಾದರೂ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದಕ್ಕೆ ಅನುದಾನವೇನೂ ಬೇಕಾಗಿಲ್ಲ. ಅದಕ್ಕೆ ಬೇಕಾಗಿರುವುದು ಸಮಯ ಮಾತ್ರ. ಈ ಸಮಯವನ್ನು ಮಾಡಿಕೊಂಡು ಇಂಥ ಒಂದು ವಿಶೇಷವಾದ ಕಾರ್ಯಕ್ರಮವನ್ನು ಸರಿಯಾದ ರೀತಿಯಲ್ಲಿ ಜಾರಿಗೆ ತಂದು ಜನರಿಗೆ ಉಪಕಾರ ಮಾಡುವ ಕಳಕಳಿ ಅಧಿಕಾರಿಗಳಲ್ಲಿ ಇರಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

(ಈ ಹಂತದಲ್ಲಿ ಅನೇಕ ಶಾಸಕರು ತಮಗೆ ಮಾತನಾಡಲು ಅವಕಾಶ ಕೊಡಬೇಕೆಂದು ಎದ್ದುನಿಂತು ಅಧ್ಯಕ್ಷರಲ್ಲಿ ಮನವಿ ಮಾಡುತ್ತಿದ್ದರು)

ಅಧ್ಯಕ್ಷರು :-ಎಲ್ಲರಿಗೂ ಅವಕಾಶ ಕೊಡುತ್ತೇನೆ. ಸದಸ್ಯರಲ್ಲಿ ನನ್ನದೊಂದು ಮನವಿಯೆಂದರೆ, ಈ ವಿಷಯ ಸಾರ್ವಜನಿಕ ಮಹತ್ವವಿರುವುದರಿಂದ ಬಹಳಷ್ಟು ಶಾಸಕರು ಚರ್ಚೆಯಲ್ಲಿ ಭಾಗವಹಿಸಿ ಸ್ಪಷ್ಟೀಕರಣವನ್ನು ಕೇಳ ಬಯಸುತ್ತಿದ್ದಾರೆ. ಆದರೆ ಎಲ್ಲರೂ ಹೇಳಿದ ವಿಷಯವನ್ನೇ ರಿಪೀಟ್ ಮಾಡುವುದು ಬೇಡ. ಕೇವಲ ಸ್ಪಷ್ಟೀಕರಣದ ರೀತಿಯಲ್ಲಿ ಸದಸ್ಯರು ಕೇಳಿದರೆ ಅದಕ್ಕೆ ಹೆಚ್ಚು ಒತ್ತು ಕೊಟ್ಟಂತಾಗುತ್ತದೆ. ನಾನು ಎಲ್ಲರಿಗೂ ಅವಕಾಶ ಕೊಡುತ್ತೇನೆ. ಸಂಕ್ಷಿಪ್ತವಾಗಿ ತಾವು ಪ್ರಸ್ತಾಪ ಮಾಡಿದರೆ ಎಲ್ಲರಿಗೂ ಅವಕಾಶ ಕೊಡುತ್ತೇನೆ. ಈಗ ಮಹದೇವಪ್ರಸಾದ್‌ರವರು ಮಾತನಾಡಲಿ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಗುಂಡ್ಲುಪೇಟೆ) :-ಮಾನ್ಯ ಅಧ್ಯಕ್ಷರೆ, ಈ ಪಡಿತರ ಚೀಟಿ ವಿಚಾರದಲ್ಲಿ ಗೊಂದಲ ಕಳೆದ ನಾಲ್ಕೈದು ವರ್ಷಗಳಿಂದ ನಿರಂತರವಾಗಿ ಕಾಡುತ್ತಿದೆ. ಯಾವಾಗ ಹಿಂದೆ 2005 ರಲಿದ್ದ ರಾಜ್ಯ ಸರ್ಕಾರ ಮೂರು ರೂಪಾಯಿಗಳಿಗೆ ಒಂದು ಕೆ.ಜಿ. ಅಕ್ಕಿಯನ್ನು ಕೊಡುವುದಾಗಿ ಘೋಷಣೆಯನ್ನು ಮಾಡಿ ಅದನ್ನು ಜಾರಿಗೆ ತರಲಾಯಿತೋ ಅವೊತ್ತಿನಿಂದ ಈ ಪಡಿತರ ಚೀಟಿಗೆ ಅದರಲ್ಲಿಯೂ ಬಿ.ಪಿ.ಎಲ್. ಕಾರ್ಡಿಗೆ ಹೆಚ್ಚಿನ ಬೇಡಿಕೆ ಪ್ರಾರಂಭವಾಗಿದೆ. ಆ ಒಂದು ಕಾರಣದಿಂದ 2005 ರಲ್ಲಿ ಪಡಿತರ ಚೀಟಿಯನ್ನು ವಿತರಣೆ ಮಾಡುವ ಸಲುವಾಗಿ ಆಹಾರ ಇಲಾಖೆಯಿಂದ ಕಸರ್ವ ಕುಟುಂಬ ಸಮೀಕ್ಷೆಕಿ ಯನ್ನು ಮಾಡಲು

ಸರ್ವೆ ಕಂಡಕ್ಟ್ ಮಾಡಿತು. ಅದರ ಪ್ರಕಾರ 1 ಕೋಟಿ 23 ಸಾವಿರಕ್ಕೂ ಹೆಚ್ಚು ಕುಟುಂಬ ಗಳನ್ನು ಗುರುತಿಸಲಾಯಿತು. ಇಷ್ಟಾದರೂ ಕೂಡ 2001ರ ಜನಗಣತಿ ಏನು ಇದೆ ಅದಕ್ಕಿಂತಲೂ ಸುಮಾರು 20 ಲಕ್ಷ ಕುಟುಂಬಗಳು ಅಪ್ಪೊತ್ತಿನ ದಿವಸಗಳ ಸಮೀಕ್ಷೆಯಲ್ಲಿ ಹೆಚ್ಚು ಕಂಡುಬಂದರೂ ಕೂಡ ಅವರಿಗೆಲ್ಲರಿಗೂ ಪಡಿತರ ಚೀಟಿ ವಿತರಣೆ ಮಾಡುತ್ತಿದ್ದರೂ ಕೂಡ ಅದು ಹಾಗೆಯೇ ನಿಂತಿತು. ಈ ಜಿ-9 ಅಡಿಯಲ್ಲಿ ಸುಮಾರು 10 ಲಕ್ಷ 70 ಸಾವಿರ ಕುಟುಂಬಗಳನ್ನು ಮತ್ತೆ ಗುರುತಿಸಿ ಅವರಿಗೂ ಕೂಡ ಸರ್ಕಾರ ಕಾರ್ಡ್‌ನ್ನು ವಿತರಣೆಯನ್ನು ಮಾಡಿದೆ.

ಇದೆಲ್ಲಾ ಸೇರಿದರೂ ಕೂಡ 1,33,000,00 ಕುಟುಂಬಗಳು ಇವೆಯೆಂದು ಮಾನ್ಯ ಮಂತ್ರಿಗಳು ಉತ್ತರದಲ್ಲಿ ಹೇಳಿದ್ದಾರೆ. ಜನಗಣತಿಯಲ್ಲಿ ಇರುವಂತಹ ಕುಟುಂಬದ ಸಂಖ್ಯೆಗೂ ಹಾಗೂ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿರುವಂತಹ ಸಂಖ್ಯೆಗೂ ನೋಡಿದರೆ ಸುಮಾರು 30,000,00 ಕುಟುಂಬಗಳ ಸಂಖ್ಯೆ ಈ ರಾಜ್ಯದಲ್ಲಿ ಹೆಚ್ಚು ಇದೆಯೆಂದು ಗೊತ್ತಾಗುತ್ತಿದೆ. ಇದರ ಹಿನ್ನೆಲೆಯಲ್ಲಿ ಸಾಮಾನ್ಯ ಜನ ಈ ಒಂದು ರಿಯಾಯಿತಿ ದರದಲ್ಲಿ ಪಡಿತರ ಪದಾರ್ಥ ಏನು ಸಿಗುತ್ತಿದೆ, ಆ ಪಡಿತರದ ಸೌಲಭ್ಯಗಳು ನಮಗೂ ಸಿಗಬೇಕೆನ್ನುವ ಆಕಾಂಕ್ಷೆಯಿಂದ ಇದರ ಪಟ್ಟಿ ದಿನೇ ದಿನೇ ಬೆಳೆಯುತ್ತಿದೆ. ಕಳೆದ ನಾಲ್ಕು ವರ್ಷಗಳಿಂದ ಅನೇಕ ಬಾರಿ ಪರಿಷ್ಕರಣೆ ಮಾಡುವಂತಹ ಕಾರ್ಯಕ್ರಮಗಳನ್ನು ಎಲ್ಲಾ ಸರ್ಕಾರಗಳು ಕೈಗೊಂಡಿದ್ದರೂ ಕೂಡ ಈ ಸಮಸ್ಯೆಯನ್ನು ಪೂರ್ಣವಾಗಿ ನಿವಾರಣೆ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಇವತ್ತು ಕೂಡ ಇದಕ್ಕೆ ಇನ್ನು ಹೆಚ್ಚು ಗೊಂದಲ ಸೃಷ್ಟಿಯುಂಟಾಗುವ ರೀತಿಯಲ್ಲಿ ನಡೆದಿದ್ದು, ನೆಮ್ಮದಿ ಕೇಂದ್ರಗಳ ಮುಖಾಂತರ ಅರ್ಜಿಗಳನ್ನು ವಿಲೇವಾರಿ ಮಾಡುವಂತಹ ಕಾರ್ಯಕ್ರಮ ಗಳನ್ನು ರೂಪಿಸಿ, ಅದಕ್ಕೆ ಎರಡು ಬಾರಿ ಅದರ ದಿನಾಂಕವನ್ನು ಮುಂದೂಡಿ, ಮತ್ತೇ ಅದಕ್ಕೆ ಕಾಲಾವಕಾಶವನ್ನು ವಿಸ್ತರಿಸಿದ್ದೇವೆನ್ನುವುದಕ್ಕೆ ಇನ್ನೂ ಸರ್ಕಾರಿ ಆದೇಶವಾಗಿಲ್ಲ. ಅದನ್ನು ಈ ಸುತ್ತೋಲೆಯಲ್ಲಿ ತಿಳಿಸಿದ್ದಾರೆ. ಈಗಾಗಲೇ ಈ ರಾಜ್ಯದಲ್ಲಿ 5,48,000,00 ಅರ್ಜಿಗಳು ವಿಲೇವಾರಿ ಯಾಗಿದ್ದು, ಇವೆಲ್ಲವೂ ಕೂಡ BPL card ಕೋರಿ ಬಂದಿರುವ ಅರ್ಜಿಗಳೇ ಹೊರತು APL card ಬೇಕೆಂದು ಯಾರು ನೆಮ್ಮದಿ ಕೇಂದ್ರಗಳಿಗೆ ಹೋಗಿ ಅರ್ಜಿಗಳನ್ನು ತೆಗೆದುಕೊಂಡು affidavit ಕೊಟ್ಟು card ತೆಗೆದುಕೊಳ್ಳುವುದಕ್ಕೆ ಹೋಗಿಲ್ಲ. ಇನ್ನು 5,000,00 cardಗಳಿಗೆ ಬೇಡಿಕೆ ರಾಜ್ಯಸರ್ಕಾರದ ಮುಂದೆ ಇದೆ. ಇದೆಲ್ಲಾ ಸೇರಿದರೆ 1,50,000,00 ಕುಟುಂಬಗಳಿಗೆ BPL cardಗೆ ಬೇಡಿಕೆ ಇದೆ. ಈ ನೆಮ್ಮದಿ ಕೇಂದ್ರಗಳು ಸಣ್ಣ ಸಣ್ಣ

ಮಳಿಗೆಗಳಂತೆ ಹೋಬಳಿಗಳಲ್ಲಿ ಮಾಡಿದ್ದಾರೆ. ಈಗಾಗಲೇ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ ಹಾಗೆ ಅಲ್ಲಿ voltage ಸಮಸ್ಯೆ ಇದೆ. ಅಲ್ಲಿ ಒಬ್ಬಿಬ್ಬರು ಸಿಬ್ಬಂದಿಯಿದ್ದು, ಅಲ್ಲಿಗೆ ಸಾವಿರಾರು ಜನ ಕ್ಯೂನಲ್ಲಿ ಮಕ್ಕಳನ್ನು ಹೆಗಲ ಮೇಲೆ ಹಾಗೂ ಕಂಕುಳಿನಲ್ಲಿ ಎತ್ತಿಕೊಂಡು ಬೆಳಗ್ಗೆಯಿಂದ ಸಾಯಂಕಾಲದವರಿಗೂ ಅರ್ಜಿ ಹಾಗೂ affidavit ಪಡೆಯುವುದಕ್ಕೆ 50 ರೂಪಾಯಿಯನ್ನು ದಿನದ ಬಡ್ಡಿಯಲ್ಲಿ ಹಣವನ್ನು ತೆಗೆದುಕೊಂಡು ಬಂದು ನಿಂತುಕೊಂಡು ಕಾಯುತ್ತಿರುವಂತಹ ಸನ್ನಿವೇಶ ಇದೆ. ಇಂತಹ ಒಂದು ಸಂದರ್ಭದಲ್ಲಿ ಬಡಜನರ ಜೊತೆ ಚೆಲ್ಲಾಟವಾಡುತಕ್ಕಂತ ಕೆಲಸ ಈ ಒಂದು ನೆಮ್ಮದಿ ಕೇಂದ್ರದ ಮುಖಾಂತರ ನಡೆಯುತ್ತಿದೆ. ಇವತ್ತು ಇದರ ಬಗ್ಗೆ ಸರಿಯಾದ ಪರಿಕಲ್ಪನೆ ಇಲ್ಲದೆ, ಸರ್ಕಾರ ಈ ಒಂದು ಕಾರ್ಯಕ್ರಮವನ್ನು ಜಾರಿಗೊಳಿಸುವಂತಹ ಒಂದು ಪ್ರಯತ್ನವನ್ನು ಮಾಡುತ್ತಿದೆ. ಇದರಿಂದ ಸಮಸ್ಯೆ ಇನ್ನೂ ಉಲ್ಬಣವಾಗುತ್ತದೆ ಹೊರತು, ಸಮಸ್ಯೆ ನಿವಾರಣೆ ಆಗುವಂತಹ ಕಾರ್ಯಕ್ರಮವಾಗುವುದಿಲ್ಲ. ನೆರೆಯ ರಾಜ್ಯವಾದ ತಮಿಳುನಾಡಿನಲ್ಲಿ ಒಂದು ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಯಾರು income tax payer ಇದ್ದಾರೆ, ಸರ್ಕಾರಿ ನೌಕರರಿದ್ದಾರೆ, ಅವರನ್ನು ಹೊರತುಪಡಿಸಿ ಈ ರೀತಿಯ ಗೊಂದಲ ತಾಳಲಾರದೆ ಯಾರು BPL cardನ್ನು ಅಪೇಕ್ಷೆ ಪಡುತ್ತಾರೆ, ಅವರಿಗೆಲ್ಲ card ವಿತರಣೆ ಮಾಡಿದ್ದಾರೆ. ಎಲ್ಲರಿಗೂ ಹತ್ತು ಕೆ.ಜಿ ಅಕ್ಕಿಯನ್ನು ಪುಕ್ಕಟೆಯಾಗಿ ಕೊಡುತ್ತಾರೆ, ಇನ್ನು ಹತ್ತು ಕೆ.ಜಿ. ಅಕ್ಕಿಯನ್ನು ಎರಡು ರೂಪಾಯಿಯ ದರದಲ್ಲಿ ಕೊಡುತ್ತಾರೆ. ಅದರ ಜೊತೆಗೆ ಎಲ್ಲರಿಗೂ ಉಚಿತವಾಗಿ ಒಂದೊಂದು TVಯನ್ನು ಕೊಟ್ಟಿದ್ದಾರೆ. ನಮ್ಮ ಸರ್ಕಾರದವರು ಕೂಡ ಈ ಗೊಂದಲವನ್ನು ನಿವಾರಣೆ ಮಾಡಬೇಕೆಂದಿದ್ದರೆ, ಇದಕ್ಕೆ ಒಂದು ಸ್ಪಷ್ಟವಾದ ಉತ್ತರವನ್ನು ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಕೊಡಬೇಕೆ ಹೊರತು, ಇದರಲ್ಲಿ ಕೇವಲ ಆಹಾರ ಇಲಾಖೆ ಮಾತ್ರ involve ಆಗಿಲ್ಲ. ಕಂದಾಯ ಇಲಾಖೆಯ ಪೂರ್ಣ ಜವಾಬ್ದಾರಿ ಅದರ ಮೇಲಿದೆ. ಇದನ್ನು ವಿತರಣೆ ಮಾಡುವಂತಹ ಜವಾಬ್ದಾರಿಯನ್ನು ಗ್ರಾಮೀಣಾಭಿವೃದ್ಧಿ ಇಲಾಖೆ ವಹಿಸಿಕೊಂಡಿದೆ. ಹಾಗಾಗಿ ಮೂರ್‍ನಾಲ್ಕು ಇಲಾಖೆಗಳು public distribution ಕಾರ್ಯಕ್ರಮದ ಅಡಿಯಲ್ಲಿ ಬರುವುದರಿಂದ, ಇದಕ್ಕೆ ಕೇವಲ ಆಹಾರ ಸಚಿವರ ಉತ್ತರದಿಂದ ಸಮಾಧಾನ ಪಡಿಸುತ್ತೇವೆ ಎನ್ನುವುದಾಗಲಿ, ಜನರಿಗೆ ಈ ಗೊಂದಲವನ್ನು ನಿವಾರಣೆ ಮಾಡುತ್ತೇವೆನ್ನುವುದಾಗಲಿ ಸಾಧ್ಯವಿಲ್ಲದಿರುವಂತಹ ಮಾತಾಗಿದೆ. ಅದರ ಜೊತೆಗೆ ಈ BPL cardನ್ನು

ಬೇರೆ ರೀತಿಯ ಎಲ್ಲಾ ಸೌಲಭ್ಯಗಳನ್ನು ಎಂದರೆ ಆರೋಗ್ಯ ತಪಾಸಣೆಗೆ ಹೋಗಲಿ, ಪ್ರತಿಯೊಂದು ವಿಚಾರಕ್ಕೂ ಕೂಡ ಇದನ್ನು ಗುರುತಿನ ಚೀಟಿಯನ್ನಾಗಿ ಪರಿಗಣಿಸುತ್ತಿದ್ದಾರೆ. ಇದನ್ನು ಆ ರೀತಿ ಪರಿಗಣಿಸಬಾರದೆಂದು ಸರ್ಕಾರ ಸುತ್ತೋಲೆಯನ್ನು ತಂದಿದ್ದರೂ ಕೂಡ, ಬಡವರನ್ನು ಗುರುತಿಸುವುದಕ್ಕೆ ಪರ್ಯಾಯ ವ್ಯವಸ್ಥೆ ಏನು ಎನ್ನುವುದನ್ನು ಇವತ್ತಿಗೂ ಕೂಡ ಸ್ಪಷ್ಟವಾದ ನಿರ್ದೇಶನವನ್ನು ಸರ್ಕಾರ ಹೇಳಿಲ್ಲ ಹಾಗೂ ಸೂಚನೆಯನ್ನು ಕೊಟ್ಟಿಲ್ಲ. ನಾನು ಆಹಾರ ಇಲಾಖೆಯ ಸಚಿವನಾಗಿ ಇದ್ದ ಕಾರಣಕ್ಕಾಗಿ ಸರ್ಕಾರಕ್ಕೆ ಸಹಾಯವಾಗಲಿ ಎಂದು ಒಂದೆರಡು ಸಲಹೆ ಸೂಚನೆಗಳನ್ನು ಕೊಡುತ್ತಿದ್ದೇನೆ. ಆದುದರಿಂದ ಈ BPL card ಅನ್ನು ಯಾವುದೇ ರೀತಿಯ ಇತರೇ ಸೌಲಭ್ಯಗಳಿಗೆ ಬಳಕೆ ಮಾಡದಿರುವಂತಹ ರೀತಿಯಲ್ಲಿ ಎಲ್ಲಾ ಇಲಾಖೆಗಳಿಗೆ ಸೂಚನೆಯನ್ನು ಕೊಡಬೇಕು. ಬಡವರನ್ನು ಗುರುತಿಸುವಂತಹ ನಿಟ್ಟಿನಲ್ಲಿ ಸರ್ವೆ ಕುಟುಂಬ ಸಮೀಕ್ಷೆಯನ್ನು ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಹಿಂದೆ ಮಾಡಿದ್ದಾರೆ. ಅದನ್ನು ಬೇರೆ ಸೌಲಭ್ಯಗಳಿಗೆ ಬಳಕೆ ಮಾಡುವುದಕ್ಕೆ ಉಪಯೋಗ ಮಾಡಿ, ಇದನ್ನು ಕೇವಲ ಆಹಾರ ಪಡಿತರ ವಿತರಣೆಗೆ ಅಷ್ಟೇ ಸೀಮಿತ ಗೊಳಿಸುವಂತಹ ಒಂದು ಸ್ಪಷ್ಟವಾದ ನಿರ್ದೇಶನವನ್ನು ನೀಡಬೇಕು. ಈ ಗೊಂದಲ ಹೆಚ್ಚಾಗುವುದಕ್ಕೆ ಕಾರಣ ಮೊದಲು 20 ಕೆ.ಜಿ ಅಕ್ಕಿಯನ್ನು ಒಂದು ಕಾರ್ಡಿಗೆ ಕೊಡುವ ವ್ಯವಸ್ಥೆ ಇತ್ತು. ಆದರೆ ಈಗ ಒಂದು ಯುನಿಟ್‌ಗೆ 4 ಕೆ.ಜಿಯಂತೆ ನಿಗದಿಪಡಿಸಿದ ಮೇಲೆ ಹೆಚ್ಚು ಸದಸ್ಯರಿರುವಂತಹ ಎಷ್ಟೋ ಜನ ಕಾರ್ಡುದಾರರಿಗೆ 20 ಕೆ.ಜಿ.ಯಿಂದ ನಾಲ್ಕು ಕೆ.ಜಿಗೆ, 8 ಕೆ.ಜಿಗೆ, 12 ಕೆ.ಜಿಗೆ ಬಂದಿದೆ ಎಂದು ಗೊಂದಲ ಸೃಷ್ಟಿಯಾಗಿದೆ. ಈ ಯುನಿಟ್ ಸಿಸ್ಟಂ ಅನ್ನು ರದ್ದುಪಡಿಸಿ, ನೀವು 10 ಕೆ.ಜಿ ಕೊಡುತ್ತೀರೋ, 15 ಕೆ.ಜಿ ಕೊಡುತ್ತೀರೋ, 20 ಕೆ.ಜಿ. ಕೊಡುತ್ತೀರೋ, 25 ಕೆ.ಜಿ. ಕೊಡುತ್ತೀರೋ ಎನ್ನುವ ಬಗ್ಗೆ ಒಂದು ನಿರ್ದಿಷ್ಟವಾಗಿ ಆಹಾರ ವಿತರಣೆಯನ್ನು ಮಾಡುವುದರಿಂದ ದುರುಪಯೋಗವಾಗುವುದನ್ನು ಕೂಡ ತಡೆಗಟ್ಟಬಹುದು ಹಾಗೂ ಈ ಗೊಂದಲವನ್ನು ನಿವಾರಣೆ ಮಾಡಬಹುದು. ಅದರಿಂದ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾದ ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕು. ಈ ಸದನದಲ್ಲಿ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟರೆ ಅನೇಕ ಸದಸ್ಯರು ಅವರವರ ಕ್ಷೇತ್ರದ ಅನುಭವಗಳು ಹಾಗೂ ಸಮಸ್ಯೆಗಳನ್ನು ಹೇಳುವುದಕ್ಕೆ ಈ ಸದನದಲ್ಲಿ ಅವಕಾಶ ಮಾಡಿಕೊಡಬೇಕು ಎಂದು ಹೇಳುತ್ತೇನೆ. ಇದಕ್ಕೆ ನಗರ ಪ್ರದೇಶ ಹಾಗೂ ಗ್ರಾಮೀಣ ಪ್ರದೇಶದಲ್ಲಿ 18 ಮತ್ತು 12 ಸಾವಿರ ರೂಪಾಯಿ ಆದಾಯ ಮಿತಿ ಇಟ್ಟಿರುವಂತಹ

ಮಾನದಂಡ ಏನಿದೆ ಅದು ಒಂದೊಂದಕ್ಕೂ ಕೂಡ ಹೋಲಿಕೆ ಇಲ್ಲ. ಆದುದರಿಂದ BPL ಅನ್ನು ಕೇಂದ್ರ ಸರ್ಕಾರ ನಿಗದಿ ಪಡಿಸುವಂತಹ ಆದಾಯದ ಮಿತಿ ಮೇಲೆ ಮಾಡುವಂತಾದ್ದಾಗಿದೆ. ಆದರೆ ಇಲ್ಲಿ ನಾವು ಮಾನದಂಡವನ್ನು ಗಮನಿಸಿದಾಗ ಕೇಂದ್ರ ಸರ್ಕಾರ ನಿಗದಿ ಪಡಿಸಿರುವಂತಹ ಆದಾಯ ಮಿತಿಗೂ ನಮ್ಮ ಮಾನದಂಡಕ್ಕೂ ತಾರತಮ್ಯ ಇದೆ. ಇದು ಒಂದು ರೀತಿಯಲ್ಲಿ ಬಹಳ ಗೊಂದಲದಲ್ಲಿರುವುದರಿಂದ ಇದರ ಬಗ್ಗೆ ಒಂದು ಸ್ಪಷ್ಟವಾದ ತೀರ್ಮಾನವನ್ನು ಸರ್ಕಾರ ಕೈಗೊಳ್ಳಬೇಕು. ಮಾನ್ಯ ರೇವಣ್ಣನವರು ಹೇಳಿದ ರೀತಿಯಲ್ಲಿ ಪಾರ್ಲಿಮೆಂಟ್ ಎಲೆಕ್ಷನ್ ಆಗುವವರೆಗೂ ತಾತ್ಕಾಲಿಕ ಪಡಿತರ ಚೀಟಿ ಕೊಡುತ್ತೇವೆಂದರೆ, ಇದರಿಂದ ನಿರಂತರವಾದ ಸಮಸ್ಯೆಯನ್ನು ರಾಜ್ಯದಲ್ಲಿ ಮಾಡತಕ್ಕಂತ ವ್ಯವಸ್ಥೆ ನಿರ್ಮಾಣವಾಗುತ್ತದೆ. ಆದುದರಿಂದ ಇದರ ಬಗ್ಗೆ ಚರ್ಚೆಗೆ ಅವಕಾಶ ಕೊಟ್ಟು ನಿರ್ದಿಷ್ಟವಾದ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಗಳು ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಬಿ.ಕೆ. ಸಂಗಮೇಶ್ವರ್ (ಭದ್ರಾವತಿ) :- ಮಾನ್ಯ ಅಧ್ಯಕ್ಷರೆ, ನಾವು ಚುನಾವಣೆ ಸಂದರ್ಭದಲ್ಲಿ ಮತದಾರರನ್ನು ನೋಡುವುದಕ್ಕೆ ಹೋದಂತಹ ಸಂದರ್ಭದಲ್ಲಿ ನಮ್ಮ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ 25 ಕೆ.ಜಿ ಅಕ್ಕಿಯನ್ನು ಹಳೆ ಪಡಿತರ ಪದ್ಧತಿಯ ರೀತಿಯಲ್ಲಿ ಮೂರು ತಿಂಗಳೊಳಗೆ ಕೊಡುತ್ತೇವೆಂದು ಹೇಳಿದ್ದೆವು. ಆದರೆ ನಮ್ಮ ಸರ್ಕಾರ ಬರಲಿಲ್ಲ. ಬಿಜೆಪಿ ಸರ್ಕಾರ ಕೂಡ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿತು, ಅವರೂ ಕೂಡ ನಾವು 25 ಕೆ.ಜಿ ಅಕ್ಕಿ ಕೊಡುತ್ತೇವೆ, ಎರಡು ರೂಪಾಯಿಗೆ ಒಂದು ಕೆ.ಜಿ ಅಕ್ಕಿ ಕೊಡುತ್ತೇವೆಂದು ಹೇಳಿದರು, ಅವರೂ ಕೊಟ್ಟಿಲ್ಲ. ನಾವು ಯಾವುದೇ ವಾರ್ಡ್‌ನಲ್ಲಿ ಹೋಗಲಿ, ಗ್ರಾಮೀಣ ಪ್ರದೇಶದಲ್ಲಿ ಹೋಗಲಿ ಎಲ್ಲಿದೆ ಅಕ್ಕಿ, ಇಲ್ಲಿಯವರೆಗೂ ನಮಗೆ ಕೊಟ್ಟಿಲ್ಲವೆಂದು ಶಾಸಕರಿಗೆ ಇಲ್ಲಸಲ್ಲದ ಮಾತುಗಳನ್ನು ಆಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಆಹಾರ ಮಂತ್ರಿಗಳು ಶಿವಮೊಗ್ಗ ಜಿಲ್ಲೆಗೆ ಬಂದಾಗ ಇನ್ನು ಆರು ತಿಂಗಳೊಳಗಾಗಿ ಸಂಪೂರ್ಣವಾಗಿ BPL card ಕೊಡುತ್ತೇವೆ, ಯಾರು ಚಿಂತೆ ಮಾಡುವುದು ಬೇಡವೆಂದು ಹೇಳಿದರು. ಆರು ತಿಂಗಳುಗಳಾಗಿ ಏಳೂವರೆ ತಿಂಗಳಾಗುತ್ತ ಬಂತು, ಇದುವರೆಗೂ BPL card ಕೊಟ್ಟಿಲ್ಲ. ನಾವು ಜನಗಳಿಗೆ ಉತ್ತರ ಕೊಡುವುದಕ್ಕಾಗುತ್ತಿಲ್ಲ. ಇನ್ನು 11,800 ರೂಪಾಯಿ ಒಳಗೆ ಆದಾಯ ಇದ್ದವರಿಗೆ ಮಾತ್ರ BPL card ಕೊಡುವುದೆಂದು ಹಿಂದೆ ಇತ್ತು. ಈಗ ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಆಹಾರ ಮಂತ್ರಿಗಳು ಅದನ್ನು 30,000 ರೂಪಾಯಿಗೆ

ಏರಿಸಿದ್ದೇವೆಂದು ಹೇಳಿದರು. ಆದರೆ ಈಗಲೂ ಕೂಡ ಅಧಿಕಾರಿಗಳು 11,800 ಆದಾಯ ಮಿತಿಯೆಂದು ಪರಿಗಣಿಸುತ್ತಿದ್ದಾರೆ. ಇವತ್ತಿಗೂ ಕೂಡ 11,800 ರೂಪಾಯಿ ಮೇಲ್ಪಟ್ಟು ಆದಾಯ ಇರುವವರಿಗೆ BPL card ಕೊಟ್ಟಿಲ್ಲ. ಅದಕ್ಕೆ ಸರ್ಕಾರ ಅಧಿಕಾರಿಗಳಿಗೆ ಸ್ಪಷ್ಟವಾಗಿ ಆದೇಶವನ್ನು ಕೊಡಬೇಕು. 30,000 ರೂಪಾಯಿ ಆದಾಯ ಇದ್ದವರಿಗೂ ಕೂಡ BPL card ಕೊಡುತ್ತೇವೆಂದು ಸಂಬಂಧಪಟ್ಟ ಇಲಾಖೆಗೆ ಆದೇಶ ಕೊಡಬೇಕು ಹಾಗೂ ತತ್‌ಕ್ಷಣ BPL card ಕೊಡಬೇಕು. ಈಗ ಯಾರಾದರೂ ಒಬ್ಬ ಬಡವ heart patient ಆಸ್ಪತ್ರೆಗೆ ಹೋಗಬೇಕೆಂದರೂ ಕೂಡ BPL card ಇದ್ದರೆ ಅವನಿಗೆ ಅನುಕೂಲವಾಗುತ್ತದೆ. ಆದುದರಿಂದ ಇದರ ಬಗ್ಗೆ ಸರ್ಕಾರ ಗಮನಹರಿಸಿ, ಅತೀ ಶೀಘ್ರವಾಗಿ ಕಾರ್ಡ್ ಹಾಗೂ ಆದಾಯ ಮಿತಿಯ ಬಗ್ಗೆ ಸರ್ಕಾರ ಇಲಾಖೆಗೆ ನಿರ್ದೇಶನ ಕೊಡಬೇಕು ಎಂದು ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳುತ್ತೇನೆ.

ಅಧ್ಯಕ್ಷರು :- ಇದು ಸಾರ್ವಜನಿಕ ಮಹತ್ವದ ವಿಷಯ ಇದೆ, ಎಲ್ಲರಿಗೂ ಅವಕಾಶ ಕೊಡುತ್ತೇನೆ, ಎಲ್ಲರೂ ಒಂದೊಂದು ವಿಷಯವನ್ನು ಮಾತನಾಡಿ.

ಶ್ರೀ ಸಂಪಂಗಿ (ಬಾಗೇಪಲ್ಲಿ) :- ಮಾನ್ಯ ಅಧ್ಯಕ್ಷರೇ, ನೆಮ್ಮದಿ ಕೇಂದ್ರಗಳಿಗೆ ಅರ್ಜಿಗಳನ್ನು ಕೊಡಿ ಎಂದು ಹೇಳಿದ್ದಾರೆ. ಆದರೆ ಜನರು ನೆಮ್ಮದಿ ಕೆಡಿಸಿಕೊಂಡಿದ್ದಾರೆ. 1999ರಲ್ಲಿ BPL cardಗಳನ್ನು ಕೊಟ್ಟರು. ಆಗ ಇದನ್ನು ಅಧಿಕಾರಿಗಳು ಸಮೀಕ್ಷೆ ಮಾಡಿದ ನಂತರ ಇವರು ಬಡವರು ಎಂದು ಒಂದು ನಿರ್ಧಾರಕ್ಕೆ ಬಂದರು.

2004ರಲ್ಲಿ ಅದೇ ಬಿ.ಪಿ.ಎಲ್.ಕಾರ್ಡ್‌ಗಳನ್ನು ಕಿತ್ತು ಹಾಕುವಂತಹ ಪರಿಸ್ಥಿತಿ ಬಂತು. ಅಧಿಕಾರಿಗಳು ಸಮೀಕ್ಷೆಯನ್ನು ಮಾಡುವಂಥ ಸಂದರ್ಭದಲ್ಲಿ ಆನೇಕ ಕೂಲಿಗಾರರು ಕೂಲಿಗಾಗಿ ಹೊರಗಡೆ ಇದ್ದಂಥ ಸಂದರ್ಭದಲ್ಲಿ ಅವರನ್ನು ಸಮೀಕ್ಷೆ ಮಾಡಿ ಬಿ.ಪಿ.ಎಲ್. ಕಾರ್ಡ್‌ಗಳಿಂದ ಕಿತ್ತು ಹಾಕಿದ್ದಾರೆ. ಅವರು ಮನೆಗಳಲ್ಲಿ ಇಲ್ಲವೆಂದು ವರದಿಯನ್ನು ಕೊಟ್ಟಿದ್ದಾರೆ. ಇವತ್ತು ಇವರು ಕೂಲಿಗಾಗಿ ಬೇರೆ ಊರುಗಳಿಗೆ ಹೋಗಿದಂಥವರು ಆ ದಾಖಲೆಗಳಲ್ಲಿ ಇಲ್ಲ. ಇವತ್ತು ಆನೇಕರು ಬಿ.ಪಿ.ಎಲ್. ಕಾರ್ಡ್‌ಗಳನ್ನು ಪಡೆಯುವಂಥ ಪರಿಸ್ಥಿತಿಯಲ್ಲಿ ಇಲ್ಲ. ಇವತ್ತು ಬಿ.ಪಿ.ಎಲ್. ಕಾರ್ಡ್‌ಗಳನ್ನು ಪಡೆಯಬೇಕಾದರೆ ನೆಮ್ಮದಿ ಕೇಂದ್ರಗಳಿಗೆ ಅರ್ಜಿಯನ್ನು ಕೊಡಿಯೆಂದು ಹೇಳುತ್ತಾರೆ. ಈಗ ಗಡಿನಾಡು ಪ್ರದೇಶದಲ್ಲಿರುವಂಥವರು ಇವತ್ತು 20 ರೂಪಾಯಿ

ಗಳನ್ನು ಕೊಡುವಂಥ ಪರಿಸ್ಥಿತಿಯಲ್ಲಿ ಇಲ್ಲ. ಡಾ:ನಂಜುಂಡಪ್ಪನವರ ವರದಿ ಪ್ರಕಾರ ಅತೀ ಹಿಂದುಳಿದ ಪ್ರದೇಶಗಳು ಮತ್ತು ಕೂಲಿ ಕಾರ್ಮಿಕರು ಹೆಚ್ಚಿಗೆ ಇರುವಂಥ ಪ್ರದೇಶವೆಂದು ಒಂದು ಕಡೆ ಸರ್ಕಾರ ಹೇಳುತ್ತಾ ಇದೆ. ಒಂದು ಕಡೆ ಬಡವರು ಇರುವಂಥ ಪ್ರದೇಶವೆಂದು ಹೇಳುತ್ತಾರೆ. ಇವತ್ತು ಇವರು 20 ರೂಪಾಯಿಗಳನ್ನು ಛಾಪ ಕಾಗದಕ್ಕೆ ಕೊಡಬೇಕೆಂದು ಹೇಳುತ್ತಾರೆ. ಅದರೆ ಬಡವರಿಗೆ ಈ 20 ರೂಪಾಯಿ ಗಳನ್ನು ಕೊಡುವ ಪರಿಸ್ಥಿತಿ ಇಲ್ಲ. ಅದರ ಜೊತೆಗೆ 42 ರೂಪಾಯಿಗಳನ್ನು ಕೊಟ್ಟು ಫೋಟೊಗಳನ್ನು ಪಡೆಯಬೇಕೆಂದು ಹೇಳುತ್ತಾರೆ. ಇವೆಲ್ಲವನ್ನು ನೋಡಿದರೆ ನಿಜವಾಗಿ ಯೂ ಬಡವರ ಮೇಲೆ ಸವಾರಿಯನ್ನು ಮಾಡುತ್ತಿದ್ದೇವೆ. ಅದುದರಿಂದ ದಯವಿಟ್ಟು ತಾವು ಈ ಬಿ.ಪಿ.ಎಲ್ ಕಾರ್ಡ್‌ಗಳ ವಿಚಾರವಾಗಿ ಅತೀ ಶೀಘ್ರವಾಗಿ ಕ್ರಮವನ್ನು ತೆಗೆದುಕೊಂಡು ಬಿ.ಪಿ.ಎಲ್ ಕಾರ್ಡ್‌ಗಳನ್ನು ಕೊಡುವ ವಿಚಾರಕ್ಕೆ ತಾವು ಒತ್ತನ್ನು ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) :- ಮಾನ್ಯ ಅಧ್ಯಕ್ಷರೆ, ಈ ವಿಚಾರ ಅತ್ಯಂತ ಮಹತ್ವವಾದಂಥ ಬಡವರ ವಿಚಾರವಾಗಿದೆ. ಈ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಯವರು ಸಭೆಯಲ್ಲಿದ್ದು ಇದನ್ನು ಆಲಿಸಿ ಈ ವಿಷಯವಾಗಿ ಅವರೇ ಉತ್ತರವನ್ನು ಕೊಡುತ್ತಾರೆಂದು ಅಂದು ಕೊಂಡಿದ್ದೆವು. ಅದರೆ ಮಾನ್ಯ ಮುಖ್ಯಮಂತ್ರಿಯವರು ಸದನದಲ್ಲಿ ಇಲ್ಲ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಸನ್ಮಾನ್ಯ ಸಚಿವರು ಅನೇಕ ಪ್ರಸ್ತಾವನೆಗಳನ್ನು ಮಾಧ್ಯಮಗಳ ಮೂಲಕ ನಮಗೆಲ್ಲರಿಗೂ ಕೊಟ್ಟಿದ್ದರು. ನಾವು ಪತ್ರಿಕೆಗಳಲ್ಲಿ ಅವರು ಕೊಟ್ಟಿದ್ದಂಥ ಹೇಳಿಕೆಗಳನ್ನು ಓದಿದ್ದೆವು. ಅದು ವಯೋಮಿತಿಯನ್ನು ಏರಿಸುವಂಥಾದ್ದು ಇರಬಹುದು, ಬೇರೆ ಬೇರೆ ವಿಚಾರಗಳ ಬಗ್ಗೆ, ಅದು ಯಾವುದನ್ನು ಅನುಷ್ಠಾನ ಮಾಡುವುದಕ್ಕೆ ಸನ್ಮಾನ್ಯ ಮಂತ್ರಿಯವರಿಗೆ ಅವಕಾಶವಾಗಲಿಲ್ಲ. ಅದನ್ನು ಅವರ ಕೈಯಲ್ಲಿ ಮಾಡುವುದಕ್ಕೆ ಆಗಲಿಲ್ಲವೋ ಅಥವಾ ಮಾಡುವುದಕ್ಕೆ ಬಿಡಲಿಲ್ಲವೋ, ಇಲ್ಲಿ "ಬೀಸೋ ದೊಣ್ಣೆಯನ್ನು ತಪ್ಪಿಸಿಕೊಂಡರೆ ಸಾವಿರ ವರ್ಷ ಆಯಸ್ಸು" ಎಂದು ಈ ಸದನದಲ್ಲಿ ಒಂದು ಹೇಳಿಕೆಯನ್ನು ಕೊಟ್ಟರೆ ಎಲ್ಲರನ್ನು ಸುಮ್ಮನೆ ಇರಿಸಬಹುದೆಂದು ಮಾನ್ಯ ಸಚಿವರು ಈ ಹೇಳಿಕೆಯನ್ನು ಕೊಟ್ಟಿದ್ದಾರೆಂದು ನಾನು ಭಾವಿಸಿಕೊಂಡಿದ್ದೇನೆ. ಈ ಸರ್ಕಾರ ಒಂದು ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಮನೆ ಬಾಗಿಲಿಗೆ ಸರ್ಕಾರ, ಜನ ಸಂಪರ್ಕ ಸಭೆ ಮಾಡುವಂಥಾದ್ದು. ಅಲ್ಲಿ ಸರ್ಕಾರ ಸಾವಿರಾರು ಅರ್ಜಿಗಳನ್ನು ಪಡೆದಿದೆ. ಅಲ್ಲಿ ಪಡಿತರ ಚೀಟಿಗಳನ್ನು ಕೊಡುವ ವಿಚಾರದಲ್ಲಿ ಅರ್ಜಿಗಳು

ಬಂದಿರುವಂಥಾದ್ದು. ಹಾಗಾದರೆ ನೀವು ನೆಮ್ಮದಿ ಕೇಂದ್ರಗಳನ್ನು ಸ್ಥಾಪನೆ ಮಾಡಿ, ಅಲ್ಲಿ ನೀವು ಜನ ಸಂಪರ್ಕ ಸಭೆಗಳಲ್ಲಿ ತೆಗೆದುಕೊಂಡ ಅರ್ಜಿಗಳ ಸ್ಥಿತಿ ಏನಾಗಿದೆಯೆಂಬ ಬಗ್ಗೆ ಸನ್ಮಾನ್ಯ ಸಚಿವರು ಹೇಳಬೇಕಾಗುತ್ತದೆ. ಸುಮಾರು ಜನ ಬಡವರಿಗೆ ನೆಮ್ಮದಿ ಕೇಂದ್ರಗಳಿಗೆ ಹೋಗಿ ಅರ್ಜಿಗಳನ್ನು ಕೊಡಬೇಕೆಂಬ ಯೋಚನೆ ಕೂಡ ಇಲ್ಲ, ಏಕೆಂದರೆ ಈಗಾಗಲೇ ಸರ್ಕಾರದ ಅಧಿಕಾರಿಗಳು ಮನೆ ಬಾಗಿಲಿಗೆ ಹೋಗಿ ಅರ್ಜಿಗಳನ್ನು ಸ್ವೀಕಾರ ಮಾಡುತ್ತಾರೆಂದು ಬಡವರೆಲ್ಲಾ ತಿಳಿದುಕೊಂಡಿದ್ದಾರೆ. ಎರಡನೆಯದಾಗಿ ನೆಮ್ಮದಿ ಕೇಂದ್ರಗಳನ್ನು ಹೋಬಳಿ ಹೆಡ್ ಕ್ವಾರ್ಟಸ್‌ಗಳಲ್ಲಿ ಮಾಡಿದ್ದಾರೆ. ಅನೇಕ ಹೋಬಳಿ ಹೆಡ್ ಕ್ವಾರ್ಟಸ್‌ಗಳು ಅವೈಜ್ಞಾನಿಕವಾಗಿ ಅಂತಿಮ ತೀರ್ಮಾನಗಳನ್ನು ತೆಗೆದುಕೊಂಡಿವೆ. ಅಲ್ಲಿಗೆ ಯಾವುದೇ ಸಾರಿಗೆ ವ್ಯವಸ್ಥೆಗಳು ಇಲ್ಲ. ಅಲ್ಲಿಗೆ ಬಡವರು ಹೋಗಿ ಅರ್ಜಿಗಳನ್ನು ಕೊಡುವಂಥ ಸ್ಥಿತಿ ಕೂಡ ಆಗುವುದಿಲ್ಲ. ಅಲ್ಲಿ ಸಾವಿರಾರು ಜನ,ಲಕ್ಷಾಂತರ ಜನ,ಕ್ಯೂನಲ್ಲಿ ನಿಲ್ಲಬೇಕಾಗುತ್ತದೆ. ಅದುದರಿಂದ ಈ ಹೋಬಳಿ ಹೆಡ್ ಕ್ವಾರ್ಟಸ್‌ನಿಂದ ತೆಗೆದು ಪಂಚಾಯತ್ ಹೆಡ್ ಕ್ವಾರ್ಟಸ್‌ಗಳಿಗೆ ಈ ನೆಮ್ಮದಿ ಕೇಂದ್ರಗಳನ್ನು ವರ್ಗಾವಣೆ ಮಾಡಬೇಕು. ಬಡವರ ಸಂಖ್ಯೆ ಹೆಚ್ಚಿಗೆ ಇರುವುದರಿಂದ ಇವರು ಕೊಟ್ಟಿರುವ ಅವಧಿ ಏನು ಇದೆ, ಅದನ್ನು ವಿಸ್ತರಣೆ ಮಾಡುವ ಕೆಲಸವನ್ನು ಮಾಡಿ, ಬಡವರ ಬಗ್ಗೆ ಕಾಳಜಿಯನ್ನು ವಹಿಸಬೇಕು. ಮಾನ್ಯ ಹೆಚ್.ಡಿ.ರೇವಣ್ಣನವರು ಹೇಳಿದ ಹಾಗೆ ಇದು ಚುನಾವಣೆ ಆಶ್ವಾಸನೆಯಾಗಬಾರದು. ಈ ಕಾರ್ಯಕ್ರಮವನ್ನು ಸರಿಯಾದ ರೀತಿಯಲ್ಲಿ ಅನುಷ್ಠಾನಗೊಳಿಸಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ(ಕಡೂರು) :- ಸನ್ಮಾನ್ಯ ಸಭಾಧ್ಯಕ್ಷರೆ, ಇವತ್ತು ಮಾನ್ಯ ಆಹಾರ ಸಚಿವರು ಸಭೆಗೆ ವಿಚಾರವನ್ನು ಏನು ತಿಳಿಸಿದರು. ಈ ಸಮಸ್ಯೆ ಇವತ್ತಿನದಲ್ಲ, ಇದು ಮೂರು ನಾಲ್ಕು ವರ್ಷಗಳಿಂದ ಇರುವಂಥ ಸಮಸ್ಯೆಯಾಗಿದೆ. ಇಲ್ಲಿರುವ 224 ಜನ ಸದಸ್ಯರು ಆಯ್ಕೆಯಾಗಿ ಬಂದಿದ್ದೇವೆ. ನಾವು ಮತವನ್ನು ಕೇಳುವುದಕ್ಕೆ ಹೋದ ಸಮಯದಲ್ಲಿ ಜನರು ಕೇಳುತ್ತಿದ್ದಂಥಾದ್ದು ಬಿ.ಪಿ.ಎಲ್. ಕಾರ್ಡ್ ಅನ್ನು ಮಾತ್ರ ಅವರು ಕೇಳುತ್ತಿದ್ದರು. ಸರ್ಕಾರದವರು ಬಿ.ಪಿ.ಎಲ್.ಕಾರ್ಡ್‌ಗಳ ಅಂಕಿ ಅಂಶಗಳನ್ನು ಸರಿಯಾಗಿ ಏನೋ ಕೊಟ್ಟಿದ್ದಾರೆ. ಆದರೆ ನಿಜವಾದ ಬಡವರಿಗೆ ಎ.ಪಿ.ಎಲ್. ಕಾರ್ಡ್‌ಗಳು ಸಿಕ್ಕಿವೆಯೇ? ಶ್ರೀಮಂತರಿಗೆ ಬಿ.ಪಿ.ಎಲ್.ಕಾರ್ಡ್‌ಗಳು ಸಿಕ್ಕಿವೆಯೇ? ಅದನ್ನು ಕೂಡ ಮಾನ್ಯ ಸಚಿವರು ಸಮೀಕ್ಷೆ ಮಾಡಿಸಿ ಶ್ರೀಮಂತರಿಗೆ ಸಿಕ್ಕಿರುವಂಥ ಕಾರ್ಡ್‌ಗಳನ್ನು cancel ಮಾಡಿಸಿ ಅದನ್ನು ಬಡವರಿಗೆ

ಕೊಡಿಸುತ್ತೇವೆಂಬ ವಿಚಾರವನ್ನು ಏನು ಹೇಳಿದ್ದಾರೆ. ಆ ಬಗ್ಗೆ ನಮ್ಮ ಉಪ ನಾಯಕರಾದ ಶ್ರೀ ಟಿ.ಬಿ.ಜಯಚಂದ್ರರವರು ಹೇಳಿದ ಹಾಗೆ ಇಲ್ಲಿ ಫೋಟೋಗಳನ್ನು ತೆಗೆಯುವಂಥವರು ಸರಿಯಾದ ವ್ಯವಸ್ಥೆಯಲ್ಲಿ ತೆಗೆಯದೇ ಇರುವುದರಿಂದ ಈ ಸಮಸ್ಯೆ ಇನ್ನೂ ಹಾಗೆ ಉಳಿದುಕೊಂಡಿದೆಯೇ ಹೊರತು ಸಮಸ್ಯೆ ನಿವಾರಣೆಯಾಗಿಲ್ಲವೆಂಬ ವಿಚಾರವನ್ನು ತಮ್ಮ ಗಮನಕ್ಕೆ ತಂದು, ಮಾನ್ಯ ಸಚಿವರ ಗಮನಕ್ಕೂ ಈ ವಿಚಾರವನ್ನು ತರುತ್ತಿದ್ದೇನೆ. ಇನ್ನೊಂದು ವಿಚಾರ ಏನಾಗಿದೆಯೆಂದರೆ ನನ್ನ ಕ್ಷೇತ್ರದಲ್ಲಿ ಹೆಚ್ಚು ಕಡಿಮೆ ಶೇ. 50 ರಿಂದ ಶೇ.60 ರಷ್ಟು ಕಾಫಿ ತೋಟಗಳಿಗೆ ಕೂಲಿಗೋಸ್ಕರ ಹೋಗುತ್ತಾರೆ. ಇಲ್ಲಿ ನಿಜವಾಗಿ ಬಡವರಾಗಿರುವವರೆ ಕೂಲಿಗೆ ಹೋಗುವಂಥಾದ್ದು. ಇವರಿಗೆ ಯಾವುದೇ ಆಸ್ತಿ ಇರುವುದಿಲ್ಲ. ಈ ರೀತಿ ಕೂಲಿಗೆ ಹೋಗಿರುವವರಿಗೆ ಏನಾಗಿದೆಯೆಂದರೆ ಇದುವರೆಗೂ ಕಾರ್ಡ್‌ಗಳು ಸಿಕ್ಕಿಲ್ಲ. ಈ ಬಗ್ಗೆ ಮಾನ್ಯ ಆಹಾರ ಸಚಿವರಾದ ಹೆಚ್.ಹಾಲಪ್ಪನವರು ವಿಚಾರ ಮಾಡಬೇಕು. ಅವರು ತರೀಕೆರೆ ತಾಲ್ಲೂಕಿನಿಂದ, ಕಡೂರು ತಾಲ್ಲೂಕಿನಿಂದ, ಮತ್ತೆ ಚಿತ್ರದುರ್ಗ ಜಿಲ್ಲೆಯಿಂದ, ಈ ಕಾಫಿ ತೋಟಗಳಿಗೆ ರಾಣೆ ಬೆನ್ನೂರಿನಿಂದ, ಧಾರವಾಡದಿಂದಲೂ ಕಾಫಿ ತೋಟಗಳಲ್ಲಿ ಕೆಲಸ ಮಾಡಲು ಬರುತ್ತಾರೆ. ಇವರು ಇಲ್ಲಿಗೆ ಬಂದಂಥ ಸಂದರ್ಭದಲ್ಲಿ ಸರ್ವೆ ಮಾಡುವಂಥ ಕೆಲಸವನ್ನು ಅಧಿಕಾರಿಗಳು ಮಾಡುತ್ತಾರೆ. ಇವತ್ತು ನ್ಯಾಯ ಬೆಲೆ ಅಂಗಡಿಗಳು ಅನ್ಯಾಯ ಬೆಲೆ ಅಂಗಡಿಗಳಾಗಿ ನಡೆಯುತ್ತಿವೆ. ಅವರು ಸರ್ವೆ ಮಾಡಿ ಅಧಿಕಾರಿಗಳಿಗೆ ಅಂಕಿ-ಅಂಶಗಳನ್ನು ಕೊಡುವುದರ ಮೂಖಾಂತರ ಇವತ್ತು ಈ ಅವ್ಯವಸ್ಥೆಗೆ ಕಾರಣವಾಗಿದೆಯೆನ್ನುವ ವಿಚಾರವನ್ನು ಮಾನ್ಯ ಸಚಿವರು ತಿಳಿದುಕೊಳ್ಳಬೇಕೆಂದು ಪ್ರಸ್ತಾವ ಮಾಡುತ್ತೇನೆ. ಇನ್ನು ಬೆಂಗಳೂರು ನಗರಕ್ಕೆ ನಮ್ಮ ಭಾಗದಲ್ಲಿರುವ ಜನರು ಬೇರೆ ಬೇರೆ ಕಾಮಗಾರಿಗಳನ್ನು ಹುಡುಕಿಕೊಂಡು ಬಂದು ಇಲ್ಲಿ 6 ತಿಂಗಳು ಕೆಲಸ ಮಾಡಿ, ಮಳೆ ಬಂದಂಥ ಸಂದರ್ಭದಲ್ಲಿ ಊರಿಗೆ ಬಂದು ಅವರು ಅಲ್ಲಿ ಇರುವಂಥ ಸಂದರ್ಭದಲ್ಲಿ ಅವರನ್ನು ಪಡಿತರ ಚೀಟಿಯಿಂದ ತೆಗೆದು ಹಾಕಿ ಗೊಂದಲವನ್ನು ನಿರ್ಮಾಣ ಮಾಡಿದ್ದಾರೆ. ಇನ್ನು ಈ ಕಾರ್ಡ್‌ನಲ್ಲಿ ಒಬ್ಬರಿಗೆ 4 ಕೆ.ಜಿ. ಎನ್ನುವುದಕ್ಕಿಂತ ನಾವು ಸಾವಿರ,ಲಕ್ಷ, ಕೋಟಿ ಎಂದು ಜನ ವಸತಿಗಳ ಬಗ್ಗೆ ಸರ್ವೆ ಮಾಡಿದ್ದೇವೆ. ಆ ಸರ್ವೆಗಳಿಗೆ ಒಂದು ತಿಂಗಳಿಗೆ ಒಬ್ಬನಿಗೆ ಒಂದು ದಿನಕ್ಕೆ ಒಂದು ಕೆ.ಜಿ.ಯಂತೆ 30 ಕೆ.ಜಿ.ಯಂತೆ ಪಡಿತರದ ಮೂಲಕ ಧಾನ್ಯವನ್ನು ಕೊಟ್ಟರೆ ಅನುಕೂಲವಾಗುತ್ತದೆಂದು ತಮ್ಮ ಮುಖಾಂತರ ಮಾನ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ (ಸರ್ವಜ್ಞ ನಗರ) :- ಸನ್ಮಾನ್ಯ ಅಧ್ಯಕ್ಷರೆ, ' " ಆನೆ ಕೊಟ್ಟರೂ ಆಸೆ ಪಡಬಾರದೆಂದು" ಒಂದು ಗಾದೆ ಇದೆ. ಇವತ್ತು ಏನಾಗಿದೆಯೆಂದರೆ ಈ ಬಿ.ಪಿ.ಎಲ್.ಕಾರ್ಡ್ ಬಗ್ಗೆ ಎಲ್ಲಾ ಪಕ್ಷದವರು ತಮ್ಮ ಪ್ರಣಾಳಿಕೆಗಳಲ್ಲಿ ಹೇಳಿದ್ದಾರೆ. ಅಕ್ಕಿ 2 ರೂ.ಗಳಿಗೆ ಕೊಡುತ್ತೇವೆಂದು ಹೇಳಿದ್ದಾರೆ. ನಮ್ಮ ಬೆಂಗಳೂರು ನಗರದಲ್ಲಿ ಏನಾಗಿದೆಯೆಂದರೆ ನಿಜವಾದ ಹಲವಾರು ಬಡವರಿಗೆ ಹಲವಾರು ಜನರಿಗೆ ಬಿ.ಪಿ.ಎಲ್. ಕಾರ್ಡ್‌ಗಳು ಸಿಗುತ್ತಿಲ್ಲ. ಇವತ್ತು ಮಾನ್ಯ ಸಚಿವರು ಏನು ಹೇಳುತ್ತಿದ್ದಾರೆಂದರೆ ಜನವರಿ 30ನೇ ತಾರೀಖಿನವರೆಗೂ Application ತೆಗೆದುಕೊಳ್ಳುತ್ತೇವೆಂದು ಹೇಳುತ್ತಾರೆ. ಇಲ್ಲಿಯವರೆಗೂ ಹೊಸ Application ಅನ್ನು ಅಧಿಕಾರಿಗಳು ತೆಗೆದುಕೊಳ್ಳುತ್ತಿಲ್ಲ. ಅವರು ಏನು ಹೇಳುತ್ತಿದ್ದಾರೆಂದರೆ ಹಲವಾರು ವರ್ಷಗಳ ಹಿಂದೆ ತೆಗೆದುಕೊಂಡಿರುವ Applicationಗಳನ್ನು ವಿಲೇವಾರಿ ಮಾಡುತ್ತಿದ್ದೆವೆಯೇ ಹೊರತು ಹೊಸ Application ತೆಗೆದುಕೊಳ್ಳುತ್ತಿಲ್ಲವೆಂಬ ಮಾತನ್ನು ಹೇಳುತ್ತಿದ್ದಾರೆ. ಇನ್ನೊಂದು ವಿಚಾರವೆನೆಂದರೆ ಇವತ್ತು ಒಂದೇ ಒಂದು ಏಜೆನ್ಸಿಗೆ ಫೋಟೋ ತೆಗೆಯುವ ಕೆಲಸವನ್ನು ಕೊಟ್ಟಿದ್ದಾರೆ. ನಾನೇ ಸ್ಥಳಕ್ಕೆ ವೈಯಕ್ತಿಕವಾಗಿ ಹೋಗಿ ನೋಡಿದ್ದೇನೆ. ಜನರು ಬೆಳಗಿನಿಂದ ಕ್ಯೂ ನಿಲ್ಲುತ್ತಾರೆ. ಯಾರೋ ಒಬ್ಬ ಹುಡುಗ ಒಂದು ಲ್ಯಾಪ್ ಟಾಪ್ ತರುತ್ತಾನೆ. ಅವನು 3-4 ಗಂಟೆಗಳು ತಡವಾಗಿ ಬರುತ್ತಾನೆ. ಅವನಿಗೋಸ್ಕರ ಜನರೆಲ್ಲಾ wait ಮಾಡಬೇಕು. ಇಲ್ಲಿ monopoly ಆಗಿದೆ. ದಯವಿಟ್ಟು ತಾವು ಇದನ್ನು ಯಾವ ಸಂಸ್ಥೆಯವರಿಗೆ ಕೊಟ್ಟಿದ್ದೀರಿ. ಅದನ್ನು cancel ಮಾಡಿ, de-centralize ಮಾಡಬೇಕು. ಮಾನ್ಯ ಸಚಿವರು ಇದನ್ನು cancel ಮಾಡುವುದಕ್ಕೆ ಕಾನೂನಿನ ತೊಡಕಿದೆಯೆಂದು ಹೇಳುತ್ತಾರೆ. ಯಾವುದೇ ರೀತಿಯ ಕಾನೂನಿನ ತೊಡಕಿಲ್ಲ. ಇಡೀ Assembly ಬೇಕಾದರೆ Resolution pass ಮಾಡೋಣ. ಈ ಏಜೆನ್ಸಿಯನ್ನು ನಿಜವಾಗಿಯೂ cancel ಮಾಡಬೇಕು. ಇದೇ ಏಜೆನ್ಸಿಯವರೇ Voters list ಮಾಡಬೇಕು, Ration card ಅವರೇ ಮಾಡಬೇಕೆಂದು monopoly ಕೊಟ್ಟಿದ್ದೀರಾ, ದಯವಿಟ್ಟು ಈ ಏಜೆನ್ಸಿಯನ್ನು cancel ಮಾಡಿ de-centralize ಮಾಡಿ ತಾಲ್ಲೂಕು ಮಟ್ಟದಲ್ಲಿ constituency wise ಮಾಡಬೇಕು. ಇದು Hi-tech ಏನೂ ಇಲ್ಲ, simple-tech ಆಗಿ ಇದೆ. ಇದನ್ನು ಯಾರು ಬೇಕಾದರೂ ಮಾಡಬಹುದು. ದಯವಿಟ್ಟು ಈ ಏಜೆನ್ಸಿಯನ್ನು cancel ಮಾಡಿ ಹೊಸ ಏಜೆನ್ಸಿಗೆ ಕೊಟ್ಟು ಆದಷ್ಟು ಬೇಗ ಬಡವರಿಗೆ ಆಹಾರ ಧಾನ್ಯ ಸಿಗುವಂತೆ ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಆರ್. ಮಹೇಶ್ (ಕೃಷ್ಣರಾಜಸಾಗರ) :- ಮಾನ್ಯ ಅಧ್ಯಕ್ಷರೆ, ಇವತ್ತು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳನ್ನು ಹೇಳುತ್ತೇನೆ. ಇವತ್ತಿನ ದಿವಸ ನ್ಯಾಯಬೆಲೆ ಅಂಗಡಿಗಳಲ್ಲಿ ಸಾಮಾನ್ಯವಾಗಿ ಹಳ್ಳಿ ಪ್ರದೇಶಗಳಲ್ಲಿ ಅನಿಲವಿರುವವರಿಗೆ ಸೀಮೆಎಣ್ಣೆಯನ್ನು ಕೊಡುತ್ತಿಲ್ಲ. ಈ ವಿಚಾರ ತಮಗೆಲ್ಲರಿಗೂ ಗೊತ್ತಿದೆ. ಇವತ್ತು ಹಳ್ಳಿಗಾಡುಗಳಲ್ಲಿ ವಿದ್ಯುತ್ ಸಮಸ್ಯೆ ಎಷ್ಟು ಇದೆಯೆನ್ನುವುದನ್ನು ನಾವೆಲ್ಲರೂ ಅನುಭವಿಸುತ್ತಿದ್ದೇವೆ. ಆದರೆ ಮಕ್ಕಳು ಓದುವಂಥ ಸಂದರ್ಭಗಳಲ್ಲಿ ಅನುಕೂಲವಾಗಿಲಿಯೆಂಬ ದೃಷ್ಟಿಯಿಂದ ದಯಮಾಡಿ 2 ಲೀಟರ್ ಸೀಮೆಎಣ್ಣೆಯನ್ನು ಅನಿಲ ಇರುವವರಿಗೂ ಕೊಡಬೇಕೆಂದು ಮನವಿ ಮಾಡುತ್ತೇನೆ.

ಹಾಗೆಯೇ ಇವತ್ತು ಎಲ್ಲ ನ್ಯಾಯಬೆಲೆ ಅಂಗಡಿಗಳಲ್ಲಿ ಸಮರ್ಪಕವಾಗಿ ಆಹಾರಧಾನ್ಯ ವಿತರಣೆ ಆಗುತ್ತಿಲ್ಲ. ಕಾರಣ, ಇವತ್ತು ಅವರಿಗೆ ಕೊಡುತ್ತಿರುವ ಕಮಿಷನ್ ಸಹ ಕಡಿಮೆಯಾಗಿದೆ. ದಯಮಾಡಿ ಅದರ ಕಡೆಯೂ ಹೆಚ್ಚು ಗಮನವನ್ನು ಹರಿಸಿ ನ್ಯಾಯಬೆಲೆ ಅಂಗಡಿಗಳ ಮಾಲೀಕರಿಗೆ ಸ್ವಲ್ಪ ಕಮಿಷನ್ ಅನ್ನು ಜಾಸ್ತಿ ಮಾಡಿ, ನ್ಯಾಯಬೆಲೆ ಅಂಗಡಿಗಳ ದಾಸ್ತಾನುಗಳು ಜನರಿಗೆ ಸರಿಯಾಗಿ ತಲುಪುವಂತೆ ವ್ಯವಸ್ಥೆಯನ್ನು ಮಾಡಬೇಕು ಎಂದು ಪ್ರಾರ್ಥನೆಯನ್ನು ಮಾಡುತ್ತಿದ್ದೇನೆ.

ಶ್ರೀ ಬಂಡೆಪ್ಪ ಕಾಶೆಂಪೂರ್ (ಬೀದರ್ ದಕ್ಷಿಣ) :- ಸನ್ಮಾನ್ಯ ಅಧ್ಯಕ್ಷರೆ, ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ಈ ಸರ್ಕಾರ ಬಂದ ತಕ್ಷಣ "ಜನ ಸ್ಪಂದನ" ಎನ್ನುವ ಒಂದು ಹೊಸ ಯೋಜನೆಯನ್ನು ಹಾಕಿಕೊಂಡಿತು. ಆ ಜನಸ್ಪಂದನ ಕಾರ್ಯಕ್ರಮದಲ್ಲಿ ಹೋಬಳಿ ಲೆವೆಲ್‌ನಲ್ಲಿ ಎಲ್ಲರೂ ಅರ್ಜಿಗಳನ್ನು ಕೊಡಿ ಎಂದು ಹೇಳಿದರು. ಹಾಗಾಗಿ, ಹೋಬಳಿ ಲೆವೆಲ್‌ನಲ್ಲಿ ಸುಮಾರು ಒಂದೊಂದು ಸಾವಿರ ಅರ್ಜಿಗಳು ಬಂದಿವೆ. ಅದರಲ್ಲಿ ಸುಮಾರು 600 ಅರ್ಜಿಗಳು ಬರೀ ಪಡಿತರ ಚೀಟಿಗೆ ಸಂಬಂಧಪಟ್ಟಂಥವುಗಳಾಗಿವೆ. ಜನಸಾಮಾನ್ಯರು ಹಳ್ಳಿಗಳಿಂದ ದುಡ್ಡನ್ನು ಖರ್ಚು ಮಾಡಿಕೊಂಡು ಹೋಬಳಿ ಲೆವೆಲ್‌ಗೆ ಬಂದು ಅಲ್ಲಿ ಒಂದು Format ಅನ್ನು ತುಂಬಬೇಕು. ಅದರಲ್ಲಿ, ನಿಮಗೆ ಏನು ಬೇಕು? ಮನೆ ಬೇಕೇ, ರೇಷನ್ ಕಾರ್ಡ್ ಬೇಕೇ, ರೋಡ್ ಬೇಕೇ, ಎಂದೆಲ್ಲಾ ಇದೆ. ಒಂದೊಂದು ಹೋಬಳಿಯಲ್ಲಿ ಸುಮಾರು 600 ರಿಂದ 800 ಅರ್ಜಿಗಳನ್ನು ಪಡಿತರ ಚೀಟಿಯ ಬಗ್ಗೆಯೇ ಕೊಟ್ಟಿದ್ದಾರೆ. ಆದರೆ ಇವತ್ತು ಇದಕ್ಕಾಗಿ "ನೆಮ್ಮದಿ" ಕೇಂದ್ರಕ್ಕೆ ಹೋಗಿ ಎಂದು ಸನ್ಮಾನ್ಯ ಸಚಿವರು ಆದೇಶ ಕೊಟ್ಟಿದ್ದಾರೆ. ಆದರೆ ಈಗಾಗಲೇ ಅವರೆಲ್ಲ ಅರ್ಜಿಗಳನ್ನು ಕೊಟ್ಟಿದ್ದಾರೆ. "ಜನಸ್ಪಂದನ" ಕಾರ್ಯಕ್ರಮದಲ್ಲಿ ಬಂದಿರುವ ಅರ್ಜಿಗಳನ್ನು ಈಗಾಗಲೇ ಆಹಾರ

ಇಲಾಖೆಯ ಅಧಿಕಾರಿಗಳು ತೆಗೆದುಕೊಂಡಿದ್ದಾರೆ. ಅವುಗಳನ್ನು ಪರಿಶೀಲನೆ ಮಾಡಿ, ನೇರವಾಗಿ ಅವರ ಮನೆಯವರೆಗೆ ಹೋಗಿ, ಅಲ್ಲಿಯೇ ಫೋಟೋ ತೆಗೆದು ಏಕೆ ಡಾಕ್ಯುಮೆಂಟೇಷನ್ ಮಾಡುತ್ತಿಲ್ಲ ಎನ್ನುವುದನ್ನು ನಾನು ಮಾನ್ಯ ಸಚಿವರಿಗೆ ಕೇಳಲು ಬಯಸುತ್ತೇನೆ. ಈಗ "ನೆಮ್ಮದಿ" ಕೇಂದ್ರದಲ್ಲೂ ಗೊಂದಲ ಸೃಷ್ಟಿಯಾಗಿದ್ದು, ಜನಸಾಮಾನ್ಯರು ಊಟವಿಲ್ಲದೇ, ತಿಂಡಿಯಿಲ್ಲದೇ, ರಾತ್ರಿ ಒಂದು ಗಂಟೆಯವರೆಗೆ ಅಲ್ಲೇ ಮಲಗುತ್ತಿದ್ದು, ಗೊಂದಲವುಂಟಾಗಿದೆ. ಇವತ್ತು ಇದು ಬಹಳ ಪ್ರಮುಖವಾದ, ಮುಖ್ಯವಾದ ವಿಷಯವಾಗಿದೆ. ಆದುದರಿಂದ, ಸನ್ಮಾನ್ಯ ಸಚಿವರು ತಮ್ಮ ಇಲಾಖೆಯಲ್ಲಿ ಸಿಬ್ಬಂದಿ ಕಡಿಮೆಯಿದ್ದರೆ, ಬೇರೆ ಇಲಾಖೆಗಳಿಂದ ಡೆಪ್ಯುಟೇಷನ್ ಮೇಲೆ ತೆಗೆದುಕೊಳ್ಳಬೇಕು. ಇವತ್ತು ಎಷ್ಟೋ ಇಲಾಖೆಗಳು ಕೆಲಸವಿಲ್ಲದೇ ಕುಳಿತಿವೆ. ಅಂಥ ಇಲಾಖೆಗಳಿಂದ ಡೆಪ್ಯುಟೇಷನ್ ಮೇಲೆ ತೆಗೆದುಕೊಂಡು, ಇಡೀ ರಾಜ್ಯದಲ್ಲಿರುವ ಗರೀಬ್ ಮಂದಿಯ ಸಮಸ್ಯೆ ಏನಿದೆ, ಅದನ್ನು ಬಗೆಹರಿಸಿ ಎನ್ನುವ ನಿಟ್ಟಿನಲ್ಲಿ ತಮಗೆ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಗೋಪಾಲ ಭಂಡಾರಿ (ಕಾರ್ಕಳ) :- ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ಪಡಿತರ ಚೀಟಿಯನ್ನು ಕೊಟ್ಟಿಲ್ಲ, ಫೋಟೋ ಕಾರ್ಡ್ ಕೊಟ್ಟಿದ್ದಾರೆ. ಇದರಿಂದ ಉಂಟಾಗಿರುವ ಗೊಂದಲದಿಂದ ನನಗೆ ಕ್ಷೇತ್ರದಲ್ಲಿ ಸಂಚಾರ ಮಾಡಲು ಆಗುತ್ತಿಲ್ಲ. ಏಕೆಂದರೆ, ಯಾರಯಾರದೋ ಫೋಟೋ, ಯಾರಯಾರದೋ ಕಾರ್ಡಿನಲ್ಲಿ ಸೇರಿಕೊಂಡುಬಿಟ್ಟಿದೆ. ನನ್ನ ಕಛೇರಿಗೆ ಒಬ್ಬರು ದಂಪತಿಗಳು ಬಹಳ ಸಿಟ್ಟಿನಲ್ಲಿ ಬಂದಿದ್ದರು. ನೋಡಿ, ನನ್ನ ಹೆಂಡತಿ ಇಲ್ಲಿದ್ದಾಳೆ, ಕಾರ್ಡಿನಲ್ಲಿ ಬೇರೆ ಫೋಟೋ ಇದೆ ಎಂದು ಗಂಡನಾದವರು ಹೇಳುತ್ತಿದ್ದರು. ನಾನು ಜೀವಂತ ಇದ್ದೇನೆ, ಆದರೆ ಇಲ್ಲಿ ಬೇರೆ ಫೋಟೋ ಇದೆ ಎಂದು ಹೆಂಡತಿ ಹೇಳುತ್ತಾಳೆ. ಅದನ್ನು ಬದಲಾವಣೆ ಮಾಡಿ ಎಂದರೆ, ತಹಶೀಲ್ದಾರರಿಗೆ ಅಧಿಕಾರವಿಲ್ಲ, ಯಾವುದೋ ಕಾಮೆಡ್ ಸಂಸ್ಥೆ ಫೋಟೋ ತೆಗೆಯಲಿಕ್ಕೆ ಬರಬೇಕು ಎಂದು ಹೇಳುತ್ತಾರೆ. ಆದರೆ ಕಾಮೆಡ್ ಸಂಸ್ಥೆ ಈಗ ಆ ಊರಿಗೆ ಬರುತ್ತಿಲ್ಲ. ಇಷ್ಟೇ ಅಲ್ಲ, ಪ್ರಾಯಗಳು ಹೆಚ್ಚು ಕಡಿಮೆಯಾಗಿದೆ, ಹೆಸರುಗಳು ಹೆಚ್ಚು ಕಡಿಮೆಯಾಗಿವೆ. ಆ ಕಾಮೆಡ್ ಸಂಸ್ಥೆ ನಮ್ಮ ತಾಲ್ಲೂಕಿನಲ್ಲಿ ಫೋಟೋ ಹಚ್ಚಿಕೊಟ್ಟು ಹೋಗಿರುವ ಶೇಕಡ 60ರಷ್ಟು ಕಾರ್ಡುಗಳಲ್ಲಿ ಫೋಟೋಗಳು ಹೆಚ್ಚು ಕಡಿಮೆಯಾಗಿವೆ. ಯಾರ್‍ಯಾರ ಫೋಟೋ, ಯಾರ್‍ಯಾರದ್ದೋ ಕಾರ್ಡಿಗೆ ಹೋಗಿದೆ. ದಯವಿಟ್ಟು ಇದನ್ನು ತಹಶೀಲ್ದಾರ್ ಹಂತದಲ್ಲಿ, ತಾಲ್ಲೂಕು ಆಫೀಸಿನಲ್ಲಿಯೇ ಮಾಡತಕ್ಕಂಥ ಪ್ರಯತ್ನವನ್ನು ಖಂಡಿತ ಮಾಡಬೇಕು. ಇದರ

ಜೊತೆಗೆ, ಮತ್ತೊಂದು ವಿಷಯವೆಂದರೆ, ಎಲ್ಲ ಕಾರ್ಡುಗಳಲ್ಲಿ ಮೇಲೆ ಅನಿಲ ಎಂದು ಇದೆ, ಕೆಳಗೆ ಸಿಲಿಂಡರುಗಳ ಸಂಖ್ಯೆ zero ಎಂದು ಇದೆ. ಸಿಲಿಂಡರ್ ಇಲ್ಲದೇ ಅನಿಲ ಕೊಡತಕ್ಕಂಥ ವ್ಯವಸ್ಥೆ ನಮ್ಮ ರಾಜ್ಯದಲ್ಲಿ ಇದೆಯೋ, ಏನೋ ನನಗೆ ಗೊತ್ತಿಲ್ಲ. ಅವನಿಗೆ ಸೀಮೆಎಣ್ಣೆ ಕೂಡ ಸಿಗುತ್ತಿಲ್ಲ. ದಯವಿಟ್ಟು ಈ "ನೆಮ್ಮದಿ" ಕೇಂದ್ರದ ವ್ಯವಸ್ಥೆಯನ್ನು ತೆಗೆದು, ತಹಶೀಲ್ದಾರ್ ಹಂತದಲ್ಲಿ ಅಲ್ಲಿಯೇ ಒಂದು ವ್ಯವಸ್ಥೆಯನ್ನು ಮಾಡತಕ್ಕಂಥಾದ್ದನ್ನು ಮಾಡಿದರೆ ಈ ಪರಿಸ್ಥಿತಿ ಸದ್ಯಕ್ಕೆ ದುರಸ್ತಿಯಾದೀತು. ತಾಲ್ಲೂಕು ಆಫೀಸಿಗೆ ನಾಲ್ಕು-ನಾಲ್ಕು ಸಲ ಅರ್ಜಿಗಳನ್ನು ಕೊಟ್ಟಿದ್ದಾರೆ, ಅದಕ್ಕೆ ರಸೀದಿ ಇದೆ. ಖನೆಮ್ಮದಿಖ ಕೇಂದ್ರಕ್ಕೆ ಬೆಳಗ್ಗೆ ನಾಲ್ಕು ಗಂಟೆಗೇ ಬಂದು ಕಾದು ಕುಳಿತಿರುತ್ತಾರೆ. ಇನ್ನೂ ಕೂಡ ಕಾರ್ಡ್‌ಗಳನ್ನು ಕೊಟ್ಟಿಲ್ಲ. ಹೀಗಾಗಿ ಆ ಊರಿನ ನೆಮ್ಮದಿಯೇ ಕೆಟ್ಟು ಹೋಗಿದೆ, ನಮ್ಮ ನೆಮ್ಮದಿ ಕೊಟ್ಟು ಹೋಗಿದೆ. ದಯವಿಟ್ಟು ಇದನ್ನು ಸಂಪೂರ್ಣವಾಗಿ ಮರುಪರಿಶೀಲನೆ ಮಾಡಬೇಕು. ಇವತ್ತು ಮಂತ್ರಿಗಳು ಏನೊಂದು ಉತ್ತರ, ಸಮಜಾಯಿಷಿಯನ್ನು ಕೊಟ್ಟಿದ್ದಾರೆ ಇದರಿಂದ ಖಂಡಿತವಾಗಿ ಈ ಸಮಸ್ಯೆ ಪರಿಹಾರವಾಗುವುದಿಲ್ಲ. ದಯವಿಟ್ಟು ಇದಕ್ಕೆ ಏನಾದರೊಂದು ಹೊಸ ವ್ಯವಸ್ಥೆಯನ್ನು ಮಾಡಬೇಕು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಬೀದರ್ ಉತ್ತರ) :- ಮಾನ್ಯ ಅಧ್ಯಕ್ಷರೆ, ಎಲ್ಲ ಹಳ್ಳಿಗಳಲ್ಲಿ ಎಲ್ಲರ ಸಮಸ್ಯೆ ಎಂದರೆ ಪಡಿತರ ಚೀಟಿಯದ್ದಾಗಿದೆ. ನಾವು ಯಾವ ಹಳ್ಳಿಗೆ ಹೋಗದರೂ, ನಮಗೆ ಇಷ್ಟೊಂದು ಸಮಸ್ಯೆಯಾಗಿದೆ ಎಂದು ಹೇಳಿ ಬರೀ ಪಡಿತರ ಚೀಟಿಯ ಬಗ್ಗೆಯೇ ಅರ್ಜಿಗಳನ್ನು ಕೊಡುತ್ತಾರೆ. A.P.L.ಅನ್ನು B.P.L. ಮಾಡಿದ್ದಾರೆ, B.P.L.ಅನ್ನು A.P.L. ಮಾಡಿದ್ದಾರೆ. ಅದರ ಬಗ್ಗೆ ಮಾನ್ಯ ಸಚಿವರು ತಮ್ಮ ಹೇಳಿಕೆಯಲ್ಲಿ ಏನನ್ನೂ ಹೇಳಲಿಲ್ಲ. ಇಲ್ಲಿ ಬರೀ ಹೇಳಿಕೆ ಕೊಡುವುದರಿಂದ ಏನೂ ಆಗುವುದಿಲ್ಲ. ಇದಕ್ಕೆ ಮುಖ್ಯಮಂತ್ರಿಗಳೇ ಉತ್ತರ ಕೊಡಬೇಕಾಗುತ್ತದೆ ಮತ್ತು ಇದಕ್ಕೆ ಏನಾದರೊಂದು ಪರಿಹಾರವನ್ನು ಮಾಡ ಬೇಕಾಗುತ್ತದೆ. ಇಲ್ಲದಿದ್ದರೆ ಹಳ್ಳಿಗಳ ಸಮಸ್ಯೆ ಬಗೆಹರಿಯುವುದಿಲ್ಲ. ತಹಶೀಲ್ದಾರ್ ಮತ್ತು Revenue Inspector ಊರೂರಿಗೆ ಹೋಗಿ ಪಡಿತರ ಚೀಟಿಯನ್ನು ಕೊಡಬೇಕಾಗುತ್ತದೆ. ಈಗ ಫೋಟೋ ಹಿಡಿಸಿಕೊಳ್ಳಲು ತಾಲ್ಲೂಕು ಕೇಂದ್ರಗಳಿಗೆ ಬರಬೇಕಾಗಿದೆ. ಏನಾಗಿದೆ ಎಂದರೆ ಇದಕ್ಕಾಗಿ ಬಂದು ಮೂರು-ಮೂರು ದಿವಸ ಕುಳಿತು ಕಾಯ್ದು ವಾಪಸ್ಸು ಹೋಗುತ್ತಿದ್ದಾರೆ. ಅವರನ್ನು ಕೇಳುವವರು ಯಾರೂ ಇಲ್ಲ. ಬಸ್ಸಿಗೋ ಮತ್ತೊಂದಕ್ಕೋ ದುಡ್ಡು ಖರ್ಚು ಮಾಡಿಕೊಂಡು ಹಳ್ಳಿಗಳಿಂದ

ಬರಬೇಕು ಮತ್ತೆ ವಾಪಸ್ಸು ಹೋಗಬೇಕು ಮತ್ತೆ ಬರಬೇಕು ಈ ರೀತಿ ಪರಿಸ್ಥಿತಿಯಿದೆ. ಇದರಿಂದ ಬಹಳ ಅವ್ಯವಸ್ಥೆಯಾಗಿದೆ. ಇಷ್ಟು ಅವ್ಯವಸ್ಥೆಯಾಗಿದ್ದು, ಇದನ್ನು ಯಾವ ರೀತಿಯಲ್ಲಿ ಸುಧಾರಿಸಬೇಕು ಎನ್ನುವುದರ ಬಗ್ಗೆ ಯೋಚನೆ ಮಾಡಬೇಕು. ಇದು ಬಹಳ ಮಹತ್ವವಾದುದಾಗಿದೆ. ಎಲ್ಲ M.L.A.ಗಳಿಗೂ, ಅವರು ಯಾವ ಹಳ್ಳಿಗೆ ಹೋದರೂ ಅವರಿಗೆ ಇದೇ ಕಾಟವಾಗಿದೆ. ಇದನ್ನು ಸರಿಪಡಿಸಲಿಲ್ಲ ಎಂದರೆ ದೊಡ್ಡ ಸಮಸ್ಯೆಯಾಗುತ್ತದೆ. A.P.L.ಅನ್ನು B.P.L. ಎಂದು, B.P.L.ಅನ್ನು A.P.L. ಎಂದು ಮಾಡಿರುವುದನ್ನು ಸರಿಮಾಡಬೇಕು. ಹೊಸ ಅರ್ಜಿಗಳನ್ನು ತೆಗೆದುಕೊಳ್ಳಬೇಕು ಎಂದರೆ ಕೂಡಲೇ ಅವುಗಳನ್ನು ತೆಗೆದುಕೊಳ್ಳಬೇಕು. ತೆಗೆದುಕೊಂಡು ಸರಿ ಮಾಡಲಿಲ್ಲವೆಂದರೆ ಇದು ಒಂದು ದೊಡ್ಡ ಸಮಸ್ಯೆಯಾಗಿ ಕೂಡುತ್ತದೆ. ಇಲ್ಲದಿದ್ದರೆ ಯಾವ ಹಳ್ಳಿಯಲ್ಲಿಯೂ ಈ ಸಮಸ್ಯೆ ಬಗೆಹರಿಯತಕ್ಕಂಥಾದ್ದಲ್ಲ. ಆದ್ದರಿಂದ, ದಯವಿಟ್ಟು ಮುಖ್ಯಮಂತ್ರಿಗಳು ಇದರ ಬಗ್ಗೆ ಏನಾದರೂ ಹೇಳಬೇಕು. ಅವರು ಕೇಂದ್ರ ಸರ್ಕಾರದ ಜೊತೆ ಮಾತನಾಡಿ, ಅವರನ್ನು ಒತ್ತಾಯಿಸಿ, ವಿಶೇಷವಾದಂಥ permission ತೆಗೆದುಕೊಂಡು ಮಾಡಬೇಕು. ಕೇಂದ್ರದವರು ಕಡಿಮೆ permission ಕೊಟ್ಟಿದ್ದಾರೆ, ಆದ್ದರಿಂದ ನಾವು ಹೆಚ್ಚು ಕೊಡುವುದಕ್ಕೆ ಆಗುವುದಿಲ್ಲ ಎಂದು ಮಾನ್ಯ ಸದಸ್ಯರಾದ ಮಹದೇವ ಪ್ರಸಾದ್‌ರವರು ಹೇಳುತ್ತಿದ್ದರು. ಇದಕ್ಕೆ ಏನಾದರೂ ಮಾಡಬೇಕಲ್ಲವೇ? ಹಳ್ಳಿಗಳಲ್ಲಿ ಸ್ಥಿತಿ ಬಹಳ ಗಂಭೀರವಾಗಿದೆ. ಇದನ್ನು ಸರಿಮಾಡಿದಿದ್ದರೆ ಶಾಸಕರಾದ ನಾವ್ಯಾರೂ ಹಳ್ಳಿಗಳಿಗೆ ಹೋಗುವ ಹಾಗಿಲ್ಲ. ಅಸೆಂಬ್ಲಿಗೆ ಬರುತ್ತೇವೆ, ನಂತರ ವಾಪಸ್ಸು ಹೋಗಿ ಕೂಡುತ್ತೇವೆ, ಜನರಿಂದ ಬಯ್ಯಿಸಿಕೊಳ್ಳುತ್ತೇವೆ. ಆದ್ದರಿಂದ, ದಯವಿಟ್ಟು ಇದಕ್ಕೆ ಏನಾದರೊಂದು ಪರಿಹಾರವನ್ನು ಮಾಡಬೇಕು ಎಂದು ಕೇಳುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ (ಅರಸೀಕೆರೆ) :- ಮಾನ್ಯ ಅಧ್ಯಕ್ಷರೆ, ಪಡಿತರ ಚೀಟಿ ವಿತರಣೆಯ ವಿಚಾರದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ರೈತರು ಮತ್ತು ನಗರ ಪ್ರದೇಶಗಳಲ್ಲಿ ನಾಗರೀಕರು ಬಹಳ ಗೊಂದಲಕ್ಕೆ ಸಿಕ್ಕಿಹಾಕಿಕೊಂಡಿದ್ದಾರೆ. ಇದು ವಿಧಾನಸಭೆಯೋ, ಏನೋ ಎಂದು ನನಗೆ ಗೊತ್ತಾಗುತ್ತಿಲ್ಲ. ಇಲ್ಲಿ ಸದಸ್ಯರಾದ ನಾವು ಮಾತನಾಡುತ್ತಿದ್ದರೆ, ಆ ಕಡೆ ಎಲ್ಲರೂ ಗಲಾಟೆ ಮಾಡುತ್ತಿದ್ದಾರೆ.

ಅಧ್ಯಕ್ಷರು :- ಸದಸ್ಯರೆಲ್ಲರೂ ದಯವಿಟ್ಟು ಕುಳಿತುಕೊಳ್ಳಬೇಕು.

ಶ್ರೀ ಕೆ.ಎಂ. ಶಿವಲಿಂಗೇಗೌಡ :- ಆಡಳಿತ ಪಕ್ಷದವರು ಈ ರೀತಿ ನಡೆದುಕೊಂಡರೆ ಬಹಳ ಬೇಜಾರಾಗುತ್ತದೆ. ಏತಕ್ಕಾಗಿ ನಾವು 500 ಕಿ.ಮೀ. ದೂರದಿಂದ ಇಲ್ಲಿಗೆ ಬಂದಿರುವುದು? ಇದು ಜಿಲ್ಲಾ ಪಂಚಾಯಿತಿಗಿಂತ ಸ್ವಲ್ಪ ಕಡಿಮೆ ದರ್ಜೆಯಲ್ಲಿಯೇ ನಡೆಯುತ್ತಿದೆ. ಜಿಲ್ಲಾ ಪಂಚಾಯಿತಿಯಲ್ಲಿ ಸ್ವಲ್ಪ ಗೌರವಯುತವಾಗಿ ಯಾದರೂ ನಡೆದುಕೊಳ್ಳುತ್ತಾರೆ. ಆಡಳಿತ ಪಕ್ಷದವರಾದ ನೀವು ವಿರೋಧ ಪಕ್ಷದವರಿಗೆ ಸ್ವಲ್ಪ ಸಹಕಾರ ಕೊಡಬೇಕು. ನಮ್ಮ ಹಕ್ಕನ್ನು ಕಿತ್ತುಕೊಳ್ಳುವುದಕ್ಕೆ ನೀವು ಬಹಳ ಪ್ರಯತ್ನ ಮಾಡುತ್ತೀರಿ, ಇದು ರಾಜಕೀಯದಲ್ಲಿ ಒಳ್ಳೆಯದಲ್ಲ.

ಅಧ್ಯಕ್ಷರು :- ಶಿವಲಿಂಗೇಗೌಡರೇ ನೀವು ಮಾತನಾಡಿ, ವಿಷಯಕ್ಕೆ ಬನ್ನಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ :- ವಿಷಯಕ್ಕೆ ಬನ್ನಿ ಎಂದರೆ ಹೇಗೆ? ನಾನು ಮಾತನಾಡುವುದು ಯಾರಿಗಾದರೂ ಕೇಳಬೇಕಲ್ಲವೇ? ಕೇಳದಿದ್ದರೆ ನಾನು ಮಾತನಾಡಿ ಏನು ಪ್ರಯೋಜನ? ಸಚಿವರು ಕೇಳಬೇಕು. ನನ್ನನ್ನು ಕುಳಿತುಕೊಳ್ಳಿ ಎಂದು ಹೇಳುವುದು ನಿಮ್ಮ ಹಕ್ಕು ಅಲ್ಲ. ನನಗೆ 75 ಸಾವಿರ ಜನ ಓಟು ಹಾಕಿದ್ದಾರೆ, ಅದು ಅವರ ಹಕ್ಕು. ನೀವು ಹೇಳಿದ ತಕ್ಷಣ ಕುಳಿತುಕೊಳ್ಳುವುದಾಗಿದ್ದರೆ ನಾನೇಕೆ ಇಲ್ಲಿಗೆ ಬರಬೇಕಿತ್ತು?

ಒಬ್ಬ ಮಾನ್ಯ ಸದಸ್ಯರು :- ಬರೀ ಮಾತನಾಡುತ್ತೇನೆ ಎಂದು ಹೇಳುತ್ತಿದ್ದೀರಿ, ಆದರೆ ಇದನ್ನೇ ಮಾತನಾಡುತ್ತಿದ್ದೀರಿ, ನೀವು ವಿಷಯವನ್ನು ಮಾತನಾಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ :- ನೀವು ಸುಮ್ಮನೆ ಇರಿ, ನಾನು ಮಾತನಾಡುತ್ತೇನೆ.

ಒಬ್ಬ ಮಾನ್ಯ ಸದಸ್ಯರು :- ವಿಷಯವನ್ನು ಬಿಟ್ಟು ಬೇರೆಲ್ಲವನ್ನೂ ನೀವು ಮಾತನಾಡುತ್ತಿದ್ದೀರಿ.

(ಗೊಂದಲ)

ಅಧ್ಯಕ್ಷರು :- ವಲ್ಯಾಪುರೆರವರೇ, ಶ್ರೀಶೈಲಪ್ಪ ಬಿದರೂರುರವರೇ ದಯಮಾಡಿ ಕುಳಿತುಕೊಳ್ಳಿ. ಶಿವಲಿಂಗೇಗೌಡರೇ ನೀವು ಮಾತನಾಡಿ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ :- ಪ್ರತಿಯೊಂದು ವಿಷಯಕ್ಕೂ ಹೀಗೆ ಮಾಡುತ್ತೀರಿ ಎಂದರೆ ಇದೇನು ವಿಧಾನಸಭೆಯೇ? ಗ್ರಾಮೀಣ ಪ್ರದೇಶಗಳಲ್ಲಿ ಪಡಿತರ ಚೀಟಿ ವಿಚಾರದಲ್ಲಿ ಬಹಳ ಹಿಂದಿನಿಂದಲೂ ಸಮಸ್ಯೆ ಇದೆ. ಪಡಿತರ ಚೀಟಿಗೆ ಬಹಳ ಮಹತ್ವ ಬಂದಿದೆ. ಮಾಜಿ ಸಚಿವರು ಹೇಳಿದ ರೀತಿಯಲ್ಲಿ, ಪಡಿತರ ಚೀಟಿಯನ್ನು ಪ್ರತಿಯೊಂದಕ್ಕೂ ಗುರುತಿನ ಚೀಟಿಯಾಗಿ ಮಾರ್ಪಾಡು ಮಾಡಿದ್ದಾರೆ. ಆ ರೀತಿಯಲ್ಲಿ ಅದನ್ನು ಕೇಳುತ್ತಾರೆ. ಆಸ್ಪತ್ರೆಗೆ ಹೋದರೆ ಅಲ್ಲೂ ಕೇಳುತ್ತಾರೆ, ಪ್ರತಿಯೊಂದು ಕಡೆಯಲ್ಲಿಯೂ ಕೇಳುತ್ತಿದ್ದಾರೆ. ಪಡಿತರ ಚೀಟಿಯ ಮುಖಾಂತರ ಆಹಾರ ಧಾನ್ಯಗಳನ್ನು ವಿತರಣೆ ಮಾಡುವಂಥಾದ್ದನ್ನು ಹಂತಹಂತವಾಗಿ ಏನು ಬದಲಾವಣೆಗಳನ್ನು ಮಾಡಿಕೊಂಡು ಬಂದರು, ಅದರಲ್ಲಿ ಯೂನಿಟ್ ಲೆಕ್ಕ ಬಂದ ಮೇಲೆ ಈ ಸಮಸ್ಯೆ ಅತಿಯಾಗಿದೆ. ಯೂನಿಟ್ ವ್ಯವಸ್ಥೆಯನ್ನು ತಂದ ಮೇಲೆ, ಹಿಂದೆ 20 ಕೆ.ಜಿ. ಅಕ್ಕಿ ದೊರೆಯುತ್ತಿದ್ದಂಥ ಕುಟುಂಬಕ್ಕೆ ಈಗ ನಾಲ್ಕು ಕೆ.ಜಿ. ಅಕ್ಕಿ ದೊರೆಯುತ್ತಿದೆ. ಕೆಲವು ಕುಟುಂಬಗಳಲ್ಲಿ ಫೋಟೋವನ್ನೇ ತೆಗೆಸಿಲ್ಲ. ಕುಟುಂಬಕ್ಕೆ ಒಂದೇ ಕಾರ್ಡ್ ಎಂದು ಇವತ್ತು ಮಾಡಿದ್ದು, ಆ ಕುಟುಂಬದ ಜನಸಂಖ್ಯೆಯ ಆಧಾರದ ಮೇಲೆ ಆಹಾರ ಧಾನ್ಯಗಳನ್ನು ವಿತರಣೆ ಮಾಡದೇ, ಕೇವಲ ಯೂನಿಟ್ ಆಧಾರದ ಮೇಲೆ ಆಹಾರ ಧಾನ್ಯಗಳನ್ನು ವಿತರಣೆ ಮಾಡುತ್ತಿರುವುದರಿಂದ ಪಡಿತರ ಕಾರ್ಡಿಗೆ ಇವತ್ತು ಬೇಡಿಕೆ ಜಾಸ್ತಿಯಾಗಿದೆ. ಇವತ್ತು ಸರ್ಕಾರದಲ್ಲಿ G9 ಎಂದು ಕಾರ್ಡ್ ಕೊಟ್ಟರು. ಆ ಕಾರ್ಡುಗಳಿಗೆ ಈಗಾಗಲೇ ಫೋಟೋ ತೆಗೆಸಿದ್ದಾರೆ. ಆದರೆ ಅದಕ್ಕೂ ಮೊದಲು, ರಾಜ್ಯದಲ್ಲಿ ರಾಜ್ಯಪಾಲರ ಆಡಳಿತ ಇದ್ದಂಥ ಕಾಲದಲ್ಲಿ ಬಹಳಷ್ಟು ಕಾರ್ಡುಗಳನ್ನು 60 ಪರ್ಸೆಂಟಿಗೆ ಲಿಮಿಟ್ ಮಾಡಿ 75%-78% ಕೊಟ್ಟರು. ಹೀಗೆ ಕೊಟ್ಟು, G9 ಕಾರ್ಡನ್ನು 60 ಪರ್ಸೆಂಟಿಗೆ ರೆಡ್ಯೂಸ್ ಮಾಡಿ ರಾತ್ರೋರಾತ್ರಿ ಆ ಕಾರ್ಡ್‌ಗಳನ್ನು ತೆಗೆದು ಹಾಕಿದರು. ಈ ರೀತಿ ತೆಗೆದು ಹಾಕಿದಂಥವರೆಲ್ಲ ನಿಜವಾದಂಥ ಫಲಾನುಭವಿಗಳೇ.

ಆದರೆ, Village Accountant ಊರಿಗೆ ಹೋಗಿ ಯಾರ ಕಾರ್ಡ್ ಅನ್ನು ತೆಗೆಯಬೇಕೆನ್ನುವ ಜಿಜ್ಞಾಸೆಯಲ್ಲಿ ತಾಲ್ಲೂಕು office ನಲ್ಲಿಯೇ ಕುಳಿತು ಯಾರು ನಿಜವಾದ ಬಡವನಿದ್ದಾನೆ, ನನ್ನ ಕಾರ್ಡನ್ನು ಏಕೆ ತೆಗೆದುಹಾಕಿದ್ದೀರಿ ಎಂದು ಕೇಳುವಂಥ ಸಾಮರ್ಥ್ಯ ಇಲ್ಲದಿರುವಂಥ ವ್ಯಕ್ತಿಗಳ ಕಾರ್ಡ್ ಅನ್ನು Village Accountant ತೆಗೆದುಹಾಕಿದಂಥ ಸಂದರ್ಭದಲ್ಲಿ G9

card ನಲ್ಲಿ ಕೇವಲ ಸೀಮೆ ಎಣ್ಣೆ ಬಿಟ್ಟರೆ ಪಡಿತರವನ್ನು ರದ್ದು ಮಾಡಿದರು. ಅದನ್ನು APL card ಆಗಿ ಪರಿವರ್ತನೆ ಮಾಡಿದರು. ಅದನ್ನು ಪರಿವರ್ತನೆ ಮಾಡಿದಂಥ ಸಂದರ್ಭದಲ್ಲಿ ಸುಮಾರು ಕಾರ್ಡುದಾರರಿಗೆ, ನಿಜವಾದ ಫಲಾನುಭವಿಗಳಿಗೆ ಪಡಿತರ ಸಿಗದೆ ಅವರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಇಂಥ ಪಡಿತರ ಚೀಟಿದಾರರು ಗ್ರಾಮಾಂತರ ಪ್ರದೇಶದಲ್ಲಿ ಬಹಳಷ್ಟು ಜನ ಇರತಕ್ಕಂಥ ಪರಿಸ್ಥಿತಿಯಲ್ಲಿ ಅವರೂ ಈಗ ನೆಮ್ಮದಿ ಕೇಂದ್ರಕ್ಕೆ ಬಂದಿದ್ದಾರೆ. G9 ನಲ್ಲಿ ಒಂದು ಹಂತದಲ್ಲಿ ಕಾರ್ಡ್ ಆಗಿದೆ. G9 ಎಂದು ಏನು ಕೊಟ್ಟಿದ್ದಿರಿ, ಯಾರು ಅದನ್ನು reject ಮಾಡಿದ್ದರು, ಅವರು ಇವತ್ತು ನೆಮ್ಮದಿ ಕೇಂದ್ರದಲ್ಲಿದ್ದಾರೆ. ಆ ನೆಮ್ಮದಿ ಕೇಂದ್ರದಲ್ಲಿ ಏನಾಗಿದೆ ಎಂದರೆ, ಈಗಾಗಲೆ G9 ನಲ್ಲಿ ಒಂದು ಕಾರ್ಡ್ ಕೊಟ್ಟಿದ್ದಾರೆ. ಆ ಕಾರ್ಡ್ ಕೊಟ್ಟಾಗ ಅದು APL card ಆಗಿ ಪರಿವರ್ತನೆಯಾಗಿದೆ. ಇವತ್ತು ಅವರು ಫೋಟೋ ತೆಗೆಸಿಕೊಳ್ಳುವುದಕ್ಕೆ ಹೋದರೆ ಅಲ್ಲಿ ಈಗಾಗಲೇ APL card ನಲ್ಲಿ ಅವರ photo print ಆಗಿರುವುದು ಕಂಡುಬಂತು. ಈಗ ಅವನು ಬಡವ. ನಿಜವಾದ ಫಲಾನುಭವಿ APL, BPL card ಪಡೆಯುವುದಕ್ಕೆ ಅರ್ಹನಾದಂಥ ವ್ಯಕ್ತಿ ಇದ್ದಾನೆ, ಅರ್ಹ ಕುಟುಂಬವಾಗಿ ದೆ. ಆದರೆ, ಇವತ್ತು ಅದು APL card ಆಗಿ ಪರಿವರ್ತನೆಯಾಗಿದೆ. Photo ವನ್ನೂ ಅವರು ತೆಗೆಸಿಕೊಂಡಿಲ್ಲ. ಈಗ affidavit ಕೇಳುತ್ತಿದ್ದೀರಿ. Affidavit ಅನ್ನು ಕೊಡುವುದಕ್ಕೆ ಹೋದರೆ ಆ ಜನರಿಗೆ ಆ ಬಗ್ಗೆ ಗೊತ್ತಿಲ್ಲ. ಪಾಪ, ಸಾಲುಗಟ್ಟಿ ನಿಲ್ಲುತ್ತಾರೆ. 20 ರೂ. ಛಾಪಾ ಕಾಗದ ತೆಗೆದುಕೊಂಡು ಇಡೀ ದಿವಸ ನಿಂತು ನೆಮ್ಮದಿ ಕೇಂದ್ರಕ್ಕೆ ಕೊಡುತ್ತಿದ್ದಾರೆ. ಅವರಿಗೆ ಕೊನೆಗೆ ನೀವು ಏನು ಹೇಳುತ್ತೀರಿ, ನಿಮ್ಮ ಹತ್ತಿರ ಯಾವುದು APL card ಇರುವುದರಿಂದ ನಿಮಗೆ ಕೊಡುವುದಕ್ಕೆ ಬರುವುದಿಲ್ಲವೆಂದು ಹೇಳಿದ ತಕ್ಷಣ ಇವತ್ತು ಏನು ಸಾಲುಗಟ್ಟಿ affidavit ಅನ್ನು ಕೊಟ್ಟಿರುತ್ತಾರೆ ಅವರು ನಿಜವಾಗಿಯೂ ಸಂಕಷ್ಟಕ್ಕೆ ಸಿಲುಕುವ ಪರಿಸ್ಥಿತಿ ಇದೆ. ಆದ್ದರಿಂದ, ಮೊದಲೇ ಸರ್ಕಾರ, ನಿರ್ದಿಷ್ಟವಾದ ಸೂಚನೆಗಳನ್ನು ಕೊಡಬೇಕು ಮತ್ತು ಇವತ್ತೇನು ನೆಮ್ಮದಿ ಕೇಂದ್ರಗಳಿಗೆ ಹೋಗಿ ಫೋಟೊ ತೆಗೆಸುವ ಜನರಿದ್ದಾರೆ, ಒಂದು ಕುಟುಂಬದಲ್ಲಿ 10 ಜನ ಇರುತ್ತಾರೆ. ಎಷ್ಟೇ ಜನ ಇರಲಿ, 5 ಜನಕ್ಕಿಂತ ಮೇಲೆ ಇರುವಂಥವರಿಗೆ 20 ಕೆ.ಜಿ.ಯನ್ನು ನಿಗದಿ ಮಾಡಿದ್ದೀರಿ. ಅಂದರೆ unit ಆಧಾರದ ಮೇಲೆ ಕೊಡುತ್ತಿರುವುದರಿಂದ ಆ ಕುಟುಂಬಕ್ಕೆ ಅದು ಸಾಕಾಗುವುದಿಲ್ಲ. ಅವರು ಮತ್ತೊಂದು ಪಡಿತರ ಚೀಟಿಯನ್ನು ಪಡೆಯತಕ್ಕಂಥ ಉದ್ದೇಶದಿಂದ ಇನ್ನುಳಿದಂಥ 4 ಜನರನ್ನು ಕರೆದುಕೊಂಡು ಅವರು ನೆಮ್ಮದಿ ಕೇಂದ್ರಕ್ಕೆ

ಹೋಗುತ್ತಿದ್ದಾರೆ. ಮತ್ತೆ ನೀವೇನಾದರೂ ಅದೇ ಕುಟುಂಬ ಎಂದು ಏನಾದರೂ reject ಮಾಡಿದರೆ, ನಿಜವಾಗಿಯೂ ಆ ಕುಟುಂಬ ಸಂಕಷ್ಟಕ್ಕೆ ಸಿಕ್ಕಿಹಾಕಿಕೊಳ್ಳುತ್ತದೆ. ಇವತ್ತು ನೆಮ್ಮದಿ ಕೇಂದ್ರಕ್ಕೆ ಹೋಗುವುದಕ್ಕೆ 300 ರಿಂದ 400 ರೂ. ಖರ್ಚಾಗುತ್ತದೆ. ಆದ್ದರಿಂದ, ದಯಮಾಡಿ ಮೊದಲೇ ನಿರ್ದಿಷ್ಟವಾಗಿ G9 ನಲ್ಲಿ ಯಾರು reject ಆಗಿದ್ದಾರೆ, ಆ ಅರ್ಹ ಫಲಾನುಭವಿಗಳು apply ಮಾಡಬಹುದು, APL ನಲ್ಲಿದ್ದರೂ apply ಮಾಡಬಹುದು ಅಂಥವರಿಗೆ ನಾವು ಕೊಟ್ಟೇ ಕೊಡುತ್ತೇವೆನ್ನುವ ಭಾವನೆಯನ್ನು ವ್ಯಕ್ತಪಡಿಸಿ ಸರ್ಕಾರ ಒಂದು ನಿರ್ದಿಷ್ಟವಾದ ತೀರ್ಮಾನ ತೆಗೆದುಕೊಂಡು ಇಂಥವರು ಮಾತ್ರವೇ ನೆಮ್ಮದಿ ಕೇಂದ್ರಕ್ಕೆ ಹೋಗಿ ಎಂದು ಹೇಳಿ ನಿರ್ದಿಷ್ಟವಾದಂಥ ಹೇಳಿಕೆಯನ್ನು ಸರ್ಕಾರದ ಪರವಾಗಿ ಕೊಡದೇ ಹೋದರೆ ಬಹುಶಃ ಇದು ದೊಡ್ಡ ಗಂಡಾಂತರಕ್ಕೆ ಸಿಲುಕುತ್ತದೆ. ಜನ ಬಹಳ ಸಂಕಷ್ಟಕ್ಕೆ ಸಿಕ್ಕಿಬೀಳುತ್ತಾರೆ. ನೆಮ್ಮದಿ ಕೇಂದ್ರಗಳಿಗೆ ಹೋಗಿ ಫೋಟೋ ತೆಗೆಸಿ ಕೊನೆಗೆ ಒಂದು ದಿವಸ ಅವರು ಸರ್ಕಾರದ ವಿರುದ್ಧವೇ ಮಾತನಾಡುವ ಭಾವನೆ ಬರುತ್ತದೆ. ಅದಕ್ಕೋಸ್ಕರ ಸರ್ಕಾರ ಏನು ನಿರ್ಧಾರ ತೆಗೆದುಕೊಳ್ಳುತ್ತದೆ? ನಿರ್ದಿಷ್ಟ ದಾಖಲೆಗಳ ಆಧಾರದ ಮೇಲೆ ನೀವು ನೆಮ್ಮದಿ ಕೇಂದ್ರಕ್ಕೆ ಹೋಗಿ ಎಂದು ಫಲಾನುಭವಿಗಳಿಗೆ ನಿರ್ದಿಷ್ಟವಾದ ಸೂಚನೆ, ಸಲಹೆ, ನೀಡುವ ವ್ಯವಸ್ಥೆಯನ್ನು ಮಾಡುವ ದೃಷ್ಟಿಯಿಂದ ಸರ್ಕಾರ ಮಾಡಬೇಕು. ಮಾನ್ಯ ಸಚಿವರಾದ ಹಾಲಪ್ಪನವರು ಬಹಳ ಕಷ್ಟ ಪಟ್ಟು ಕೆಲಸ ಮಾಡುತ್ತಿದ್ದಾರೆ. ಇವತ್ತು ಅವರು ಸಾಕಷ್ಟು ಸಮಸ್ಯೆಗಳನ್ನು ನಿವಾರಣೆ ಮಾಡಿದ್ದಾರೆ. ಆದರೆ, ಇವತ್ತಿನ ದಿವಸ ಸಮಸ್ಯೆಗಳನ್ನು ನಿವಾರಣೆ ಮಾಡುವ ದೃಷ್ಟಿಯಿಂದ ಈ ವಿಚಾರವನ್ನು ಕೂಡಲೇ ನಿರ್ದಿಷ್ಟವಾದ ನಿರ್ಣಯಗಳನ್ನು ತೆಗೆದುಕೊಂಡು ಇಂಥವರೇ ನೆಮ್ಮದಿ ಕೇಂದ್ರಕ್ಕೆ ಹೋಗಬೇಕು ಎಂದು ನಿಖರವಾದ ಸೂಚನೆಯನ್ನು ಸರ್ಕಾರ ಕೊಡದೇ ಹೋದರೆ, ಬಹುಶಃ ಫಲಾನುಭವಿಗಳು ಸಂಕಷ್ಟಕ್ಕೆ ಸಿಲುಕುತ್ತಾರೆ ಎಂದು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರುತ್ತೇನೆ.

ಶ್ರೀ ಪಿ.ಎಂ. ಅಶೋಕ್ ಪಟ್ಟಣ (ರಾಮದುರ್ಗ ಕ್ಷೇತ್ರ) :- ಮಾನ್ಯ ಅಧ್ಯಕ್ಷರೆ, ಸರ್ಕಾರದ ವತಿಯಿಂದ ನೆಮ್ಮದಿ ಕೇಂದ್ರಗಳನ್ನು ತೆರೆದಿರುವಂಥದ್ದು ಎಲ್ಲಾ ಜನರ ನೆಮ್ಮದಿ ಕೆಡಿಸಿದೆ. ನೆಮ್ಮದಿ ಕೇಂದ್ರ ಇಡಲೇಬೇಕೆಂದು ಸರ್ಕಾರ ಬಯಸಿದರೆ, ಗ್ರಾಮ ಮಟ್ಟದಲ್ಲಿ 15 ದಿವಸ ಇಟ್ಟುಕೊಳ್ಳಿ, ತಾಲ್ಲೂಕು ಪಂಚಾಯತಿಯಲ್ಲಿ 10 ದಿವಸ ಇಟ್ಟುಕೊಳ್ಳಿ, ಆಮೇಲೆ Taluk Head quarters ನಲ್ಲಿ ಮಾಡಿ. ಇದರಿಂದ

ಬಡವರಿಗೆ ಅನುಕೂಲವಾಗುತ್ತದೆ. 20 ರೂ. ಛಾಪಾಕಾಗದದಲ್ಲಿ ಬರೆದು ಕೊಡಬೇಕೆಂದು ಏನು ಮಾಡಿದ್ದೀರಿ, ಗ್ರಾಮೀಣ ಭಾಗದಲ್ಲಿ 20 ರೂ. ಸ್ಟ್ಯಾಂಪ್ ಪೇಪರ್ ಸಿಗುತ್ತಿಲ್ಲವಾದ್ದರಿಂದ 50 ರೂಪಾಯಿಗಳ ಸ್ಟಾಂಪ್ ಪೇಪರ್ ತೆಗೆದುಕೊಂಡು ಟೈಪ್ ಮಾಡಿಸಿ Notary ಮುಂದೆ ಹೋಗಿ ಕೋರ್ಟ್‌ಗೆ ಹೋಗಿ affidavit ಮಾಡಿಸುವಷ್ಟರಲ್ಲಿ 300 ರೂ. ಖರ್ಚಾಗುತ್ತಿದೆ. ಆದ್ದರಿಂದ, ಅದನ್ನು ರದ್ದುಮಾಡಿ, ಇಲ್ಲವೆಂದರೆ, 5 ರೂಪಾಯಿಗಳ ಸ್ಟ್ಯಾಂಪ್ ಪೇಪರ್‌ನಲ್ಲಿ ಮಾಡಲಿ, ಇಲ್ಲವೇ ಅವರೇ ಒಂದು affidavit ತಂದು ಅವರದೇ ಒಂದು ಪತ್ರದ ಮುಖಾಂತರ ನೀವು guarantee ತೆಗೆದುಕೊಂಡು ಮಾಡಿದರೆ ಒಳ್ಳೆಯದಾಗುತ್ತದೆಂದು ನಾನು ಸರ್ಕಾರಕ್ಕೆ ತಿಳಿಸಬಯಸುತ್ತೇನೆ.

ಶ್ರೀ ನೆ.ಲ. ನರೇಂದ್ರ ಬಾಬು (ಮಹಾಲಕ್ಷ್ಮಿ ಲೇಔಟ್) :- ಮಾನ್ಯ ಅಧ್ಯಕ್ಷರೆ, ನಾನು 2 ಸಲ ಈ ವಿಧಾನಸಭೆಯ ಸದಸ್ಯನಾಗಿದ್ದೇನೆ. ಇದುವರೆಗೂ ನನ್ನ ಕ್ಷೇತ್ರದ ಜನತೆಯ ಒಬ್ಬರಿಗೂ BPL card ಅನ್ನು ಕೊಡಿಸಲಿಕ್ಕೆ ಆಗಲಿಲ್ಲವೆಂದು ಬಹಳ ನೊಂದು ಈ ಮಾತನ್ನು ಹೇಳುತಿದ್ದೇನೆ. ಹಿಂದೆ ಮಾನ್ಯ ರಾಮಲಿಂಗಾರೆಡ್ಡಿಯವರು ಸದಸ್ಯರಾಗಿದ್ದಾಗ ನಾನು ಮಹಾನಗರ ಪಾಲಿಕೆಯ ಸದಸ್ಯನಾಗಿದ್ದೆ. ಆ ಸಂದರ್ಭದಲ್ಲಿ ಬೆಂಗಳೂರು ನಗರದಲ್ಲಿ ಜನರನ್ನು ಕರೆದು ಕಡು ಬಡವರನ್ನು ಗುರುತಿಸಿ ಪಡಿತರ ಚೀಟಿ ಕೊಟ್ಟರು. ನಾನು ಹಿಂದಿನ ಎಲ್ಲಾ ಸಚಿವರನ್ನು ಕೇಳಿದ್ದೆ. ಆದರೆ, ಕೊಡಲಿಕ್ಕೆ ಆಗಲಿಲ್ಲ. ದಯವಿಟ್ಟು ತಿಳಿದುಕೊಳ್ಳಬೇಕು. ನಗರಪ್ರದೇಶದಲ್ಲಿಯೂ ಕಡುಬಡವರಿದ್ದಾರೆ. ಶೇಕಡ 65 ರಿಂದ 70 ರಷ್ಟು ಬಡತನ ರೇಖೆಗಿಂತ ಕೆಳಗಡೆ ಇರುವ ಜನರಿದ್ದಾರೆನ್ನುವುದನ್ನು ಅಧಿಕಾರಿಗಳು ಮತ್ತು ಸಂಬಂಧಪಟ್ಟವರು ತಿಳಿದುಕೊಳ್ಳಬೇಕೆಂದು ನಾನು ಮೊದಲನೆಯದಾಗಿ ಸಚಿವರಿಗೆ ಹೇಳಲಿಕ್ಕೆ ಬಯಸುತ್ತೇನೆ. ಎರಡನೆಯದಾಗಿ, ಇವತ್ತು ನೆಮ್ಮದಿ ಕೇಂದ್ರವೆಂದು ಹೇಳುತ್ತಿದ್ದಾರೆ. ನಮ್ಮಲ್ಲಿ ನೆಮ್ಮದಿ ಕೇಂದ್ರಗಳೇ ಇಲ್ಲ. ಇನ್ನು ನನ್ನ ಕ್ಷೇತ್ರದಲ್ಲಿ ನೆಮ್ಮದಿ ಕೊಡುವುದಾದರೂ ಹೇಗೆ? ಎಂದು ನಾನು ನೊಂದು ಹೇಳುತ್ತಿದ್ದೇನೆ. ಕೆಂಪೇಗೌಡ ರಸ್ತೆಯಲ್ಲಿ ಮೈಸೂರು ಬ್ಯಾಂಕ್ ಮುಂದುಗಡೆ 4ನೇ floor ನಲ್ಲಿ ತಹಶೀಲ್ದಾರ್ ಆಫೀಸ್ ಇದೆ. ಇವತ್ತು old age pension ಆಗಲಿ, widow pension ಆಗಲಿ, ಅದನ್ನು ತೆಗೆದುಕೊಳ್ಳಬೇಕೆಂದು ಹೋದರೆ, ಆ ಬಾಧೆ ಏನೆಂದು lift ಹತ್ತಿ ಹೋಗುವವರಿಗೆ ಗೊತ್ತಾಗುತ್ತದೆ. ಆ lift ಸಹ ಇಲ್ಲ. ನಡೆದುಕೊಂಡು ಹೋಗಬೇಕಾದರೆ ಬಹುಶ: ಆ ವ್ಯಕ್ತಿ ಏನಾದರೂ heart patient ಆದರೆ

ಸತ್ತು ಹೋಗಿಬಿಡುತ್ತಾರೆ. ದಯವಿಟ್ಟು ಹೇಳುತ್ತೇನೆ, ಪ್ರತಿಯೊಂದು ವಿಧಾನಸಭಾ ಕ್ಷೇತ್ರದಲ್ಲಿ ಅದು ನಗರವಾಗಿರಲಿ, ಎಲ್ಲಿಯೇ ಆಗಲಿ, ನೆಮ್ಮದಿ ಕೇಂದ್ರವನ್ನು ತೆಗೆಯಬೇಕೆನ್ನುವ ಇಚ್ಛಾಶಕ್ತಿ ಸರ್ಕಾರಕ್ಕೆ ಬರಬೇಕು. ನನ್ನ ಕ್ಷೇತ್ರದಲ್ಲಿ ಅರ್ಜಿ ಕೊಟ್ಟು DC ಯವರನ್ನು ಕರೆಸಿ ಒಂದೂವರೆ ತಿಂಗಳಾಯಿತು. DC ಯವರು ಏನೂ ಮಾಡಲಿಲ್ಲ, ನೆಮ್ಮದಿ ಕೇಂದ್ರವೂ ಇಲ್ಲ, ಏನೂ ಇಲ್ಲ. ನಮ್ಮ ಜನರಿಗೆ ನಾನು ಏನು ಹೇಳಲಿ? ಎಲ್ಲೋ ಒಂದು ಕಡೆ ಪ್ರಾರಂಭ ಮಾಡುತ್ತಾರೆ. ಮೊನ್ನೆ ration cardಗೆ ಫೋಟೊ ತೆಗೆಯಲಿಕ್ಕೆ ಹೋಗಿದ್ದಾರೆ. ಅಲ್ಲಿಯೂ ಡಿಪೋರವರು ಕಳ್ಳ ಕಾರ್ಡ್ ಮಾಡಲಿಕ್ಕೆ, ಬೋಗಸ್ ಕಾರ್ಡ್ ಮಾಡಲಿಕ್ಕೆ ತಯಾರಾಗಿರುತ್ತಾರೆ. ಅಲ್ಲಿ ಫೋಟೋ ತೆಗೆಯಲಿಕ್ಕೆ ಹೋದಾಗ ನಾನು Deputy Director ಗೆ ಹೇಳಿದೆ. ದಯವಿಟ್ಟು ಆ ಪ್ರಕ್ರಿಯೆಯನ್ನು ನಿಲ್ಲಿಸಿ, ನೆಮ್ಮದಿ ಕೇಂದ್ರವನ್ನು ಒಂದು ಸರ್ಕಾರಿ ಕಛೇರಿಯ ಕಟ್ಟಡದಲ್ಲಿ ಮಾಡಿ ಎಂದು ಕೇಳಿದೆ. ನಾನು ವಿನಂತಿ ಮಾಡುತ್ತೇನೆ, ಮೊನ್ನೆ ಒಬ್ಬ ಹೆಣ್ಣುಮಗಳು ಬಂದು ಕಣ್ಣೀರು ಹಾಕಿದಳು. ನಾನು ಮನೆಗೆಲಸ ಮಾಡುತ್ತೇನೆ, ನನಗೆ APL card ಕೊಟ್ಟಿದ್ದಾರೆ, BPL card ಕೊಡಿಸಿ, ನನಗೆ ಸೀಮೆ ಎಣ್ಣೆ ಬೇಕಾಗಿದೆ, ನೀವು ಎರಡು ಸಲ ಶಾಸಕರಾಗಿದ್ದೀರಿ, ನಾವು ಎರಡು ಸಲವೂ ನಿಮಗೆ ಓಟು ಹಾಕಿದ್ದೇವೆ, ನಿಮ್ಮಿಂದ ಇನ್ನೂ ನಾವು ಕೇಳಿದ್ದನ್ನು ಕೊಡಿಸುವುದಕ್ಕಾಗಿಲ್ಲ ಎಂದು ಕೇಳಿದಾಗ ನಾನು ಏನು ಉತ್ತರ ಕೊಡಲಿ? ಬಹುಶ: ಎಲ್ಲಾ ಶಾಸಕರಿಗೂ ಈ ನೋವು ಇರಬಹುದು. ದಯವಿಟ್ಟು, ಆಹಾರ ಸಚಿವರ ಸ್ಥಾನದಲ್ಲಿ ಕುಳಿತುಕೊಳ್ಳತಕ್ಕಂಥವರು, ಮುಖ್ಯಮಂತ್ರಿಸ್ಥಾನದಲ್ಲಿರುವವರಿಗೆ ನಾನು ವಿನಂತಿ ಮಾಡುತ್ತೇನೆ. ಇವತ್ತು ಮೊದಲು BPL card ಕೊಡಿ. ಇಲ್ಲವೆಂದರೆ ಹೇಳುತ್ತೇನೆ, ಯಾವ ಶಾಸಕರೂ ಸಹ ಜನರನ್ನು ಎದುರಿಸಲಿಕ್ಕೆ ಸಾಧ್ಯವಿಲ್ಲ. ಏನು ಇವತ್ತು ನಮಗೆ ಅಂಕಿಅಂಶವನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ, ಅದನ್ನು ಮಾಡಲು ಸುಮಾರು 200 ಕೋಟಿ ರೂಪಾಯಿ ಆಗುತ್ತದೆ. ಹಿಂದೆ 40 ರೂಪಾಯಿಗಳನ್ನು ಕಲೆಕ್ಟ್ ಮಾಡಿದ್ದರಲ್ಲಾ ಅದು ಎಲ್ಲಿ ಹೋಯಿತು? ಕೊಮ್ಯಾಟ್ ಎನ್ನುವ ಸಂಸ್ಥೆ ಹಣ ಲೂಟಿ ಮಾಡುತ್ತಿದೆ. ಇವತ್ತು ಆ ಹುಡುಗರನ್ನೇ ಕೆಲಸಕ್ಕೆ ಇಟ್ಟುಕೊಂಡಿದ್ದಾರೆ. ಬೆಳಗ್ಗೆ 9.30ಕ್ಕೆ, 10-30 ಗಂಟೆಗೆ ಬರುತ್ತಾರೆ. ಅಲ್ಲಿ ಸ್ಥಿರವಾಗಿರುವ ಕೇಂದ್ರ ತೆರೆಯಲಿ, 2 ಮೊಬೈಲ್ ಮಾಡಲಿ, ದಯವಿಟ್ಟು ಇಡೀ ಕುಟುಂಬದವರು ಹೋಗುವ ಹಾಗಿರಬೇಕು. ಬಹುಶ: ಬಹಳಷ್ಟು ಪತ್ರಕರ್ತರಿಗೂ ಗೊತ್ತಿರಬೇಕು. ಮಾಧ್ಯಮ ದವರಿಗೂ ಗೊತ್ತು. ಪ್ರತಿಯೊಂದು ಕುಟುಂಬದ ಸದಸ್ಯರೂ ಸಹ ಆ ಕೇಂದ್ರಕ್ಕೆ

ಹೋಗಬೇಕೆಂದರೆ ಎಷ್ಟು ತ್ರಾಸವಾಗುತ್ತದೆ, ಎಷ್ಟು ಕ್ಯೂನಲ್ಲಿ ನಿಲ್ಲಬೇಕು, ಆವತ್ತು ಹೋದರೆ ಫೋಟೋ ತೆಗೆಯುತ್ತಾರೋ ಇಲ್ಲವೋ ಗೊತ್ತಾಗುವುದಿಲ್ಲ. ನನ್ನ ಕ್ಷೇತ್ರದಲ್ಲಿ ನಂದಿನಿಲೇಔಟ್ ಎಂದು ಇದೆ. ಅಲ್ಲಿ ಎಲ್ಲರೂ ಶಾಪ ಹಾಕುತ್ತಾರೆ. ಅಲ್ಲಿಗೆ ಹೋಗಲಿಕ್ಕೆ ಒಬ್ಬ ಶಾಸಕನಾಗಿ ನನಗೆ ನಾಚಿಕೆಯಾಗುತ್ತದೆ. Computerized ಮಾಡಿರುವ ಉದ್ದೇಶವೇನೆಂದರೆ, ಇದು ಬೇಗ ಆಗಲಿ ಎನ್ನುವುದಾಗಿದೆ. Bio metric ಮಾಡಿರುವ ಉದ್ದೇಶವೂ ಕೂಡ ಅದೇ ಆಗಿದೆ. ಆದರೆ, ಇಲ್ಲಿ ಏನಾಗುತ್ತಿದೆ ಎಂದರೆ, ಯಾವುದೋ ಸಂಸ್ಥೆ ದುಡ್ಡು ಮಾಡುವುದಕ್ಕೆ ಯಾರೋ 4 ಜನ ನೆಪ ಮಾತ್ರಕ್ಕೆ ಇರುತ್ತಾರೆ. ಅಲ್ಲಿ ಯಾವುದೂ ಕೆಲಸಗಳಾಗುವುದಿಲ್ಲ. Speedup ಮಾಡಬೇಕು. ನಾವು ಹೇಳಿ ಕೊಡುತ್ತೇವೆ. ಇವತ್ತು ನಾನು ಆಹಾರ ಸಚಿವರನ್ನು ಕೇಳುತ್ತೇನೆ, number of centers ಜಾಸ್ತಿ ಮಾಡಲಿ, ಒಂದು ಮೊಬೈಲ್ ಮಾಡಲಿ, 85-90 ವಯಸ್ಸಿನ ವ್ಯಕ್ತಿಗಳು ಹೋಗಿ ನಿಂತು ಫೋಟೋ ತೆಗೆಸಿಕೊಳ್ಳುವುದಕ್ಕೆ ಸಾಧ್ಯವಿದೆಯೇ? ಕುಟುಂಬದ ಮುಖ್ಯಸ್ಥರಾದರೆ ಹೇಗೆ ಹೋಗಲಿಕ್ಕೆ ಸಾಧ್ಯ? ನನ್ನ ತಾಯಿಯಾದರೂ ಸಹ ಅಲ್ಲಿಗೆ ನಡೆದುಕೊಂಡು ಹೋಗಿ ಫೋಟೋ ತೆಗೆಸಲಿಕ್ಕೆ ಸಾಧ್ಯವಾಗವುದಿಲ್ಲ. BPL card ಆಗಲಿ, APL card ಆಗಲಿ, ದಯವಿಟ್ಟು ವೈಜ್ಞಾನಿಕ ಚಿಂತನೆ ಇರಲಿ. ಅಧಿಕಾರಿಗಳಿಗೆ ಏಕೆ ಈ ಚಿಂತನೆ ಬರಲಿಲ್ಲ? ಎಂದು ನಾನು IAS ಅಧಿಕಾರಿಗಳನ್ನು ಕೇಳುತ್ತೇನೆ. ಅವರು ಸಚಿವರಿಗೆ ಹೇಳಬಹುದಾಗಿತ್ತು. ಮನೆಯಲ್ಲಿ 85, 90 ವಯಸ್ಸಿನವರಿರುತ್ತಾರೆ. ಅವರಿಗೆ ತಮ್ಮದೇ ಆದ ಸಮಸ್ಯೆ ಇರುತ್ತದೆ. ಮಹಡಿ ಹತ್ತಿಕೊಂಡು ಅಥವಾ ಅಲ್ಲಿ ಹೋಗಿ ಕ್ಯೂ ನಿಂತುಕೊಳ್ಳುವುದಕ್ಕೆ ಆಗುತ್ತದೆಯೇ? ದಯವಿಟ್ಟು ಅಲ್ಲಿ mobile centre ಮತ್ತು ಅಲ್ಲಿ study centre ಅನ್ನು ಮಾಡಬೇಕು, BPL card ಅನ್ನು ಕೊಡದೇ ಹೋದರೆ ಸುಮ್ಮನೆ ನೆಪಮಾತ್ರಕ್ಕೆ ನೀವು ತಾತ್ಕಾಲಿಕ ಕಾರ್ಡ್ ಅನ್ನುವುದು ಬೇಡ. ಒಂದು ಸ್ಥಿರವಾದ ಕಾರ್ಡ್ ಕೊಡಿ. 45 ಪೈಸೆ, 50 ಪೈಸೆ ಕೊಟ್ಟರೆ card ಕೊಡುತ್ತಿದ್ದರು. 2 ರೂ.ಗೆ ಒಂದು card ಕೊಡುತ್ತಿದ್ದರು. ಅವೆಷ್ಟೋ ಚೆನ್ನಾಗಿತ್ತು. ಇವತ್ತು ಕಳ್ಳ ಕಾರ್ಡ್ ನೀಡಲಿಕ್ಕೆ ಈ bio-metric system ತಂದಿರಿ. ಇದು ಆಗುತ್ತಾ ಇದೆಯಾ? ನಿಜವಾಗಿಯೂ ಹೇಳುತ್ತೇನೆ. ಈ ಅಂಕಿ ಅಂಶದ ಪ್ರಕಾರ ಒಂದೂವರೆ ಕೋಟಿ ಬೇಕು. ಸುಮಾರು 1 ಲಕ್ಷದ 42 ಸಾವಿರದ 323 ಕುಟುಂಬ ಗಳು ಇದ್ದು ಇಷ್ಟು ಕುಟುಂಬಗಳಿಗೆ ಕೊಡತಕ್ಕಂಥ ಶಕ್ತಿ ಇದ್ದರೆ ಜನಗಳಿಗೆ ಮಾತು ಕೊಡಿ. ಸುಮ್ಮನೆ election ನಲ್ಲಿ ಘೋಷಣೆ ಮಾಡಿ ನಮ್ಮಂಥ ಪ್ರತಿಯೊಬ್ಬ

ಜನಪ್ರತಿನಿಧಿಗಳಿಗೆ ಜನರನ್ನು face ಮಾಡಲಿಕ್ಕೆ ಬಹಳ ಕಷ್ಟವಾಗುತ್ತದೆ. ದಯವಿಟ್ಟು BPL card ಗಳನ್ನು ಬೇಗ ಕೊಡಿ. ಚುನಾವಣೆ ಮತ್ತೊಂದು ಮಗದೊಂದು ನೆಪ ಇಟ್ಟುಕೊಂಡು ಮುಂದೂಡುವುದು ಬೇಡ, ಆ ಕೊವ್ಯಾಟ್ ಸಂಸ್ಥೆಯಲ್ಲಿ ಬೇಕಾಗಿರತಕ್ಕಂಥ ಸಿಬ್ಬಂದಿ ವರ್ಗ ಇರುವುದಿಲ್ಲ. ಇದರ ಬಗ್ಗೆ ಗಂಭೀರವಾಗಿ ಪರಿಗಣಿಸಬೇಕೆಂದು ಆಗ್ರಹಿಸುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು ನಗರ ದಕ್ಷಿಣ) :- ಮಾನ್ಯ ಅಧ್ಯಕ್ಷರೆ, ನೆಮ್ಮದಿ ಕೇಂದ್ರಗಳ ಅವ್ಯವಸ್ಥೆಗಳ ಬಗ್ಗೆ ಈಗ ಸಮಸ್ಯೆ ಬಂದಿದೆ. ಸರ್ಕಾರದ ಸದಿಚ್ಛೆಯನ್ನು ನಾನು ಪ್ರಶ್ನೆ ಮಾಡುವುದಿಲ್ಲ. ಬಹಳ ಚಿಂತನೆ ಮಾಡಿಕೊಂಡು ನೆಮ್ಮದಿ ಕೇಂದ್ರದ ಬಗ್ಗೆ ಯೋಚನೆ ಮಾಡಿದ್ದರು. ಆದರೆ, ಕೊಟ್ಟಿರುವ ವ್ಯವಸ್ಥೆಗಳೇನು? 100 sq.meter ಒಳಗಿರುವ ಕೊಠಡಿಯೊಳಗೆ ಒಂದು ಕೇಂದ್ರ ಮಾಡಿ ಯಾವ ರೀತಿ ಸೇವೆಯನ್ನು ಅವರಿಗೆ ಕೊಡಲಿಕ್ಕೆ ಸಾಧ್ಯ? ಅದೂ ಕೂಡ ಅಲ್ಲಿ ಇರುವ employeeಗೆ ಏನೂ ಜವಾಬ್ದಾರಿ ಇಲ್ಲ. ಬಂದವರ ಹತ್ತಿರ ಹೇಗೆ ಮಾತನಾಡಬೇಕೆನ್ನುವ ಪರಿಜ್ಞಾನ ಅವರಿಗೆ ಇಲ್ಲ. ಇಂಥ ಸಮಸ್ಯೆಗಳಿರುವ ವ್ಯವಸ್ಥೆಯಲ್ಲಿ ಯಾವ ರೀತಿ ಕಾರ್ಯ ಮಾಡಬೇಕು? ಎರಡನೆಯದಾಗಿ, 300 ಜನರಿಗಿಂತ ಹೆಚ್ಚು ಜನರ ಅರ್ಜಿಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವೇ ಇಲ್ಲ. Maximum 200 ರಿಂದ 300ರವರೆಗೆ ಮಾತ್ರ ಅರ್ಜಿಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯ. ಆಹಾರ ಇಲಾಖೆಯ ಅಧಿಕಾರಿಗಳ ಕಛೇರಿಯಲ್ಲಿ ಅದನ್ನು ಜೋಡಿಸಿದ್ದಲ್ಲಿ ಮಾತ್ರ ಏನಾದರೂ ಯಶಸ್ಸು ಪಡೆಯಲಿಕ್ಕೆ ಸಾಧ್ಯ. ಇಲ್ಲದಿದ್ದರೆ ಇದರಿಂದ ಸರ್ಕಾರಕ್ಕೂ ಕೆಟ್ಟ ಹೆಸರು ಬರುತ್ತದೆ, ಯಾವ ರೀತಿಯಲ್ಲೂ ಸದುಪಯೋಗವಾಗುವುದಿಲ್ಲ. BPL card system ನಲ್ಲಿ ಯಾವುದಾದರೂ ಸರ್ಕಾರಿ ಆಸ್ಪತ್ರೆಗೆ ಹೋಗಿ Intensive care unit ನಲ್ಲಿ admit ಆಗಬೇಕಾದರೂ ಕೂಡ BPL card ಇಲ್ಲದಿದ್ದರೆ ಬಡವ 500 ರೂ. ಕೊಡಬೇಕಾಗುತ್ತದೆ. BPL card ಇದ್ದರೆ ಅವನಿಗೆ ಅದರಲ್ಲಿ 500 ರೂ. concession ಸಿಗುತ್ತದೆ. ಸಂಬಂಧಪಟ್ಟ ಜನರಿಗೆ, ಬಡವರಿಗೆ ಬೇಕಾಗಿರುವ ವ್ಯವಸ್ಥೆಯನ್ನು ಒದಗಿಸುವ ನಿಟ್ಟಿನಲ್ಲಿ ತಕ್ಷಣಕ್ಕೆ ಸಂಬಂಧಪಟ್ಟಂತೆ ಏನು ಕ್ರಮ ತೆಗೆದುಕೊಳ್ಳಬೇಕೆನ್ನುವ ಬಗ್ಗೆ ಕ್ರಮವನ್ನು ಕೈಗೊಳ್ಳಬೇಕು. ಸಮಯ ಕಳೆದಷ್ಟು ಪ್ರತಿಯೊಬ್ಬರೂ APL ಇದ್ದದನ್ನು BPL card ಹೇಗೆ ಮಾಡುವುದು ಎಂದು ಯೋಚನೆ ಮಾಡಲಿಕ್ಕೆ ಆರಂಭ ಮಾಡಿದ್ದಾರೆ. ಅವರಿಗೆ BPL card ಸಿಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಕೂಡ ಸರ್ಕಾರ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕು

ಎನ್ನುವ ಕುರಿತು ವ್ಯವಸ್ಥೆ ಮಾಡಬೇಕು. ನಾನು ತಕ್ಷಣ ತಮ್ಮ ಗಮನ ಸೆಳೆಯಬಯಸುವುದೇನೆಂದರೆ, ಒಂದು computer ಇದ್ದಲ್ಲಿ 2-3 computer ಒದಗಿಸಲು ಸಾಧ್ಯವೇ? ಹೆಚ್ಚಿನ ಸಿಬ್ಬಂದಿಗಳನ್ನು ನೇಮಿಸಲು ಸಾಧ್ಯವೇ? ಈ ಬಗ್ಗೆ ಯೋಚನೆ ಮಾಡಿದರೆ ಕನಿಷ್ಟ ತಿಂಗಳ ಕೊನೆಯೊಳಗೆ, ಅಂದರೆ 30ನೇ ತಾರೀಖಿನವರೆಗೆ ಏನು ಮಾಡಿದ್ದೀರಿ, ಅಲ್ಲಿಯತನಕ ಒಂದು ಒಳ್ಳೆಯ ವ್ಯವಸ್ಥೆಯನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆ. ಬಹುಶ: ಒಂದು ಸದಭಿಪ್ರಾಯವನ್ನು ವ್ಯಕ್ತಪಡಿಸುವುದೇನೆಂದರೆ, ಕುಡಿಯುವ ನೀರಿನ ಬಿಲ್ಲು ಅಥವಾ electricity bill ಅನ್ನು bank ಗಳಲ್ಲಿ ಕಟ್ಟುವ ವ್ಯವಸ್ಥೆಯನ್ನು ಬೇರೆ ಬೇರೆ ಕಡೆಗಳಲ್ಲಿ ಮಾಡುತ್ತಿದ್ದಾರೆ. ಬಹುಶ: ಮುಂದಿನ ದಿನಗಳಲ್ಲಿ ನೆಮ್ಮದಿ ಕೇಂದ್ರದ ಮೂಲಕ ಅಥವಾ ಬೇರೆ ಬೇರೆ ಕಡೆಗಳಲ್ಲಿ ಯಾವ ಬ್ಯಾಂಕ್ ಒಳ್ಳೆಯ service ಕೊಡುತ್ತದೋ ಅದರ ಜೊತೆ ಇದನ್ನು ಜೋಡಿಸಲಿಕ್ಕೆ ಸಾಧ್ಯ. ಯಾವುದೋ ಒಂದು ಸಂಸ್ಥೆಯ contract system ನಿಂದ ಇದನ್ನು ಹೊರಗೆ ತಂದು ಬೇರೆ ರೀತಿಯಲ್ಲಿ ಇದನ್ನು ಜೋಡಿಸಲಿಕ್ಕೆ ಸಾಧ್ಯವಿದ್ದಲ್ಲಿ ಒಳ್ಳೆಯ ವ್ಯವಸ್ಥೆಗೆ ಅವಕಾಶವಾಗಲಿಕ್ಕೆ ಸಾಧ್ಯವಾಗುತ್ತದೆ. ಈ ಬಗ್ಗೆ ಕೂಡ ಸರ್ಕಾರ ಯೋಚನೆ ಮಾಡಬೇಕು. BPL card ಜನರಿಗೆ ಸಿಗುವ ತನಕ ತ್ವಕ್ಷಣಕ್ಕೆ ಸಂಬಂಧಪಟ್ಟ ಹಾಗೆ ಪರ್ಯಾಯ ಕಾರ್ಡ್ ಏನು ಕೊಡುತ್ತೀರಿ ಅದನ್ನು ತಕ್ಷಣ ಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು) :- ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸಚಿವರು ಹೇಳಿಕೆಯನ್ನು ನೀಡುತ್ತಾ, ಅರ್ಜಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಪಡಿತರ ಚೀಟಿ ನೀಡಲು ತಡವಾಗುವುದರಿಂದ BPL ಮತ್ತು APL ಹೊಂದಿಲ್ಲದಿರುವವರಿಗೆ ತಾತ್ಕಾಲಿಕ ಕಾರ್ಡ್ ಕೊಡುತ್ತೇವೆಂದು ಹೇಳಿದ್ದಾರೆ. ಆದರೆ, ಈಗಾಗಲೇ, ಬಡ ಕುಟುಂಬಗಳು APL card ಹೊಂದಿವೆ. ಇದರಿಂದ ಮತ್ತೂ ಅವರನ್ನು ವಂಚಿತರನ್ನಾಗಿ ಮಾಡಿದ ಹಾಗೆ ಆಗುತ್ತದೆ. ಹಾಗಾಗಿ ಯಾರು ತಾನು ಬಡವ ಎಂದು self declaration ಕೊಡುತ್ತಾರೆ, ಅವರಿಗೆ ನೀವು ಪರಿಶೀಲನೆ ಮಾಡುವವರಿಗೆ ತಾತ್ಕಾಲಿಕ ಕಾರ್ಡ್ ಕೊಡಬೇಕು. ತಾತ್ಕಾಲಿಕ ಕಾರ್ಡ್ ಕೊಟ್ಟು ಪರಿಶೀಲನೆ ಮಾಡಿದ ನಂತರ ನೀವು permanent card ಕೊಡಿ. ಇಲ್ಲದಿದ್ದರೆ ಈ ಸಮಸ್ಯೆ ಸಮಸ್ಯೆಯಾಗಿಯೇ ಉಳಿಯುತ್ತದೆ. ಹಳ್ಳಿಗಳಿಗೆ ಹೋದರೆ ನಾನು ಬಡವ ನನಗೆ APL card ಕೊಟ್ಟಿದ್ದಾರೆಂದು ದೂರು ಕೊಡುತ್ತಿದ್ದಾರೆ. ನೀವು ಅವರಿಗೆಕಾರ್ಡ್ ಕೊಡುವುದಿಲ್ಲವೆಂದರೆ ಇದು ಮತ್ತೆ ಹಾಗೆಯೇ problem ಆಗಿ

ಉಳಿಯುತ್ತದೆ. ಯಾರು self declaration ಕೊಡುತ್ತಾರೋ ಅವರಿಗೆ ಕಾರ್ಡ್ ಕೊಡಬೇಕೆಂದು ನನ್ನ ವಿನಂತಿ. ಎರಡನೆಯದಾಗಿ, ತೋಟ ಕಾರ್ಮಿಕರಿಗೆ BPL card ಕೊಡುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಯವರು ಬಜೆಟ್‌ನಲ್ಲಿ ಕಳೆದ ಬಾರಿ ಘೋಷಣೆ ಮಾಡಿದ್ದರು. ಚುನಾವಣಾ ಪ್ರಣಾಳಿಕೆಯಲ್ಲೂ ಘೋಷಣೆ ಮಾಡಲಾಗಿತ್ತು. ಸರ್ಕಾರ ಬಂದ ನಂತರ ಎಲ್ಲ ತೋಟ ಕಾರ್ಮಿಕರಿಗೂ BPL card ಕೊಡುತ್ತೇವೆಂದು ಘೋಷಣೆ ಮಾಡಲಾಗಿತ್ತು. ದಯಮಾಡಿ, ಅದರ ಬಗ್ಗೆ ಒಂದು GO ಆಗಿ ಅವರಿಗೆ ಕಾರ್ಡ್ ಸಿಗುವ ಹಾಗೆ ಆಗಬೇಕು. ಇಲ್ಲದಿದ್ದರೆ ನಾವು ಮತ್ತೆ ಅವರಿಗೆ ಮುಖ ತೋರಿಸುವುದಕ್ಕೆ ಕಷ್ಟವಾಗುತ್ತದೆ. ದಯಮಾಡಿ, ತೋಟ ಕಾರ್ಮಿಕರಿಗೂ ಕೂಡ BPL card ಕೊಡುವ ಬಗ್ಗೆ ಯಾವಾಗಿನಿಂದ ಕ್ರಮ ತೆಗೆದುಕೊಳ್ಳುತ್ತೀರಿ ಎಂದು ತಮ್ಮ ಹೇಳಿಕೆಯಲ್ಲಿ ಸ್ಪಷ್ಟಪಡಿಸಬೇಕು. ಮೂರನೆಯದಾಗಿ, photo agency ಅನ್ನು ಏಕೆ centralize ಮಾಡಿಕೊಟ್ಟರು? ಯಾವ ಕಾರಣಕ್ಕೆ ಕೊಟ್ಟರು? ಅದೊಂದು ದೊಡ್ಡ ಪ್ರಶ್ನೆಯಾಗಿದೆ. ಏಕೆಂದರೆ, ಆ Comat photo Agency ಗೆ ಕೊಟ್ಟಿರುವ ಹಣದಲ್ಲಿ ಎಲ್ಲಾ ನೆಮ್ಮದಿ ಕೇಂದ್ರಗಳಿಗೂ ಒಂದೊಂದು camera ಕೊಟ್ಟು, printing machine ಕೊಟ್ಟು 365 ದಿವಸವೂ ಕೂಡ photo ತೆಗೆಸುವ ವ್ಯವಸ್ಥೆಯನ್ನು ಅದಕ್ಕಿಂತ ಕಡಿಮೆ ಹಣದಲ್ಲಿ ಮಾಡಬಹುದಾಗಿತ್ತು. ಹಾಗೆ ಮಾಡುವುದಕ್ಕೆ ಸಾಧ್ಯವಿದ್ದಾಗ ಯಾವ ಹಿತಾಸಕ್ತಿಯನ್ನು ರಕ್ಷಣೆ ಮಾಡಲಿಕ್ಕೆ centralize ಮಾಡಿ ಕೊಟ್ಟಿದ್ದಾರೆಂಬುದು ಒಂದು ದೊಡ್ಡ ಪ್ರಶ್ನೆಯಾಗಿದೆ. ತುಂಬಾ ವಿಷಯಗಳನ್ನು ಕೆದಕುತ್ತಾ ಹೋದರೆ ಬಹುಶ: ಅದರ ಹಿಂದೆಯೂ ದೊಡ್ಡ ಅವ್ಯವಹಾರ ಆಗಿರುವ ಸಾಧ್ಯತೆ ಇದೆ. ಯಾವಾಗ ಕೊಟ್ಟರು? ಏಕೆ ಕೊಟ್ಟರು? ಕೊಟ್ಟಿರುವುದರಿಂದ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಾಗಿಲ್ಲ. ಬದಲಿಗೆ ಯಾರೋ ಅನನುಭವಿಗಳನ್ನು ಕಳುಹಿಸುತ್ತಾರೆ. ಅಪ್ಪನ ಹೆಸರಿಗೆ ಬದಲು ಅವ್ವನ ಹೆಸರು ಹಾಕುತ್ತಾನೆ, ಅವ್ವನ ಹೆಸರು ಹಾಕುವ ಜಾಗಕ್ಕೆ ಇನ್ಯಾರದೋ ಹೆಸರನ್ನು ಹಾಕಿರುತ್ತಾನೆ. Photo ಯಾರದೋ ಇರುತ್ತದೆ, ಹೆಸರು ಯಾರದೋ ಇರುತ್ತದೆ. ಈ ರೀತಿ ಸಮಸ್ಯೆಯಾಗಿದೆ. ಆ COMAT ಸಂಸ್ಥೆಗೆ ಕೊಟ್ಟಿರುವುದನ್ನು ರದ್ದುಪಡಿಸಿ ಸ್ಥಳೀಯವಾಗಿಯೇ 365 ದಿವಸ photo ತೆಗೆಸುವ ವ್ಯವಸ್ಥೆ ಮಾಡಿ. ಆಗ ಮಾತ್ರ ಈ ಸಮಸ್ಯೆ ಬಗೆಹರಿಯುತ್ತದೆ. ಆ ಅಧಿಕಾರಿಗಳಿಗೆ ಆ COMAT ಸಂಸ್ಥೆಗೆ ವ್ಯವಸ್ಥೆ ಮಾಡುವುದೇ ದೊಡ್ಡ ಕೆಲಸವಾಗಿದೆ. ದಯವಿಟ್ಟು ಈ ಬಗ್ಗೆ ಒಂದು ನಿರ್ಣಯ ತೆಗೆದುಕೊಳ್ಳಬೇಕು.

ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) :- ಮಾನ್ಯ ಅಧ್ಯಕ್ಷರೆ, ಬಹಳಷ್ಟು ಜನರು ಈಗಾಗಲೇ ಮಾತನಾಡಿದ್ದಾರೆ. BPL card 78 ಲಕ್ಷ 48 ಸಾವಿರದ 450, APL card 54 ಲಕ್ಷ 93 ಸಾವಿರದ 238, G9 13ಲಕ್ಷದ 70 ಸಾವಿರದ 162 ಹೀಗೆ ಇಷ್ಟೊಂದು ಕಾರ್ಡ್‌ಗಳನ್ನು ಸರ್ಕಾರ ವಿತರಣೆ ಮಾಡಿದೆ. ಈಗ ಯಾರು APL, BPL G-9 ಗೆ ಒಳಪಟ್ಟಿಲ್ಲ ಅವರಿಗೆ ಮತ್ತೆ ಹೆಚ್ಚುವರಿ ಕಾರ್ಡ್ ಅನ್ನು ಕೂಡ ಸರ್ಕಾರ declaration ಕೊಟ್ಟು ತೆಗೆದುಕೊಳ್ಳಬೇಕೆಂದು ಆದೇಶ ಮಾಡಿದೆ. 5ಲಕ್ಷ 48 ಸಾವಿರದ 27 ಕಾರ್ಡ್‌ಗಳಿಗೆ ಹೊಸ ಅರ್ಜಿಗಳನ್ನು ವಿತರಣೆ ಮಾಡಿದ್ದಾರೆ. ನಮಗೇನು confusion ಆಗುತ್ತಿದೆ ಎಂದರೆ, APL ನಲ್ಲಿ 54 ಲಕ್ಷದ 91 ಸಾವಿರಕ್ಕಿಂತ ಹೆಚ್ಚು ಜನ ಇದ್ದಾರೆ. 5ಲಕ್ಷ APL card ನವರೂ ಕೂಡ ನಮಗೆ BPL card ಬೇಕೆಂದು declaration ಕೊಡಲು ಪ್ರಾರಂಭಿಸಿದ್ದಾರೆ. ಒಂದೊಂದು ನೆಮ್ಮದಿ ಕೇಂದ್ರದಲ್ಲಿ ಸಾವಿರಾರು ಜನ ಜಮಾಯಿಸಿದ್ದಾರೆ. ನೀವೀಗ 5 ಲಕ್ಷಕ್ಕಿಂತ ಹೆಚ್ಚು ಅರ್ಜಿಗಳನ್ನು ವಿತರಣೆ ಮಾಡಿದ್ದೀರಿ. ಅದರಲ್ಲಿ APL cardಗಳನ್ನೂ ಪರಿಗಣಿಸುತ್ತೀರೋ ಹೇಗೆ ಎಂಬುದನ್ನು ಸರ್ಕಾರ ಸ್ಪಷ್ಟಪಡಿಸಬೇಕಾಗುತ್ತದೆ. ಇಲ್ಲದಿದ್ದರೆ ರವಿಯವರು ಹೇಳಿದ ಹಾಗೆ APL card ದಾರರಿಗೆ ನಾವು ವಂಚಿತರನ್ನಾಗಿ ಮಾಡಿದ ಹಾಗೆ ಆಗುತ್ತದೆ. BPL card ನಲ್ಲಿ ಕೂಡ ಶ್ರೀಮಂತರು ಇದ್ದಾರೆ. ಅವರನ್ನು ತೆಗೆದುಹಾಕಬೇಕೆಂದು ಮಾಡಿದ್ದೀರೋ ಹೇಗೆ? ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವ ಬಗ್ಗೆ ಸ್ಪಷ್ಟ ನಿಲುವು ಇಲ್ಲ. Card ವಿತರಣೆ ಬಗ್ಗೆ ಸರ್ಕಾರ ಕೂಲಂಕಷವಾಗಿ 78 ಲಕ್ಷ BPL, 54 ಲಕ್ಷ APL, G9 10 ಲಕ್ಷ ಮತ್ತು ಈಗೇನು ಹೊಸದಾಗಿ ವಿತರಣೆ ಮಾಡತಕ್ಕ 5 ಲಕ್ಷ ಅರ್ಜಿಗಳು ಅಲ್ಲ, ಮತ್ತೆ 40 ಲಕ್ಷ ಅರ್ಜಿಗಳನ್ನು ಕೊಡಬೇಕಾಗುತ್ತದೆ. ಹೆಚ್ಚುವರಿ ಅರ್ಜಿಗಳನ್ನು ಸರ್ಕಾರದಿಂದ ಮತ್ತೆ ನೆಮ್ಮದಿ ಕೇಂದ್ರದಿಂದ ವಿತರಣೆ ಮಾಡುತ್ತೀರೋ ಹೇಗೆ ಎಂಬ ಬಗ್ಗೆ ಸ್ಪಷ್ಟೀಕರಣ ಕೊಡಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ವೆಂಕಟರಾವ್ ನಾಡಗೌಡ (ಸಿಂಧನೂರು) :- ಮಾನ್ಯ ಅಧ್ಯಕ್ಷರೆ, ಈಗಾಗಲೇ ಪಡಿತರ ಚೀಟಿ ಬಗ್ಗೆ ಹಲವರು ಸುದೀರ್ಘವಾಗಿ ಚರ್ಚೆ ಮಾಡಿದ್ದಾರೆ. ಇದರಲ್ಲಿ ನಾನು 2 ಕ್ಲಾರಿಫಿಕೇಷನ್‌ಗಳನ್ನು ಮಾನ್ಯ ಸಚಿವರಲ್ಲಿ ತಮ್ಮ ಮೂಲಕ ಕೇಳುವುದಕ್ಕೆ ಬಯಸುತ್ತೇನೆ. ಈಗಾಗಲೇ ಪಡಿತರ ಚೀಟಿಗಾಗಿ ಕೊಟ್ಟಿರುವ ಅರ್ಜಿಗಳಲ್ಲಿ 60% ಕೊಡಿ, 40% ನಿಲ್ಲಿಸಿ ಎಂದು ಹೇಳಿರುವುದರಿಂದ 40% ಅರ್ಜಿಗಳನ್ನು ನಿಲ್ಲಿಸಿದ್ದಾರೆ. ಆ 40% ನಿಲ್ಲಿಸುವುದಕ್ಕೆ ಮಾನದಂಡವೇನು? 100

ಜನರಿಗಿಂತ ಕೆಳಗಡೆ ಇರುವವರು ಅರ್ಹರು ಎಂದು select ಮಾಡಿ ಕಳುಹಿಸಿದ್ದಾರೆ. ಅದರಲ್ಲಿ, 60% ಕೊಡಬೇಕೆಂದು ಸೂಚನೆಯನ್ನು ಕಳುಹಿಸುತ್ತಾರೆ. ಅದರಲ್ಲಿ 40 ಜನರನ್ನು ಹೇಗೆ ತೆಗೆಯಬೇಕು? ಯಾವ ಮಾನದಂಡದಿಂದ ಆ 40 ಜನರನ್ನು ತೆಗೆದಿದ್ದೀರಿ? ಅವರಿಗೆ ಏಕೆ ಕೊಟ್ಟಿಲ್ಲ? ಈಗಾಗಲೇ ಕೆಲವರು ಮಾತನಾಡಿರುವ ಹಾಗೆ ಒಬ್ಬೊಬ್ಬರು 4-5 ಸಲ ಅರ್ಜಿಗಳನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಮೊನ್ನೆ ನೀವು ಹೊಸ ಕಾರ್ಯಕ್ರಮ ಹಳ್ಳಿಯಲ್ಲಿ ಏನು ಪ್ರಾರಂಭ ಮಾಡಿದ್ದೀರಿ, ಅಲ್ಲಿಗೂ ಬಂದು ಅರ್ಜಿಗಳನ್ನು ಕೊಟ್ಟಿದ್ದಾರೆ. ಆ ಅರ್ಜಿಗಳು ಸಹ ತಮ್ಮ ಹತ್ತಿರ ಸಾವಿರಾರು ಪೆಂಡಿಂಗ್‌ನಲ್ಲಿವೆ. ಅವುಗಳ ಮೇಲೆಯೇ ಇನ್ನೂ ಕ್ರಮ ತೆಗೆದುಕೊಂಡಿಲ್ಲ. ಅವುಗಳನ್ನು ಮತ್ತೆ ನೆಮ್ಮದಿ ಕೇಂದ್ರಕ್ಕೆ ಕಳುಹಿಸಿದ್ದೀರಿ. ಆ ನೆಮ್ಮದಿ ಕೇಂದ್ರದಲ್ಲಿ ಈಗಾಗಲೇ ಹೇಳಿರುವ ಹಾಗೆ ಒಂದು ತೊಂದರೆ ಏನೆಂದರೆ, ನನ್ನ ಸಿಂಧನೂರು ನಗರದಲ್ಲಿ 50 ಸಾವಿರ ಜನಸಂಖ್ಯೆ ಇದೆ. ಅಲ್ಲಿ ಒಂದು ನೆಮ್ಮದಿ ಕೇಂದ್ರವನ್ನು ಮಾತ್ರ ತೆರೆದಿದ್ದೀರಿ. ಅದರ ಮುಂದೆ ಸಾವಿರಾರು ಜನ, ದಿನಕ್ಕೆ ನೂರು ಜನರ ಅರ್ಜಿ ತೆಗೆದುಕೊಳ್ಳುವು ದಕ್ಕಾಗುವುದಿಲ್ಲ. ಅಂಥದ್ದರಲ್ಲಿ ಒಂದು ಕೇಂದ್ರದಲ್ಲಿ 50 ಸಾವಿರ ಜನ ನಿಂತುಕೊಂಡರೆ ಹೇಗೆ? ಅದರ ಜೊತೆಗೆ compulsory ಯಾಗಿ stamp paper ನಲ್ಲಿ ತರಬೇಕೆಂದು ಹೇಳಿದರು. Affidivit ಆದರೆ stamp paper ಮಾರಾಟ ಮಾಡಲು ಒಂದೇ bank ಗೆ ಪರವಾನಗಿ ಕೊಟ್ಟಿದ್ದೀರಿ. Bond paper ತರುವುದಕ್ಕೆ ಆ bank ಮುಂದೆ ಮೂರು ಮೂರು ದಿನ ಕಾಯಬೇಕು. ಕೊನೆಯ ಪಕ್ಷ ಇನ್ನೂ ಎರಡು ಮೂರು ಬ್ಯಾಂಕುಗಳಿಗಾದರೂ permission ಕೊಡಬೇಕು.)

ಬೇರೆ ಬೇರೆ ಕಾರಣಗಳಿಗೂ ಬಾಂಡ್ ಪೇಪರ್ ಬೇಕಾಗುತ್ತದೆ. 20 ರೂಪಾಯಿ ಬಾಂಡ್ ಪೇಪರ್ ಸಲುವಾಗಿ ಸಾವಿರಾರು ಜನ ಮುಂಜಾನೆ ಆರು ಗಂಟೆಯಿಂದ ಕ್ಯೂ ನಿಲ್ಲುತ್ತಾರೆ ಆದರೆ ಬ್ಯಾಂಕ್‌ನವರು 12 ಗಂಟೆಗೆ ಬಂದ್ ಮಾಡುತ್ತಾರೆ. ಮೂರು ದಿನ ಅಲ್ಲಿ ಕ್ಯೂ ನಿಂತು ಕಾದ ಮೇಲೆ ಬಾಂಡ್ ಪೇಪರ್ ಸಿಗುತ್ತದೆ. ಆ ಬಾಂಡ್ ಪೇಪರ್ ತೆಗೆದುಕೊಂಡು ಇಲ್ಲಿಗೆ ಹೋದರೆ ಸುಮಾರು ಐದು ದಿವಸ ಕಾಯಬೇಕು. ಇಂಥ ಪರಿಸ್ಥಿತಿ ಇರುವುದರಿಂದ ನೀವು ಇದನ್ನು ಹೇಗೆ ಸರಿಪಡಿಸುತ್ತೀರಿ ಎನ್ನುವುದು ಬಹಳ ಮುಖ್ಯ. ಇದನ್ನು ಸರಿಪಡಿಸುವ ಕೆಲಸ ಮಾಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡುತ್ತೇನೆ.

ಶ್ರೀ ಸುನಿಲ್ ವಿ ಹೆಗಡೆ (ಹಳಿಯಾಳ) :- ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಅಭಿನಂದನೆಗಳು. BPL ಕಾರ್ಡ್‌ಗಳ ಬಗ್ಗೆ ಸರ್ಕಾರ ಅಧಿಕಾರಕ್ಕೆ ಬರುವ ಪೂರ್ವದಲ್ಲಿ ಈ ಕಾರ್ಡ್‌ಗಳಿಗೆ ಇನ್‌ಕಂ ಲಿಮಿಟ್ 30 ಸಾವಿರ ರೂಪಾಯಿವರೆಗೆ ಹೆಚ್ಚಿಸಲಾಗುವುದು ಎಂದು ಹೇಳಿದ್ದರು. ಆದರೆ ಇಲ್ಲಿಯವರೆವಿಗೂ ಸರ್ಕಾರದಿಂದ ಬಿಪಿಎಲ್ ಕಾರ್ಡುಗಳಿಗೆ ಇನ್‌ಕಂ ಲಿಮಿಟ್ ಅನ್ನು 30 ಸಾವಿರಕ್ಕೆ ಏರಿಸುವ ಬಗ್ಗೆ ಯಾವುದೇ ರೀತಿಯ ಆಶ್ವಾಸನೆ ಬಂದಿಲ್ಲ. ಹೀಗಾಗಿ ಸರ್ಕಾರಕ್ಕೆ ಈ ಇನ್‌ಕಂ ಲಿಮಿಟ್ ಹೆಚ್ಚಿಗೆ ಮಾಡುವ ವಿಚಾರ ಇದೆಯೋ ಇಲ್ಲವೋ ಎಂದು ತಿಳಿಯಲಿಕ್ಕೆ ಬಯಸುತ್ತೇನೆ. ಅದೇ ರೀತಿಯಾಗಿ ಈ ಬಿಪಿಎಲ್ ಕಾರ್ಡ್‌ಗಳಿಗೆ ಇನ್‌ಕಂ ಲಿಮಿಟ್ 11 ಸಾವಿರ ಏನು ಇದೆ. ಪ್ರತಿ ತಿಂಗಳ ಸರಾಸರಿ ತೆಗೆದುಕೊಂಡರೆ ಸುಮಾರು 800 ರೂಪಾಯಿ ಆಗುತ್ತದೆ. ಆದರೆ, ಬಿಪಿಎಲ್ ಕಾರ್ಡ್ ತೆಗೆದುಕೊಳ್ಳುವುದಕ್ಕೆ, ಇವತ್ತಿನ ದಿವಸ ಬಾಂಡ್ ಪೇಪರ್ ಮತ್ತು ನೆಮ್ಮದಿ ಕೇಂದ್ರಗಳಿಗೆ ಜನರೇನು ತಿರುಗಾಡುತ್ತಿದ್ದಾರೆ ಇದಕ್ಕೆ ಖರ್ಚು ಸರಿಸುಮಾರು 300 ರೂಪಾಯಿ ಬರುವುದರಿಂದ ಈ ಬಿಪಿಎಲ್ ಕಾರ್ಡ್‌ಗಳಿಗೆ ಇಟ್ಟಿರುವಂಥ ಇನ್‌ಕಂ ಲಿಮಿಟ್ 11 ಸಾವಿರ ಎನ್ನುವುದು ಅರ್ಥ ಕಳೆದುಕೊಳ್ಳುತ್ತದೆ. ಆ ಕಾರಣದಿಂದ judiciary, ಪೋಲಿಸ್ ಸ್ಟೇಷನ್‌ನಲ್ಲಿ, ಅವರದೇ ಆದಂಥ ಪ್ರಿಂಟೆಡ್ ಬಾಂಡ್ ಪೇಪರ್‌ಗಳೇನಿರುತ್ತವೆ, ಆ ರೀತಿಯಾಗಿ ತಹಶೀಲ್ದಾರ್ ಆಫೀಸ್‌ನಲ್ಲಿ, ಸರಕಾರಿ ಬಾಂಡ್ ಪೇಪರ್‌ಗಳನ್ನು ಇಟ್ಟು ಅದರ ಮೂಲಕ ಅವುಗಳನ್ನು ಕೊಡುವಂಥ ವ್ಯವಸ್ಥೆ ಯಾಗಬೇಕು. ಮತ್ತೊಂದು ಏನೆಂದರೆ, ನೆಮ್ಮದಿ ಕೇಂದ್ರಗಳು ಕೆಲಸ ಮಾಡುವ ಸಮಯವನ್ನು ಬದಲಾಯಿಸಬೇಕಾಗುತ್ತದೆ. ಏಕೆಂದರೆ, ಆ ಬಡಜನರು ಕೂಲಿ ಬಿಟ್ಟು ಬೆಳಿಗ್ಗೆಯಿಂದ ಸಂಜೆಯವರೆಗೆ ಮೂರರಿಂದ ನಾಲ್ಕು ದಿವಸಗಳ ಕಾಲ ಆ ನೆಮ್ಮದಿ ಕೇಂದ್ರಗಳ ಮುಂದೆ ನಿಲ್ಲುವುದು ಅಷ್ಟಾಗಿ ಸರಿ ಕಾಣುವುದಿಲ್ಲ. ಆ ಕಾರಣದಿಂದ ಈ ನೆಮ್ಮದಿ ಕೇಂದ್ರಗಳು ಸಂಜೆ ಹೊತ್ತಿನಲ್ಲಿ ಕೆಲಸ ಮಾಡುವಂಥ ವ್ಯವಸ್ಥೆಯನ್ನು ಶುರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ರೀತಿಯಾಗಿ, ಗ್ರಾಮೀಣ ಪ್ರದೇಶದಲ್ಲಿ ಈ ಎಪಿಎಲ್ ಕಾರ್ಡುದಾರರಿಗೆ ಗ್ಯಾಸ್ ಕೊಟ್ಟರೆ ಸೀಮೆಎಣ್ಣೆ ಕೊಡುವುದಿಲ್ಲ ಎಂದು ಏನು ಇದ, ಅದು ಅವೈಜ್ಞಾನಿಕವಾಗುತ್ತದೆ. ಹೀಗಾಗಿ ಇವರಿಗೂ ಕೂಡ ಸೀಮೆಎಣ್ಣೆ ಕೊಡುವಂಥ ವ್ಯವಸ್ಥೆ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ) :- ಮಾನ್ಯ ಅಧ್ಯಕ್ಷರೆ, ವಾಸ್ತವದಲ್ಲಿ ಈ ನೆಮ್ಮದಿ ಕೇಂದ್ರಗಳಿಂದ ಪಡಿತರ ಚೀಟಿ ಕೊಡುವಂಥ ವ್ಯವಸ್ಥೆ ಏನಿದೆ, ಇದು ಸಂಪೂರ್ಣ ಅವೈಜ್ಞಾನಿಕ ಮತ್ತು ಅನಾವಶ್ಯಕವಾಗಿ introduce

ಮಾಡಿರತಕ್ಕಂಥದ್ದು. ಇದು ಮೊದಲಿನಂತೆ ಇರತಕ್ಕಂಥ ವ್ಯವಸ್ಥೆಯಲ್ಲಿ ಸ್ವಲ್ಪ ಪರಿವರ್ತನೆ ಮಾಡಿ, ರೈತರಿಗೆ, ಬಡವರಿಗೆ, ಕೊಡುವಂಥ ವ್ಯವಸ್ಥೆಯನ್ನು ಮಾಡಬಹುದಾಗಿತ್ತು. ಈಗೇನು ಗೊಂದಲ ನಡೆಯುತ್ತಿದೆ ಇದು ಎಲ್ಲೋ ಒಂದು ಕಡೆ ಜನರನ್ನು ದಾರಿ ತಪ್ಪಿಸುವ ರೀತಿಯಲ್ಲಿ ನಡೆಯುತ್ತಿದೆ. ವಾಸ್ತವದಲ್ಲಿ ಸರಕಾರ ಪ್ರಥಮದಲ್ಲಿ ಬಂದಾಗ ತನ್ನ ಮೊದಲನೆ ಬಜೆಟ್ ಅಧಿವೇಶನದಲ್ಲಿ ನಾವು 90 ದಿವಸದೊಳಗೆ ಇದನ್ನು ಮಾಡಿ ಕೊಡುತ್ತೇವೆ ಎನ್ನುವ ವಾಗ್ದಾನ ಇತ್ತು. ಆ 90 ದಿವಸ ಹೋಗಿ ಈಗ 180 ದಿವಸಗಳಾಗಿವೆ. ಏಳು ತಿಂಗಳಾದರೂ ಹಿಂದೆ ತೆಗೆದುಕೊಂಡಿರುವ ಪಡಿತರ ಚೀಟಿ ದಾರರಿಗೂ ಕ್ರಮಬದ್ಧವಾಗಿ ಸಿಗುತ್ತಿಲ್ಲ, ಈಗ ಇವರೇನು ಮಾಡುತ್ತಿದ್ದಾರೆ, ಇದು ಇನ್ನೂ ಅವ್ಯವಸ್ಥೆಯಾಗಿದೆ. ಆ ಸ್ಟ್ಯಾಂಪ್ ಪೇಪರಿನ ವ್ಯವಹಾರ ಏನು ಇದೆ ಇದನ್ನು ಖಂಡಿತವಾಗಿ ತೆಗೆದು ಹಾಕಬೇಕು. ಏಕೆಂದರೆ, ರೈತರಿಗೆ ಇದರಿಂದಾಗಿ ಸುಮಾರು 500 ರಿಂದ 600 ರೂಪಾಯಿ ಖರ್ಚು ಬರುತ್ತದೆ. ಅವರು ಪೇಟೆಗೆ ಬಂದು ಇಲ್ಲಿ ನಿಂತು ಹೋಗುವುದು ಇದರಿಂದಾಗಿ ಅವರಿಗೆ ಇಷ್ಟು ಖರ್ಚು ಬರುತ್ತದೆ. ಇಷ್ಟೆಲ್ಲಾ ಕಷ್ಟಪಟ್ಟರೂ ಆಮೇಲೆ ಅವರಿಗೆ ಕಾರ್ಡ್ ಸಿಗುವ ಗ್ಯಾರಂಟಿಯೂ ಇಲ್ಲ. ಇವೆಲ್ಲವೂ ಕೂಡ ಎಲ್ಲೋ ಒಂದು ಕಡೆ ಸರ್ಕಾರ ಆದಾಯ ಪಡೆದುಕೊಳ್ಳಬೇಕೆನ್ನುವ ಉದ್ದೇಶದಿಂದ ಇದನ್ನು ಮಾಡುತ್ತಿದೆ ಎನ್ನುವ ಅನುಮಾನ ಗಳು ನಮ್ಮನ್ನು ಕಾಡುತ್ತಿವೆ. ಖಂಡಿತವಾಗಿ ಈಗಿರತಕ್ಕಂಥ ನೆಮ್ಮದಿ ಕೇಂದ್ರಗಳ ಮೂಲಕ ವಿತರಿಸತಕ್ಕಂಥ ವ್ಯವಸ್ಥೆ ಏನಿದೆ, ಇದನ್ನು ಸಂಪೂರ್ಣ ರದ್ದು ಮಾಡಿ. ಮೊದಲು ಇದ್ದಂತೆ ವಿಲೇಜ್ ಸೆಕ್ರೇಟರಿಯ ಲೆವಲ್‌ನಲ್ಲಿ, ಗ್ರಾಮಪಂಚಾಯಿತಿ ಕಛೇರಿಯಲ್ಲಿಯೇ ವಿತರಿಸುವ ವ್ಯವಸ್ಥೆಯನ್ನು ಮಾಡಿದರೆ ಒಳ್ಳೆಯದಾಗುತ್ತದೆ.

ಶ್ರೀ ಕೆ.ಬಿ. ಚಂದ್ರಶೇಖರ್ (ಕೆ.ಆರ್.ಪೇಟೆ) :- ಮಾನ್ಯ ಅಧ್ಯಕ್ಷರೆ, ಮೊದಲು ಕರ್ನಾಟಕ ರಾಜ್ಯ ಇವತ್ತು ಯಾವ ಪರಿಸ್ಥಿತಿಯಲ್ಲಿ ಇದೆ ಎನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗಿದೆ. ಸ್ವತಂತ್ರ ಪಡೆದು ಇಷ್ಟು ವರ್ಷಗಳಾದರೂ ಇನ್ನು ನಮ್ಮ ಜನಗಳಿಗೆ ಪಡಿತರ ಚೀಟಿ ಕೊಡುವ ವ್ಯವಸ್ಥೆ ಸರಿಯಾಗಿ ಮಾಡಲಿಕ್ಕೆ ಆಗಲಿಲ್ಲ ಎಂದರೆ, ನಮ್ಮ ಸರ್ಕಾರದ ಪರಿಸ್ಥಿತಿಯನ್ನು ನಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಿ ಕೊಳ್ಳುತ್ತೇನೆ. ಸರ್ಕಾರ ಸಾವಿರಾರು ಕೋಟಿ ರೂಪಾಯಿಗಳನ್ನು ಯಾವ್ಯಾವುದೋ ಇಲಾಖೆಗಳಿಗೆ ಹಾಕಿ ವ್ಯರ್ಥ ಮಾಡತಕ್ಕಂಥದ್ದು ನಮಗೆ ನಿಮಗೆ ಎಲ್ಲರಿಗೂ ಗೊತ್ತಿರತಕ್ಕಂಥ ವಿಚಾರ. ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒಂದು ಮನವಿಯನ್ನು ಮಾಡುವುದಕ್ಕೆ ಇಚ್ಛಿಸುತ್ತೇನೆ. ಮಾನ್ಯ

ಮಂತ್ರಿಗಳು ಈ ಕಡೆಗೆ ಆಲಿಸಬೇಕೆಂದು ನನ್ನ ವಿನಂತಿ. ತಾವು ದಯಮಾಡಿ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಈ ವಿಚಾರ ಮಾತನಾಡಿ ಕ್ಯಾಬಿನೆಟ್‌ನಲ್ಲಿ ಈ ವಿಚಾರದ ಪ್ರಸ್ತಾಪ ಮಾಡುವ ಹಾಗೆ ಇಟ್ಟುಕೊಳ್ಳಬೇಕು. ಏಕೆಂದರೆ, ಸಾವಿರಾರು ಕೋಟಿ ರೂಪಾಯಿಗಳನ್ನು ಕರ್ನಾಟಕ ರಾಜ್ಯದಲ್ಲಿ ನಾವು ವ್ಯರ್ಥವಾಗಿ ಕಳೆಯುತ್ತಿರುವಂಥ ಸಂದರ್ಭದಲ್ಲಿ, ಜನರು ನಮಗೆ ಪಡಿತರ ಚೀಟಿ ಕೊಡಿ ಎಂದು ಜನರು ಕೇಳಿದರೆ, ನಾವು ಕೊಡುವುದಕ್ಕಾಗುತ್ತಿಲ್ಲ ಎನ್ನುವುದು ತುಂಬಾ ಶೋಚನೀಯವಾದ ವಿಚಾರ. ಹೀಗಾಗಿ ಮಾನ್ಯ ಮುಖ್ಯಮಂತ್ರಿಗಳು ಸರ್ಕಾರದ ಎಲ್ಲಾ ಅಧಿಕಾರಿಗಳಿಗೆ ಈ ಬಗ್ಗೆ ಸ್ಪಷ್ಟವಾದ ಆದೇಶವನ್ನು ನೀಡಬೇಕು. ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಪ್ರತಿಯೊಬ್ಬ ಪ್ರಜೆಯು, ಯಾರಿಗೆ ಈ ಬಿಪಿಎಲ್ ಕಾರ್ಡ್ ಬೇಕೆಂದು ಕೇಳುತ್ತಾರೆ ಅಂಥವರೆಲ್ಲರಿಗೂ ಕೊಡುತಕ್ಕಂಥ ವ್ಯವಸ್ಥೆಯನ್ನು ತಾವು ದಯಮಾಡಿ ಅವರಿಗೆ ಒಂದು ಕಾಲಮಿತಿಯನ್ನು ಹಾಕಿ ಈ ವ್ಯವಸ್ಥೆ ಮಾಡಿಕೊಡುವುದರಿಂದ, ಮುಂದೆ ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೆ ಈ ಸಮಸ್ಯೆ ತಪ್ಪುತ್ತದೆ. ನಮಗೂ ಒಂದು ಕಡೆ ಹಿಂಸೆ, ಅವರಿಗೂ ಒಂದು ಕಡೆ ಹಿಂಸೆ, ಈ ಎಲ್ಲಾ ಹಿಂಸೆಯಿಂದ ನಾವು ತಪ್ಪಿಸಿಕೊಳ್ಳಬೇಕಾದರೆ, ಪ್ರತಿಯೊಬ್ಬ ಮತದಾರರಿಗೂ ಬಿಪಿಎಲ್ ಕಾರ್ಡು ಕೊಡತಕ್ಕಂಥ ವ್ಯವಸ್ಥೆಗೆ ನಾವು ಅಣಿಯಾಗದೆ ಹೋದರೆ ಮುಂದಿನ ದಿನಗಳಲ್ಲಿ ಜನ ನಮ್ಮನ್ನು ಶಪಿಸುತ್ತಾರೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಚಿಸುತ್ತೇನೆ. ಸರ್ಕಾರಿ ನೌಕರರನ್ನು ಬಿಟ್ಟು ಯಾವ ವ್ಯಕ್ತಿ ನಾನು ನಿಜವಾಗಿ ಬಡವನಾಗಿದ್ದೇನೆ, ನನಗೆ ಬಿಪಿಎಲ್ ಕಾರ್ಡ್ ಕೊಡಿ ಎಂದು ಯಾರು ಕೇಳುತ್ತಾರೆ ಅವರೆಲ್ಲರಿಗೂ ಕೂಡ ಕಾರ್ಡ್‌ಗಳನ್ನು ಕೊಡುವಂಥ ವ್ಯವಸ್ಥೆ ಈ ರಾಜ್ಯದಲ್ಲಿ ಮಾಡಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡಿ ಕೊಳ್ಳುತ್ತೇನೆ.

ಶ್ರೀ ತನ್ವೀರ ಶೇಠ್ (ನರಸಿಂಹರಾಜ) :- ಮಾನ್ಯ ಅಧ್ಯಕ್ಷರೆ, ತಮಗೆ ವಂದಿಸುತ್ತಾ, ಈ ಪಡಿತರ ಚೀಟಿಯ ವ್ಯವಸ್ಥೆಯಲ್ಲಿ ಹಲವರು ನಮ್ಮ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ನಾನಾದರೂ ಸಭೆಯ ಮುಂದೆ ಬಂದಿರುವ ವಿಷಯಗಳನ್ನು ಬಿಟ್ಟು ಈ ಬಗ್ಗೆ ಇನ್ನು ಹೆಚ್ಚಿನ ಬೆಳಕನ್ನು ಚೆಲ್ಲುವ ಪ್ರಯತ್ನ ಮಾಡುವುದಾಗಿ ತಮ್ಮ ಮೂಲಕ ಸರ್ಕಾರದ ಗಮನ ಸೆಳೆಯಬಯಸುತ್ತೇನೆ. ಈಗಾಗಲೇ ಅನೇಕ ಸಂದರ್ಭದಲ್ಲಿ ಪಡಿತರ ಚೀಟಿಯ ವ್ಯವಸ್ಥೆಯನ್ನು ಸರಿಪಡಿಸುವಂಥ ದೃಷ್ಟಿಯಿಂದ ಅರ್ಜಿಗಳನ್ನು ಪಡೆಯುವಂಥ ಅನೇಕ ಕಾರ್ಯಕ್ರಮಗಳನ್ನು ನಾವು ಹಾಕಿಕೊಂಡು ಬಂದಿದ್ದೇವೆ. ನಗರ ಮತ್ತು ಗ್ರಾಮೀಣ ಪ್ರದೇಶಗಳೆಂದು ವ್ಯತ್ಯಾಸಗಳನ್ನು ಮಾಡಿಕೊಂಡು, ಇನ್ನು ಹೆಚ್ಚಾಗಿ ಇದನ್ನು ಬೆಳೆಸಿಕೊಂಡು ಹೋಗುವಂಥ

ಕೆಲಸವನ್ನೇ ನಾವು ಮಾಡುತ್ತಿದ್ದೇವೆ. ನೆರೆರಾಜ್ಯಗಳಾದ ತಮಿಳು ನಾಡು ಮತ್ತು ಕೇರಳ ರಾಜ್ಯಗಳಲ್ಲಿ ಸೀಮೆಎಣ್ಣೆ ಕೊಡುವ ಪ್ರಮಾಣ ಏನಿದೆ ಅದನ್ನು ನಾವು ನೋಡಿದಾಗ ಕರ್ನಾಟಕದಲ್ಲಿ ಕೇವಲ 5 ಲೀಟರ್, 6 ಲೀಟರ್, ಕೊಡುವ ವ್ಯವಸ್ಥೆಗೆ ನಾವು ಇವತ್ತು ತಂದು ನಿಲ್ಲಿಸಿದ್ದೇವೆ. ಈ ಹಿಂದೆ ನಗರ ಪ್ರದೇಶದಲ್ಲಿ ಸುಮಾರು 13 ಲೀಟರ್ ಸೀಮೆಎಣ್ಣೆ ಕೊಡುವ ವ್ಯವಸ್ಥೆಯಿತ್ತು. ಈಗ ಏನಾಗಿದೆ ನಗರ ಪ್ರದೇಶಗಳು ಬೆಳೆಯುತ್ತಿರುವ ಸಂದರ್ಭದಲ್ಲಿ Formal and informal rationing ಏನು ಇದೆ ಆ ವ್ಯವಸ್ಥೆ ಆ ಒಂದು ಸಂದರ್ಭದಲ್ಲಿ ಸರ್ಕಾರಗಳು ಕೇಂದ್ರ ಸರ್ಕಾರಕ್ಕೆ ತಮ್ಮ ಪ್ರಸ್ತಾವನೆಯನ್ನು ಕಳುಹಿಸತಕ್ಕಂಥದ್ದು ತಮ್ಮ ಕರ್ತವ್ಯ. ಇವತ್ತು ಏನಾಗಿದೆ, ಮೈಸೂರಿನಂಥ ಮಹಾ ನಗರದಲ್ಲಿ ಸ್ಮಾರ್ಟ್ ಕಾರ್ಡ್ ಕೊಡುವಂಥ ವ್ಯವಸ್ಥೆಗೆ ಚಾಲನೆ ಕೊಟ್ಟಾಯಿತು. ನಂತರ ನೆಮ್ಮದಿ ಕೇಂದ್ರಗಳೆಂದು ನಾವೇನು ಸ್ಥಾಪನೆ ಮಾಡಿದ್ದೇವೆ ಅಲ್ಲಿ ನಮ್ಮ ಸಿಬ್ಬಂದಿಯ ಕೊರತೆ ಹೆಚ್ಚಾಗಿರುವಂಥದ್ದು ಸಹ ಗಮನಿಸಬೇಕಾಗಿದೆ. ರಾಜ್ಯದಲ್ಲಿ ಕೇವಲ ನಾಲ್ಕು ದಿನಗಳಲ್ಲಿ ಸುಮಾರು 5 ಲಕ್ಷದ. 48 ಸಾವಿರ ಅರ್ಜಿಗಳು ಬಂದಿವೆ ಎಂದರೆ, ನಾವು 31 ನೇ ತಾರೀಖಿನವರೆಗೆ ಈ ಕಾರ್ಯಕ್ರಮವನ್ನು ವಿಸ್ತರಣೆ ಮಾಡಿರುವಂಥ ಸಂದರ್ಭದಲ್ಲಿ, ಇನ್ನು ಎಷ್ಟು ಅರ್ಜಿಗಳು ಬರಬಹುದೆಂದು ನಾವು ನಿರೀಕ್ಷೆ ಮಾಡಬಹುದಾಗಿದೆ. ಇವತ್ತು ಏನಾಗಿದೆ ಒಂದು ರೂಪಾಯಿ ಕೊಟ್ಟು ಅರ್ಜಿಗಳನ್ನು ಕೊಡಿ ಎಂದು ಹೇಳುವಂಥದ್ದು ಅರ್ಜಿಗಳ ಪರಿಶೀಲನೆ ಆಗದೇ ಇವತ್ತು ಮೂಲೆಯಲ್ಲಿ ಹಾಕಿರುವಂಥ ಸನ್ನಿವೇಶ ಮೈಸೂರು ನಗರದಲ್ಲಿ ನಡೆದಿದೆ.

ಇವತ್ತಿನ ದಿವಸ ಅರ್ಜಿಗಳನ್ನು ಸ್ವೀಕಾರ ಮಾಡಿ ಅದರ ಮೇಲೆ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳದೇ ಇರತಕ್ಕಂಥದ್ದು ಘೋರವಾದಂಥ ಅಪರಾಧವೆಂದು ನಾನು ಭಾವಿಸುತ್ತೇನೆ. ಈ ವಿಚಾರದ ಬಗ್ಗೆ ಒಂದು ಸ್ಪಷ್ಟವಾದ ನಿಲುವನ್ನು ಮಾನ್ಯ ಸಚಿವರಿಂದ ಹೇಳುವುದಕ್ಕೆ ಆಗುವುದಿಲ್ಲ. ಆದ್ದರಿಂದ, ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಈ ಸದನಕ್ಕೆ ನೇರವಾಗಿ ಆಶ್ವಾಸನೆ ಕೊಡಬೇಕಾಗುತ್ತದೆ. ಈ ಒಂದು ವಿಷಯದ ಬಗ್ಗೆ ರಾಜ್ಯದ ಜನರಲ್ಲಿರತಕ್ಕಂಥ ಗೊಂದಲವನ್ನು ನಿವಾರಿಸಬೇಕಾದರೆ ಒಂದು ವಿಶೇಷವಾದಂಥ ಹೊಸ ಯೋಜನೆಯನ್ನು ತಾವು ರಾಜ್ಯದ ಜನತೆ ಮುಂದೆ ಕೊಡಬೇಕಾಗುತ್ತದೆ. ಈ ಹಿಂದೆ ಎಲ್ಲರಿಗೂ ಪಡಿತರ ಚೀಟಿಯ ವ್ಯವಸ್ಥೆ ಇದ್ದಂಥ ಸಂದರ್ಭದಲ್ಲಿ ಆಹಾರಧಾನ್ಯವನ್ನು ಕೊಡುವುದಕ್ಕೆ ಸಾಧ್ಯವಾಗುತ್ತಿತ್ತು. ಈಗ ಎಪಿಎಲ್ ಮತ್ತು ಬಿಪಿಎಲ್ ಎಂದು ಬೇರೆ ಬೇರೆ ಮಾಡಿಕೊಂಡು ಬಂದಿದ್ದೇವೆ. ಅದರೂ ಕೂಡ ಇವತ್ತಿನ ದಿವಸ ಜನರಲ್ಲಿ ಇದರ ಬಗ್ಗೆ ನಿರಾಸೆಯ ವಾತಾವರಣ ಸೃಷ್ಟಿಯಾಗಿದೆ. ಆದ್ದರಿಂದ ಇದರ ಬಗ್ಗೆ ಸರ್ಕಾರ ಸ್ಪಷ್ಟವಾದ ಹೇಳಿಕೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ನಾರಾಯಣಸ್ವಾಮಿ (ಬಂಗಾರಪೇಟೆ) :- ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಆಹಾರ ಸಚಿವರು ಅಂಕಿ-ಅಂಶಗಳನ್ನು ಕೊಟ್ಟಿದ್ದಾರೆ. ಆದರೆ, ಈ ಸಂದರ್ಭದಲ್ಲಿ ಒಂದು ಪ್ರಶ್ನೆಯನ್ನು ಅವರಿಗೆ ಕೇಳುವುದಕ್ಕೆ ಬಯಸುತ್ತೇನೆ. ಅದೇನೆಂದರೆ, ನೀವು ಪ್ರಣಾಳಿಕೆಯಲ್ಲಿ ಹೇಳಿರುವುದನ್ನು ಮಾನ್ಯ ಸಿ.ಟಿ.ರವಿಯವರು ಕೂಡ ಹೇಳಿದ್ದಾರೆ. ಕಳೆದ ವಿಧಾನಸಭೆಯಲ್ಲಿ ಇದರ ಬಗ್ಗೆ ಸುಧೀರ್ಘವಾಗಿ ಚರ್ಚೆಯಾಗಿತ್ತು. ಆ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಸಹ ಇದ್ದರು. ಆ ವೇಳೆಯಲ್ಲಿ ಅನೇಕ ಸದಸ್ಯರು ಈ ವಿಷಯದ ಬಗ್ಗೆ ಅನೇಕ ಸಲಹೆಗಳನ್ನು ತಮ್ಮ ಮುಂದಿಟ್ಟರು. ಆದರೆ, ಸರ್ಕಾರ ಈಗ ಕಣ್ಣೊರೆಸುವಂಥ ಕೆಲಸವನ್ನು ಮಾಡುತ್ತಿದೆ. ನೆಮ್ಮದಿ ಕೇಂದ್ರ ಮಾಡಿರುವ ಬಗ್ಗೆ ತಾವು ಹೇಳುತ್ತಿದ್ದೀರಿ. ಇಲ್ಲಿ ಫೋಟೋ ತೆಗೆಯುವುದಕ್ಕೆ ಒಂದೇಒಂದೂ ಏಜೆನ್ಸಿಗೆ ಕೊಟ್ಟಿದ್ದೀರಿ. ಈ ಸಂದರ್ಭದಲ್ಲಿ ನಾವು ಕೇಳುವುದೇನೆಂದರೆ, ಇದರ ಬಗ್ಗೆ ಕನಿಷ್ಠ ಒಂದು ಸ್ಪಷ್ಟ ಮತ್ತು ದೃಢ ನಿರ್ಧಾರವನ್ನು ಸರ್ಕಾರ ತೆಗೆದುಕೊಳ್ಳಬೇಕಾಗುತ್ತದೆ. ನೀವು ಎಪಿಎಲ್ ಮತ್ತು ಬಿಪಿಎಲ್ ಕಾರ್ಡ್ ಕೊಡತಕ್ಕಂಥ ಸಂದರ್ಭದಲ್ಲಿ ಯಾವ ಮಾನದಂಡವನ್ನು ಅನುಸರಿಸುತ್ತೀರಿ ಎಂಬುದನ್ನು ಹೇಳಬೇಕು. ಮತ್ತೆ ವರಮಾನದ ಮಿತಿಯನ್ನು 35 ಸಾವಿರಕ್ಕೆ ಏರಿಸುತ್ತೇನೆಂಬ ಮಾತನ್ನು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದರು. ಆದರೆ, ಇವತ್ತಿನ ದಿವಸ 11,800 ರೂಪಾಯಿ ವರಮಾನದಲ್ಲಿಯೇ ಇಟ್ಟಿದ್ದೀರಿ. 11,800 ವರಮಾನ ಆಗಬೇಕಾದರೆ, ದಿವಸಕ್ಕೆ 30 ರೂಪಾಯಿ ಕೂಲಿ ಸಿಕ್ಕಾಗ 365 ದಿವಸಕ್ಕೆ 12,000 ರೂಪಾಯಿ ವರಮಾನವಾಗುತ್ತದೆ. ಇವತ್ತು ಉದ್ಯೋಗ ಖಾತ್ರಿ ಯೋಜನೆಯಲ್ಲಿ ಒಂದು ದಿವಸಕ್ಕೆ 100 ರೂಪಾಯಿ ಕೂಲಿ ಕೊಡುತ್ತೇವೆ. ಇದರ ಪ್ರಕಾರ ಒಂದು ವರ್ಷಕ್ಕೆ 36,000 ರೂಪಾಯಿ ವರಮಾನ ಬರುತ್ತದೆ. ಆದ್ದರಿಂದ, ವರಮಾನವನ್ನು 35 ಸಾವಿರ ರೂಪಾಯಿಗೆ ಹೆಚ್ಚಿಸುತ್ತೇವೆಂದು ತಾವು ಈಗಾಗಲೇ ಹೇಳಿಕೆ ನೀಡಿದ್ದೀರಿ. ಆದ್ದರಿಂದ, ತಾವು ನೀಡಿರುವ ಹೇಳಿಕೆಯ ಪ್ರಕಾರ ಸರ್ಕಾರಿ ಆದೇಶ ಮಾಡಬೇಕಾಗುತ್ತದೆ. ನೆಮ್ಮದಿ ಕೇಂದ್ರದಲ್ಲಿ ಫೋಟೋ ತೆಗೆಯುವುದಕ್ಕೆ ಒಂದೇ ಒಂದು ಏಜೆನ್ಸಿಗೆ ಕೊಟ್ಟಿದ್ದೀರಿ. ಆದರೆ, ಇವರ ಹತ್ತಿರ ಇರುವ ಯಂತ್ರ ಕೆಟ್ಟು ಹೋಗುತ್ತಿದೆ. ಆದ್ದರಿಂದ, ಏನು ಮಾಡಬೇಕೆಂದು ನಾನು ಜಿಲ್ಲಾಧಿಕಾರಿಯವರಿಗೆ ಕೇಳಿದ್ದೇನೆ. ಬಿಪಿಎಲ್ ಮತ್ತು ಎಪಿಎಲ್ ಕಾರ್ಡ್‌ಗಳು ಸುಮಾರು 73%ನಷ್ಟು ಇದೆ. ಈಗಾಗಲೇ ಕೋಲಾರ ಜಿಲ್ಲೆಯಲ್ಲಿ 73%ನಷ್ಟು ಬಿಪಿಎಲ್ ಕಾರ್ಡ್ ಕೊಟ್ಟಿದ್ದಾರೆಂಬ ಮಾಹಿತಿ ನನ್ನ ಹತ್ತಿರ ಇದೆ. ಆದರೆ, ಈ ಬಿಪಿಎಲ್ ಕಾರ್ಡ್ ಕೊಡುವುದಕ್ಕೆ ಸರ್ವೆ

ಮಾಡಿರತಕ್ಕಂಥವರು ಯಾರು? ಸಂಬಂಧಪಟ್ಟಂಥ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಬಿಪಿಎಲ್ ಕಾರ್ಡ್ ಕೊಡುವ ಬದಲು ಎಪಿಎಲ್ ಮತ್ತು ಎಪಿಎಲ್ ಕಾರ್ಡ್ ಕೊಡುವ ಬದಲು ಬಿಪಿಎಲ್ ಕಾರ್ಡ್ ಕೊಟ್ಟಿದ್ದಾರೆ. ಇದು ತಪ್ಪೆಂದು ತಾವು ಇವತ್ತಿನ ದಿವಸ ಹೇಳುತ್ತಿದ್ದೀರಿ. ಆದ್ದರಿಂದ, ಸರ್ಕಾರಕ್ಕೆ ತಪ್ಪು ಮಾಹಿತಿಯನ್ನು ಯಾರ್‍ಯಾರು ಕೊಟ್ಟಿದ್ದಾರೆಯೋ ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬ ಮಾಹಿತಿ ಕೊಡಬೇಕಲ್ಲವೇ? ಈಗ ಮಾಡಿರುವ ನೆಮ್ಮದಿ ಕೇಂದ್ರಗಳು ಸಾಕಾಗುವುದಿಲ್ಲ. ಆದ್ದರಿಂದ, ದಯವಿಟ್ಟು ಇದನ್ನು ವಿಸ್ತರಣೆ ಮಾಡಬೇಕು. ಸರ್ಕಾರ ಇದರ ಬಗ್ಗೆ ಸ್ಪಷ್ಟ ನಿರ್ಧಾರವನ್ನು ಪ್ರಕಟಣೆ ಮಾಡಬೇಕೆಂಬ ವಿನಂತಿಯನ್ನು ತಮ್ಮ ಮೂಲಕ ಮಾಡುತ್ತೇನೆ.

ಶ್ರೀ ಎ. ಮುನಿಯಪ್ಪ (ಶಿಡ್ಲಘಟ್ಟ) :- ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಆದ್ದರಿಂದ, ತಮಗೆ ಮೊದಲು ವಂದಿಸುತ್ತೇನೆ. ಪಡಿತರ ಸಮಸ್ಯೆ ಒಂದು ಕ್ಷೇತ್ರಕ್ಕೆ ಸಂಬಂಧಪಡದೆ ಇಡೀ ರಾಜ್ಯದಲ್ಲಿನ ಪ್ರತಿಯೊಬ್ಬ ಶಾಸಕರ ಕ್ಷೇತ್ರದಲ್ಲಿನ ಸಮಸ್ಯೆಯಾಗಿದೆ. ಆದ್ದರಿಂದ, ಈ ವಿಷಯದ ಬಗ್ಗೆ ಮಾತನಾಡುವುದಕ್ಕೆ ಎಲ್ಲಾ ಶಾಸಕರಿಗೂ ತಾವು ಅವಕಾಶ ಮಾಡಿಕೊಡಿ. ಈ ವಿಚಾರದ ಮೇಲೆ ಸಾಕಷ್ಟು ಜನ ಸದಸ್ಯರು ಮಾತನಾಡಿ ಅಭಿಪ್ರಾಯ ವ್ಯಕ್ತಪಡಿಸಬೇಕೆಂದು ಇದ್ದಾರೆ. ಆದ್ದರಿಂದ, ಎಲ್ಲಾ ಸದಸ್ಯರಿಗೆ ಅವಕಾಶ ಕೊಡಬೇಕೆಂದು ಎಲ್ಲಾ ಸದಸ್ಯರ ಪರವಾಗಿ ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ. ಇದು ಸಾಮಾಜಿಕ ಸಮಸ್ಯೆಯಾಗಿರುವುದರಿಂದ ದಯಮಾಡಿ ಎಲ್ಲರಿಗೂ ಅವಕಾಶ ಕೊಡಿ.

ಅಧ್ಯಕ್ಷರು :- ಈಗಾಗಲೇ ಸಾಕಷ್ಟು ಸದಸ್ಯರಿಗೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಎ. ಮುನಿಯಪ್ಪ :- ಇವತ್ತಿನ ದಿವಸ ಅನುಕೂಲಸ್ಥರಿಗೆ ನೀವು ಬಿಪಿಎಲ್ ಪಡಿತರ ಚೀಟಿಯನ್ನು ಕೊಡುತ್ತಿದ್ದೀರಿ. ಆದರೆ, ನಿಜವಾದ ಬಡವರಿಗೆ ಕೊಟ್ಟಿಲ್ಲವೆಂದು ನಮಗೆ ಜನರು ಹೇಳುತ್ತಾರೆ. ಇವತ್ತಿನ ದಿವಸ ಕಡು ಬಡವರನ್ನು ಕೈಬಿಟ್ಟು ಶ್ರೀಮಂತರಿಗೆ ಬಿಪಿಎಲ್ ಕಾರ್ಡ್ ಕೊಟ್ಟಿರುವ ವಿಷಯ ಕೇಳಿದರೆ ನಮಗೆ ನಿಜವಾಗಿಯೂ ನಾಚಿಕೆಯಾಗುತ್ತದೆ. ಈ ಗೊಂದಲಕ್ಕೆಲ್ಲಾ ಯಾರು ಕಾರಣರೆಂದರೆ, ಇದರ ಬಗ್ಗೆ ಸರ್ಕಾರ ವೈಜ್ಞಾನಿಕವಾದಂಥ ಒಂದು ಮಾರ್ಗ ಸೂಚಿಯನ್ನು ಕೊಟ್ಟಿದೆ. ಆದರೆ, ಈ ಮಾರ್ಗಸೂಚಿಯನ್ನು ಅನುಷ್ಠಾನಕ್ಕೆ ತರತಕ್ಕಂಥ ತಾಲ್ಲೂಕು ಮಟ್ಟದ ಅಧಿಕಾರಿಗಳು ಸಮರ್ಪಕವಾಗಿ ಕೆಲಸ ಮಾಡಿಲ್ಲವೆಂದು ನಾನು ಈ ಸಂದರ್ಭದಲ್ಲಿ

ಆರೋಪ ಮಾಡುತ್ತೇನೆ. ಈ ಅಧಿಕಾರಿಗಳ ಮೇಲಿರತಕ್ಕಂಥ ಜಿಲ್ಲಾಧಿಕಾರಿಗಳು ರ್‍ಯಾಂಡ್‌ಮ್ ಆಗಿ ಕ್ರಾಸ್ ಚೆಕ್ ಮಾಡತಕ್ಕಂಥ ಕೆಲಸ ಈ ರಾಜ್ಯದಲ್ಲಿ ಎಲ್ಲಿಯೂ ಕೂಡ ಆಗಿಲ್ಲ. ಕನಿಷ್ಠ ಒಂದು ಫುಡ್ ಪಾಯಿಂಟ್‌ಗೆ ಹೋಗಿ ಆ ಹಳ್ಳಿಯಲ್ಲಿರತಕ್ಕಂಥ ಎಲ್ಲಾ ಜನರನ್ನು ಕರೆಸಿ ಅಲ್ಲಿ ಯಾರಾರು ನಿಜವಾಗಿ ಅನುಕೂಲವನ್ನು ಪಡೆದುಕೊಂಡಿದ್ದಾರೆಂದು ಪರಿಶೀಲನೆ ಮಾಡಿ ಇದಕ್ಕೆ ಕಾರಣರಾಗಿರುವ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಂಡಿದ್ದರೆ ಬಹುಶ: ಇಷ್ಟೊಂದು ಗೊಂದಲಕ್ಕೆ ಅವಕಾಶ ಆಗುತ್ತಿರಲಿಲ್ಲ. ಕನಿಷ್ಠ ಜಿಲ್ಲಾಧಿಕಾರಿಗಳು ಒಂದೊಂದು ತಾಲ್ಲೂಕಿನ ಸುಮಾರು 10 ಹಳ್ಳಿಗಳಿಗೆ ಹೋಗಿ ರ್‍ಯಾಂಡ್‌ಮ್ ಆಗಿ ಚೆಕ್ ಮಾಡಿ ನಿಜವಾಗಿ ಕೊಡಬೇಕಾಗಿ ರತಕ್ಕಂಥವರ ಹೆಸರು ಕೈಬಿಟ್ಟಿದೆ ಎಂಬುದನ್ನು ಪತ್ತೆ ಮಾಡಿ ಮತ್ತು ಶ್ರೀಮಂತರಿಗೆ ಕೊಟ್ಟಿದ್ದರೆ ಅವರಿಗೆ ಕೊಡುವುದಕ್ಕೆ ಕಾರಣರಾಗಿರುವ ಅಧಿಕಾರಿಗಳ ಮೇಲಾದರು ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಕನಿಷ್ಠ ಈ ಕೆಲಸವನ್ನು ಅವರು ಮಾಡಿಲ್ಲ. ಜಿಲ್ಲೆಯಲ್ಲಿ ಎಲ್ಲಿಗೋ ಒಂದು ಕಡೆ ಹೋಗಿ ಸಮೀಕ್ಷೆ ಮಾಡುವುದು ಅಥವಾ ಚರ್ಚೆ ಮಾಡಿ ರಿವ್ಯೂ ಮಾಡಿ ಬರತಕ್ಕಂಥ ಕೆಲಸವನ್ನು ಅವರುಗಳು ಮಾಡುತ್ತಿದ್ದಾರಷ್ಟೆ. ಆದರೆ, ಇದಕ್ಕೆ ಸಂಬಂಧಪಟ್ಟಂತೆ ಇರುವ ನಿಮ್ಮ ಗೈಡ್‌ಲೈನ್ಸ್ ಪ್ರಕಾರ ಸಮೀಕ್ಷೆ ನಡೆಯುತ್ತಿಲ್ಲ. ಇದಕ್ಕೆಲ್ಲಾ ಕಾರಣ ಅಧಿಕಾರಿಗಳಾಗಿದ್ದಾರೆ. ಆದ್ದರಿಂದ, ಅರ್ಹರು ಅಲ್ಲದವರೆಗೆ ಕಾರ್ಡ್ ಕೊಟ್ಟು ತಪ್ಪು ಮಾಡಿರುವ ಅಧಿಕಾರಿಗಳ ಮೇಲೆ ಕ್ರಮತೆಗೆದುಕೊಳ್ಳಬೇಕು. 72 ಲಕ್ಷ ಕಾರ್ಡ್‌ದಾರರಲ್ಲಿ ಇನ್ನು ಕೆಲವರು ಫೋಟೋಗಳನ್ನು ತೆಗೆಸಿಲ್ಲ. ಫೋಟೋಗಳನ್ನು ತೆಗೆಯದೆ ಇರತಕ್ಕಂಥವರಿಗೆ ಈಗ ಆಹಾರಧಾನ್ಯವನ್ನು ನಿಲ್ಲಿಸಿದ್ದಾರೆ. ಆದ್ದರಿಂದ 72 ಲಕ್ಷದಷ್ಟು ಬಿಪಿಎಲ್ ಕಾರ್ಡ್ ಹೊಂದಿರುವವರಲ್ಲಿ ಯಾರು ಫೋಟೋವನ್ನು ತೆಗೆಸಿಲ್ಲವೋ ಅಂಥವರಿಗೂ ಕೂಡ ದಯವಿಟ್ಟು ಆಹಾರಧಾನ್ಯವನ್ನು ವಿತರಣೆ ಮಾಡುವಂಥ ವ್ಯವಸ್ಥೆ ಆಗಬೇಕು. ಇವತ್ತಿನ ದಿವಸ ಇನ್ನೂ ಅನೇಕರು ಫೋಟೋವನ್ನು ತೆಗೆಸಿಕೊಂಡಿಲ್ಲ. ಫೋಟೋ ತೆಗೆಯುವವರು ಯಾವಾಗ ಬರುತ್ತಾರೆ ಯಾವಾಗ ಹೋಗುತ್ತಾರೆ ಎಂಬುದು ಬಡವರಿಗೆ ಗೊತ್ತಿಲ್ಲ. ಮತ್ತೆ ಫೋಟೋ ತೆಗೆಯುವುದಕ್ಕೆ ಒಂದೇ ಏಜೆನ್ಸಿಗೆ ಕೊಟ್ಟಿದ್ದಾರೆ. ಇದರ ಹಿಂದೆ ಏನು ಪಿತ್ೂರಿ ಇದೆ ಎಂಬುದು ಗೊತ್ತಿಲ್ಲ. ಆದ್ದರಿಂದ, ಸರಿಯಾದ ರೀತಿಯಲ್ಲಿ ಫೋಟೋ ತೆಗೆಯುವಂಥ ವ್ಯವಸ್ಥೆ ಆಗಬೇಕು. ಅರ್ಹರು ಇರತಕ್ಕಂಥವರಿಗೆ ತಕ್ಷಣ ಬಿಪಿಎಲ್ ಕಾರ್ಡ್ ಕೊಡತಕ್ಕಂಥದ್ದು ಆಗಬೇಕು ಮತ್ತೆ ಈಗಿರುವ ನೆಮ್ಮದಿ ಕೇಂದ್ರವನ್ನು ರದ್ದು ಮಾಡಿ ಪಂಚಾಯತಿ ವಾರು ನೆಮ್ಮದಿ ಕೇಂದ್ರವನ್ನು ಪ್ರಾರಂಭ ಮಾಡಬೇಕೆಂದು ಮತ್ತು ಈಗಾಗಲೇ ಮಾನ್ಯ ಸದಸ್ಯರು

ಹೇಳಿದ ಹಾಗೆ ಮೊಬೈಲ್ ನೆಮ್ಮದಿ ಕೇಂದ್ರವನ್ನು ಪ್ರಾರಂಭ ಮಾಡಿ ಅದರ ಮುಖಾಂತರ ಬಿಪಿಎಲ್ ಕಾರ್ಡ್ ವಿತರಣೆ ಮಾಡತಕ್ಕಂಥ ಕೆಲಸ ಆಗಬೇಕೆಂದು ತಮ್ಮ ಮೂಲಕ ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಸಿದ್ದು ಸವದಿ (ತೇರದಾಳ) :- ಸನ್ಮಾನ್ಯ ಅಧ್ಯಕ್ಷರೆ, ಈ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದನೆ ಹೇಳುತ್ತೇನೆ. ಇಡೀ ರಾಜ್ಯದಲ್ಲಿ ಈ ಪಡಿತರ ವ್ಯವಸ್ಥೆಯಲ್ಲಿ ಇಷ್ಟೊಂದು ಸಮಸ್ಯೆ ಯಾಗುವುದಕ್ಕೆ ಕಾರಣ ಏನೆಂದರೆ, ನಾಲ್ಕೈದು ವರ್ಷಗಳ ಹಿಂದೆ ಸರ್ವೆ ಮಾಡುವಾಗ ಇದ್ದಂಥ ಆಗಿನ ಸರ್ಕಾರವೇ ಇದಕ್ಕೆ ಮೂಲ ಕಾರಣ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ, ಹಿಂದಿನ ಸರ್ಕಾರ ಅಂದರೆ, 2004ಕ್ಕಿಂಥ ಮೊದಲು ಆಡಳಿತದಲ್ಲಿದ್ದಂಥ ಸರ್ಕಾರ ತಮ್ಮ ಬಾಲಬುಡಕರುಗಳಿಗೆ ಸರ್ವೆ ಮಾಡುವುದಕ್ಕೆ ಅಧಿಕಾರ ಕೊಟ್ಟರು. ಗ್ರಾಮ ಪಂಚಾಯಿತಿ ಸದಸ್ಯರು ಅಥವಾ ಪಕ್ಷದ ಏಜೆಂಟರ್‌ಗಳಿಗೆ ಮತ್ತು ಪಕ್ಷದ ಕಾರ್ಯಕರ್ತರಿಗೆ ಈ ಕೆಲಸವನ್ನು ಒಪ್ಪಿಸಿದ್ದರಿಂದ ಅವರು ಅವ್ಯಾಹತವಾಗಿ ಅನ್ಯಾಯ ಮಾಡಿದ್ದಾರೆ. ಅಂದರೆ, ತಮಗೆ ಯಾರಿಗೆ ಬೇಕೋ ಅವರಿಗೆ ಮತ್ತು ಕುಟುಂಬದ ಸದಸ್ಯರುಗಳಿಗೆ, ಬೆಂಬಲಿಗರಿಗೆ, ಸರ್ವೆ ಮಾಡುವಾಗ ನಾಲ್ಕು-ನಾಲ್ಕು ಕಾರ್ಡ್‌ಗಳನ್ನು ಕೊಟ್ಟಿರುವುದರಿಂದ ಈ ಅನಾಹುತಕ್ಕೆ ಕಾರಣ ವಾಗಿದೆ. ಆದ್ದರಿಂದ, ಅವರು ಮೊದಲು ಕಾರ್ಡ್ ಕೊಡುವುದಕ್ಕೆ ಅವರಿಗೆ ಆಗಲಿಲ್ಲ. ಈಗ ಅದನ್ನು ಒಡೆದು ಕೊಡುವಂಥ ಕೆಲಸವನ್ನು ನಮ್ಮ ಸರ್ಕಾರ ಇದ್ದಾಗ ಮಾಡಿದ್ದೇವೆ. ಈ ಸಮಸ್ಯೆಗೆ ಕಾರಣೀಭೂತರು ಅವರೇ ಆಗಿದ್ದಾರೆ.

ಅಧ್ಯಕ್ಷರು :- ವಿಷಯಕ್ಕೆ ಸಂಬಂಧಪಟ್ಟಂತೆ ಮಾತ್ರ ಪ್ರಸ್ತಾಪ ಮಾಡಿ. ಈಗ ಇರತಕ್ಕಂಥ ಸಮಸ್ಯೆಗೆ ಪರಿಹಾರ ಅಥವಾ ಸಲಹೆ ಕೊಡಿ.

(ಗೊಂದಲ)

ಶ್ರೀ ಯು.ಟಿ. ಖಾದರ್ :- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ತಪ್ಪು ಮಾಹಿತಿಯನ್ನು ಸದನಕ್ಕೆ ಕೊಡುತ್ತಿದ್ದಾರೆ. ಅವರು ಸದಸ್ಯರ ಗೌರವವನ್ನು ಕಳೆಯುತ್ತಿದ್ದಾರೆ. ಯಾವ ರೀತಿಯಾಗಿ ವಿತರಣೆ ಮಾಡಬೇಕೆಂಬುದರ ಬಗ್ಗೆ ಮಾಹಿತಿ ಕೊಡಿ. ಒಬ್ಬ ಸದಸ್ಯರಾಗಿ ಸದನದಲ್ಲಿ ಸುಳ್ಳು ಹೇಳಿದರೆ ನಾಚಿಕೆ ಪಡಬೇಕಾಗುತ್ತದೆ. ಏನಾದರೂ ಸ್ವಲ್ಪ ಮಾನ ಮರ್ಯಾದೆ ಇದ್ದರೆ ಸತ್ಯವನ್ನು ಹೇಳಿ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ :- ನಿಜ ಹೇಳಿ. ಏಕೆ ಈ ರೀತಿಯಲ್ಲಾ ಹೇಳುತ್ತಿದ್ದೀರಿ? ಆಡಳಿತ ಪಕ್ಷದಲ್ಲಿ ಈಗ ನೀವು ಇದ್ದೀರಿ. ಈಗ ನಿಮ್ಮಿಂದ ಎಲ್ಲಾ ಒಳ್ಳೆಯ ಕೆಲಸವಾಗುತ್ತವೆಯೇ? ನೀವು ಕೂಡ ಅದನ್ನೇ ಮಾಡುವುದು.

(ಗೊಂದಲ)

ಶ್ರೀ ಯು.ಟಿ. ಖಾದರ್ :- ಜನರ ಪರವಾಗಿ ಮಾತನಾಡುವುದಕ್ಕೆ ಅವರಿಗೆ ಹೇಳಿ.

(ಗೊಂದಲ)

ಅಧ್ಯಕ್ಷರು :- ದಯವಿಟ್ಟು ಎಲ್ಲರೂ ಸುಮ್ಮನೆ ಕುಳಿತುಕೊಳ್ಳಬೇಕು. ಈಗ ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡುತ್ತಾರೆ.

ಡಾ॥ ಬಿ.ಎಸ್ ಯಡಿಯೂರಪ್ಪ (ಮುಖ್ಯ ಮಂತ್ರಿಗಳು) :- ಸನ್ಮಾನ್ಯ ಅಧ್ಯಕ್ಷರೆ, ಈ ಮನೆಯ ಎಲ್ಲಾ ಸದಸ್ಯರು ಪಕ್ಷ ಭೇದ ಮರೆತು ಪಡಿತರ ಕಾರ್ಡ್‌ಗಳ ಅವ್ಯವಸ್ಥೆ ಸರಿಹೋಗಬೇಕೆಂದು ಪ್ರತಿಯೊಬ್ಬ ಸದಸ್ಯರು ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಚರ್ಚೆ ಸುಲಭವಾಗಬೇಕೆಂಬ ಉದ್ದೇಶದಿಂದ ಸರ್ಕಾರದ ಕಡೆಯಿಂದ ಒಂದು ಸ್ಟೇಟ್‌ಮೆಂಟ್ ಅನ್ನು ಹೊರಡಿಸಿದ್ದೇವೆ. ಇದರಲ್ಲಿ ಮುಖ್ಯವಾಗಿ ಈಗಿರುವ ಅವಧಿಯನ್ನು ಈ ತಿಂಗಳ ಕೊನೆಯವರೆಗೆ ವಿಸ್ತರಣೆ ಮಾಡುವಂಥದ್ದು ಇದೆ.

ಅವನು ಬಡವನಿದ್ದಾನೆ ಅವನಿಗೆ ಎಪಿಎಲ್ ಅಥವಾ ಬಿಪಿಎಲ್ ಕಾರ್ಡನ್ನು ಕೊಟ್ಟು ಆಹಾರ ಧಾನ್ಯಗಳನ್ನು ವಿತರಣೆ ಮಾಡುವ ತೀರ್ಮಾನವನ್ನು ನಾವು ತೆಗೆದುಕೊಂಡಿದ್ದೇವೆ. ನನಗೆ ನಿಮ್ಮಿಂದ ಏನು ಸಹಕಾರ ಬೇಕೆಂದರೆ ಕಳೆದ ಎರಡು-ಮೂರು ವರ್ಷದಿಂದ ನಿರಂತರವಾಗಿ ಚರ್ಚೆಗಳಾಗಿ 2-3 ಸರ್ಕಾರಗಳು ಅಧಿಕಾರಕ್ಕೆ ಬಂದವು. ಪಡಿತರ ಕಾರ್ಡಿನಲ್ಲಿ ಕಾಂಗ್ರೆಸ್, ಸಮ್ಮಿಶ್ರ ಸರ್ಕಾರ ಈಗ ನಾವು ಅಧಿಕಾರಕ್ಕೆ ಬಂದಿದ್ದೇವೆ. ಆದರೆ ಸಮಸ್ಯೆ ಕೊನೆಯಾಗಲಿಲ್ಲ. ಈಗ ಏನಾಯಿತು? ಹೇಗಾದರೂ ಮಾಡಿ ನಮ್ಮ procedure follow ಮಾಡಿದರೆ ಇನ್ನೊಂದು 3-4 ತಿಂಗಳಲ್ಲಿ ಇದು ಬಗೆಹರಿಯುವುದಿಲ್ಲವೆಂದು ಗೊತ್ತಾದ ಮೇಲೆ ಅವರು ಕೊಟ್ಟಿರುವಂತಹ ಅರ್ಜಿಯನ್ನೇ ಆಧಾರವಾಗಿಟ್ಟುಕೊಂಡು ಒಂದು affidavit ಮಾಡಿಸಿಕೊಂಡು ಕೊಟ್ಟುಬಿಡೋಣ. ನಾಳೆ ದಿವಸ ಹೆಚ್ಚು ಕಡಿಮೆ

ಇದ್ದರೆ ಅಮೇಲೆ defect ಅನ್ನು ಸರಿಪಡಿಸೋಣವೆಂಬ ಬಗ್ಗೆ ಈ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ನಾವೆಲ್ಲಾ ಶಾಸಕರುಗಳು ಆ ರೀತಿಯಾಗಿ ನಿಜವಾದಂತಹ ಬಡವರಿಗೆ ಬಿಪಿಎಲ್ ಕಾರ್ಡ ಸಿಕ್ಕಿಲ್ಲ ಅವನು ಅರ್ಜಿಯನ್ನು ಕೊಟ್ಟು ಅವನಿಗೆ ಸಿಗುವ ರೀತಿಯಲ್ಲಿ ನೀವು ಸಹಕಾರವನ್ನು ನೀಡಿದರೆ ಪ್ರತಿಯೊಬ್ಬನಿಗೂ ಮಾರ್ಚಿ-1ನೇ ತಾರೀಖು ಆಹಾರ ವಿತರಣೆಯನ್ನು ಮಾಡುವುದಕ್ಕೆ ಪ್ರಾರಂಭ ಮಾಡುತ್ತಿದ್ದೇವೆ. ನಿಮ್ಮೆಲ್ಲರ ಭಾವನೆಯನ್ನು ಅರ್ಥಮಾಡಿಕೊಂಡು ಅದನ್ನು ಮಾಡುತ್ತಿದ್ದೇವೆ.

ಶ್ರೀ ಡಿ.ಕೆ. ಶಿವಕುಮಾರ್ :- ನಿಮ್ಮ ಮಂತ್ರಿಗಳು ಅವರ statementನಲ್ಲಿ ಅದನ್ನು ಹೇಳಿರುವುದಿಲ್ಲ. ಯಾರಿಗೆ ಎಪಿಎಲ್ ಕಾರ್ಡ ಸಿಕ್ಕಿದೆ, ಅವರಿಗೆ ಬಿಪಿಎಲ್ ಕಾರ್ಡಿನ ಬಗ್ಗೆ ಅರ್ಜಿಯನ್ನು ಹಾಕಿಕೊಳ್ಳುವ ಬಗ್ಗೆ ಈ provision ಅನ್ನು ಅವರು ಮಾಡಿರುವುದಿಲ್ಲ. ಹಿಂದೆ ಏನಾಗಿತ್ತೆಂದರೆ.....ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಡಾ॥ ಬಿ.ಎಸ್. ಯಡಿಯೂರಪ್ಪ :- ಒಂದು ನಿಮಿಷ ಸಾರ್...

ಶ್ರೀ ಡಿ.ಕೆ. ಶಿವಕುಮಾರ್ :- statement ಮಾಡಿ ಸಾರ್......

ಡಾ॥ ಬಿ.ಎಸ್.ಯಡಿಯೂರಪ್ಪ :- ನಮ್ಮ ಕಾನೂನಿನ ಚೌಕಟ್ಟಿನಲ್ಲಿ ನಿಯಮಾವಳಿಗಳ ಪ್ರಕಾರ ಯಾರು ಬಿಪಿಎಲ್‌ಗೆ eligible ಇದ್ದಾರೆ ಅವರಿಗೆ ಬಿಪಿಎಲ್ ಕಾರ್ಡ್‌ನ್ನು ನೂರಕ್ಕೆ ನೂರು, ಅವನು ಬಡವನಾಗಿರಬೇಕಷ್ಟೆ. ಅವನು ಬಿಪಿಎಲ್ ಕಾರ್ಡ್‌ನ್ನು ಕೇಳಿದರೆ ಅದನ್ನು ಕೊಡುವುದು. ಅದು ಹೌದು ಅಥವಾ ಅಲ್ಲವೋ? ಅದನ್ನು verification ಮಾಡುವ ಬಗ್ಗೆ ಸಮಯವನ್ನು ತೆಗೆದುಕೊಳ್ಳೋಣ. Immediate ಆಗಿ March 1ನೇ ತಾರೀಖಿನಿಂದ ಅವರಿಗೆ ಆಹಾರಧಾನ್ಯವನ್ನು ಕೊಡೋಣ. Temporary card ಅನ್ನು ಈಗ ಕೊಡುವುದು ಇದರ ಉದ್ದೇಶ. ಆದ್ದರಿಂದ ನಿಮಗೆ ಭರವಸೆಯನ್ನು ಕೊಡುತ್ತಿದ್ದೇನೆ. ಎಪಿಎಲ್ ಕಾರ್ಡ್ ಸಿಕ್ಕಿ ಅವನು ಬಿಪಿಎಲ್ ಕಾರ್ಡ್‌ಗೆ eligible ಇದ್ದರೆ ಅವನಿಗೆ ಬಿಪಿಎಲ್ ಕಾರ್ಡ್‌ನ್ನು ಕೊಡೋಣ.

ಶ್ರೀ ಡಿ.ಕೆ. ಶಿವಕುಮಾರ್ :- ಅದಕ್ಕೆ ತಾವು provision ಮಾಡಿಕೊಡಿ.

(ಗೊಂದಲ)

ಅಧ್ಯಕ್ಷರು :- ತಾವು ಒಂದು ನಿಮಿಷ ಕುಳಿತುಕೊಳ್ಳಿ. ಅವರು statement ಅನ್ನು complete ಮಾಡಲಿ. ಮಾನ್ಯ ರುದ್ರೇಶ್‌ಗೌಡರವರೆ ತಾವು ಕುಳಿತುಕೊಳ್ಳಿ please ಆಮೇಲೆ ತಾವು ಹೇಳಿ.

ಡಾ॥ ಬಿ.ಎಸ್. ಯಡಿಯೂರಪ್ಪ :- ನಾನು ಬಹಳ ಸ್ಪಷ್ಟವಾಗಿ ಜವಾಬ್ದಾರಿಯಿಂದ ಒಂದು ಮಾತನ್ನು ಹೇಳುತ್ತೇನೆ. ಇದರಲ್ಲಿ ಗೊಂದಲ ಇರುವುದು ನಿಜ, ಕಳೆದ 2-3 ವರ್ಷಗಳಿಂದ ಈ ಗೊಂದಲವನ್ನು ನಮಗೆ ಸಮಾಧಾನವಾಗುವ ರೀತಿಯಲ್ಲಿ ಬಗೆಹರಿಸುವುದಕ್ಕಾಗಲಿಲ್ಲ. ನಮ್ಮೆಲ್ಲರ ಉದ್ದೇಶವೇನು? ಬಡವರಲ್ಲಿ ಬಡವರಾಗಿದ್ದವರಿಗೆ ಬಿಪಿಎಲ್ ಕಾರ್ಡ್ ಸಿಗಬೇಕು. ಅವನಿಗೆ ಎಪಿಎಲ್ ಕಾರ್ಡ್ ಸಿಕ್ಕಿದೆ, ಆ ಎಪಿಎಲ್ ಕಾರ್ಡ್ ಸಿಕ್ಕಿರುವವನು ನನಗೆ ಅನ್ಯಾಯವಾಗಿದೆ ಎಂದು ಬಿಪಿಎಲ್ ಕಾರ್ಡ್ ಬಗ್ಗೆ ಅರ್ಜಿಯನ್ನು ಹಾಕಿದ್ದಾನೆ. ಆ ಬಗ್ಗೆ ನಮ್ಮ ಹತ್ತಿರ ಮಾಹಿತಿ ಇದೆ. ಅರ್ಜಿಯನ್ನು ಹಾಕದೇ ಇದ್ದರೆ ಅವನು ಅರ್ಜಿಯನ್ನು ಹಾಕಲಿ. ಈ ತಿಂಗಳ 31ನೇ ತಾರೀಖಿನವರೆಗೂ ಕೂಡ ಅವಧಿಯನ್ನು ಕೊಟ್ಟಿದ್ದೇವೆ. ಅದು ಆದ ಮೇಲೆ ಮಾರ್ಚಿ 1ನೇ ತಾರೀಖಿನಿಂಧ ಬಿಪಿಎಲ್ ಎಂದು ಕೊಟ್ಟು ಅವನಿಗೆ ಅಹಾರಧಾನ್ಯವನ್ನು ಕೊಡುವುದಕ್ಕೆ ಶುರು ಮಾಡುತ್ತೇವೆ. ಅಮೇಲೆ verification ಶುರು ಮಾಡಿದ ಮೇಲೆ ಅವನು ಸುಳ್ಳು ಮಾಹಿತಿಯನ್ನು ಕೊಟ್ಟಿದ್ದಾನೆಂದರೆ ಅದನ್ನು ವಜಾ ಮಾಡಿ ಏನು ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇವೆ. ಈಗ ನಾನು ಭರವಸೆಯನ್ನು ಕೊಡುತ್ತಿದ್ದೇನೆ. ಆ ತರಹದ ಯಾವುದೇ ವ್ಯಕ್ತಿಗಳು ಇದ್ದರೂ ಸಹ ಅವನು ಅರ್ಜಿಯನ್ನು ಕೊಡಬಹುದು, ಅರ್ಜಿಯನ್ನು ಈಗಾಗಲೇ ಕೊಡುತ್ತಿದ್ದೇವೆ. ಇದನ್ನು ಬಗೆಹರಿಸುವಂತಹ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಇದುವರೆಗೂ ಸಹ ಇವತ್ತು ತಮಗೆ ಏನು ಮಾಹಿತಿಗಳನ್ನು ಅಂಕಿ ಅಂಶಗಳನ್ನು ಕೊಟ್ಟಿದ್ದೇನೆ. ಇವತ್ತು 5,48,027 ಅರ್ಜಿಗಳನ್ನು ವಿತರಣೆಯನ್ನು ಮಾಡಿದ್ದೇವೆ. ಅದರ ಅರ್ಥ ಅವನು ಬಂದು ಎಪಿಎಲ್ ಕಾರ್ಡ್ ಸಿಕ್ಕಿದೆ ಬಿಪಿಎಲ್ ಕಾರ್ಡ್ ಬೇಕು ಎಂದು ಅರ್ಜಿಯನ್ನು ಸಹ ಕೊಟ್ಟಿದ್ದಾನೆ. ಆ ಅರ್ಜಿ ವಾಪಸ್ಸು ಬಂದ ತಕ್ಷಣ verification ಏನು ಮಾಡದೆಯೇ ನಾವು ತಕ್ಷಣ ಅವನಿಗೆ ಬಿಪಿಎಲ್ ಕಾರ್ಡ್‌ನ್ನು temporary ಯಾಗಿ ಕೊಟ್ಟು ಅಹಾರಧಾನ್ಯವನ್ನು ಮಾರ್ಚಿ 1ನೇ ತಾರೀಖಿನಿಂದ ಕೊಡುವುದಕ್ಕೆ ಶುರು ಮಾಡುತ್ತೇವೆ. ನಂತರ 2-3 ತಿಂಗಳಲ್ಲಿ verification ಮಾಡುವುದಕ್ಕೆ time ಬೇಕು verify ಮಾಡಿದ ಮೇಲೆ ಆ ದಾಖಲೆಗಳು ಸರಿಯಿಲ್ಲವೆಂದರೆ ಅದನ್ನು ನಾವು ವಜಾ ಮಾಡಿ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಇಲ್ಲದೆ ಇದ್ದರೆ ಅದನ್ನು

ಮುಂದುವರಿಸುತ್ತೇವೆಂದು ನಾನು ಈಗಾಗಲೇ ಮುಖ್ಯಮಂತ್ರಿಯಾಗಿ statement ಅನ್ನು ಕೊಟ್ಟಮೇಲೆ ನೀವೆಲ್ಲರೂ ಆನಂದವಾಗಿ ಊಟಕ್ಕೆ ಹೋಗಬಹುದು.

ಶ್ರೀ ಟಿ.ಬಿ. ಜಯಚಂದ್ರ :- ತಾವು ತೆಗೆದುಕೊಂಡಿರುವ ತೀರ್ಮಾನವು ಒಳ್ಳೆಯದಾಗಿದೆ. ಸರ್ ಒಂದು ನಿಮಿಷ ಇರಿ.

ಅಧ್ಯಕ್ಷರು :- ಮಾನ್ಯ ಶಿವಕುಮಾರ್‌ರವರು ಮಾತನಾಡಲಿ, ತಾವು ಕುಳಿತುಕೊಳ್ಳಿ.

ಶ್ರೀ ಡಿ.ಕೆ. ಶಿವಕುಮಾರ್ :- ಈಗ ತಾವು Date ಅನ್ನು ಎಷ್ಟಾದರೂ extension ಮಾಡಿ ಇನ್ನು ಒಂದು ತಿಂಗಳು extra ಮಾಡಿ. ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು appeal ಮಾಡುತ್ತೇನೆ. ಮಾನ್ಯ ಕಾರಜೋಳ್ ಸಾಹೇಬ್‌ರವರು ಈ ಕಡೆ ಗಮನ ಕೊಡಬೇಕು.

ಅಧ್ಯಕ್ಷರು :- ಅದರ ಬಗ್ಗೆ ಮಾನ್ಯ ಕಾರಜೋಳ್‌ರವರು ಮಾನ್ಯ ಮುಖ್ಯಮಂತ್ರಿಗಳಿಗೆ ಮಾಹಿತಿಯನ್ನು ಕೊಡುತ್ತಿದ್ದಾರೆ.

ಶ್ರೀ ಡಿ.ಕೆ. ಶಿವಕುಮಾರ್ :- ನಾವು ಹೇಳುವುದನ್ನು ಮಾನ್ಯ ಮುಖ್ಯ ಮಂತ್ರಿಗಳು ಕೇಳಬೇಕಲ್ಲ.

ಅಧ್ಯಕ್ಷರು :- ಅದೇ ಮಾಹಿತಿಯನ್ನು ಅವರಿಗೆ ಕೊಡುತ್ತಿದ್ದಾರೆ.

ಶ್ರೀ ಡಿ.ಕೆ. ಶಿವಕುಮಾರ್ :- ಅವರು ಮಾತನಾಡಿ ಮುಗಿಸಲಿ ಬಿಡಿ. ಅವರು ಮಾತು ಮುಗಿಸಿದ ಮೇಲೆ ನಾನು ಮಾತನಾಡುತ್ತೇನೆ.

ಅಧ್ಯಕ್ಷರು :- ಮಾನ್ಯ ಕಾರಜೋಳ್‌ರವರೆ, ಮಾನ್ಯ ಡಿ.ಕೆ.ಶಿವಕುಮಾರ್‌ರವರು ಮಾತನಾಡುತ್ತಿದ್ದಾರೆ.

ಶ್ರೀ ಡಿ.ಕೆ. ಶಿವಕುಮಾರ್ :- ನಮ್ಮ request ಏನೆಂದರೆ, ನೀವು ಎಲ್ಲರಿಗೂ ಕೂಡ ಯಾರ್‍ಯಾರು ಬಿಪಿಎಲ್ ಕಾರ್ಡ್‌ಗೆ eligible ಇದ್ದಾರೆ ಕಾರ್ಡ್ ಕೊಡುವ ಬಗ್ಗೆ ತಮಗೆ ಕಳಕಳಿ ಇದೆ ನಾವು ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಜಿಲ್ಲಾಧಿಕಾರಿಗಳು ಏನು ಆದೇಶವನ್ನು ಕೊಟ್ಟಿದ್ದಾರೆಂದರೆ, ಎಪಿಎಲ್ ಕಾರ್ಡ್ ಇರುವವರಿಗೆ ಬಿಪಿಎಲ್ ಕಾರ್ಡ್‌ಗೆ ಅರ್ಜಿಯನ್ನು ಹಾಕಿಕೊಳ್ಳುವುದಕ್ಕೆ, ಅರ್ಜಿಯನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವನ್ನು ಕೊಡುತ್ತಿಲ್ಲ.

ಡಾ|| ಬಿ.ಎಸ್.ಯಡಿಯೂರಪ್ಪ :- ಅದು ಸರಿಯಲ್ಲ. ಯಾರ್‍ಯಾರಿಗೆ ಕಾರ್ಡುಗಳು ಇಲ್ಲ. ಇವತ್ತೆ ನಾನು ಡಿ.ಸಿ.ಯವರಿಗೆ ಆದೇಶವನ್ನು ಕೊಡುತ್ತಿದ್ದೇನೆ. ಅವನು ಎಪಿಎಲ್ ಕಾರ್ಡ್ ಇದ್ದು ಅವನು ಬಿಪಿಎಲ್ ಕಾರ್ಡ್‌ಗೆ eligible ಇದ್ದರೆ ಅವನಿಗೆ ಅರ್ಜಿ ಕೊಡುವುದಕ್ಕೆ ಅವಕಾಶವನ್ನು ಕೊಡುತ್ತೇವೆ.

ಶ್ರೀ ಡಿ.ಕೆ. ಶಿವಕುಮಾರ್ :- Thank you.

ಶ್ರೀ ಟಿ.ಬಿ. ಜಯಚಂದ್ರ :- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳಲ್ಲಿ....

ಅಧ್ಯಕ್ಷರು :- ಈ ವಿಷಯದ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಈ ಬಗ್ಗೆ ಚರ್ಚೆ ಮಾಡುವುದಕ್ಕೆ ಸಾಕಷ್ಟು ಅವಕಾಶವನ್ನು ಕೊಟ್ಟಿದ್ದೇನೆ. ನಾನು ಸರ್ಕಾರದ ಗಮನಕ್ಕೆ ತಂದಿದ್ದೇನೆ.

ಡಾ|| ಬಿ.ಎಸ್. ಯಡಿಯೂರಪ್ಪ :- Coffee Plantation ಮಾಡುತ್ತಿರುವಂತಹ workersಗೂ ಸಹ ಬಿಪಿಎಲ್ ಕಾರ್ಡ್ ಕೊಡಬೇಕೆನ್ನುವುದರ ಬಗ್ಗೆ ತೀರ್ಮಾನವನ್ನು ಮಾಡಿದ್ದೇವೆ. ಅವರಿಗೂ ಸಹ ಬಿಪಿಎಲ್ ಕಾರ್ಡ್‌ನ್ನು ಸಹ ಕೊಡುತ್ತಿದ್ದೇವೆ.

ಅಧ್ಯಕ್ಷರು :- ಇದು ನಿಜವಾಗಿಯೂ ಮಂತ್ರಿಗಳು statement ಅನ್ನು ಕೊಟ್ಟಾಗ ಸ್ಪಷ್ಟೀಕರಣಕ್ಕೆ ಮಾತ್ರ ಅವಕಾಶ ಇರುವುದು. ಆದರೆ ಇದು ಸಾರ್ವಜನಿಕ ಮಹತ್ವದ ವಿಷಯವಾಗಿರುವುದರಿಂದ ಎಲ್ಲಾ ಶಾಸಕರಿಗೂ ಸಾಕಷ್ಟು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೇನೆ. ಮೊದಲು ಅವರಿಗೆ ಕೊಟ್ಟಿರುವಂತಹ ಅವದಿ ಮುಗಿಯಲಿ ನಂತರ ಮುಂದೆ ನೋಡೋಣ. ಅದು ಅದ ಮೇಲೆ ಅವಕಾಶವನ್ನು ಕೊಟ್ಟೇ ಕೊಡುತ್ತಾರೆ.

ಶ್ರೀ ಟಿ.ಬಿ. ಜಯಚಂದ್ರ :- ಮಾನ್ಯ ಮುಖ್ಯಮಂತ್ರಿಗಳು ತಾವು ಹೇಳಿರುವಂತಹದ್ದು date ಇನ್ನು 4 ದಿವಸ ಮಾತ್ರ ಇದೆ. 31ಕ್ಕೆ close ಆಗಿ ಹೋಗುತ್ತದೆ. ನೀವು ಈ ಹಿಂದೆ ಆಹಾರ ಸಚಿವರಿಗೆ ಕಳುಹಿಸಿರುವಂತಹ circularನಲ್ಲಿ ಎಪಿಎಲ್‌ನವರು ಬಿಪಿಎಲ್ ಕಾರ್ಡ್ ಬಗ್ಗೆ ಅರ್ಜಿ ಹಾಕಿಕೊಳ್ಳುವುದಕ್ಕೆ ಅವಕಾಶವಿರಲಿಲ್ಲ. ಇದರ ಬಗ್ಗೆ ತಾವು clarify ಮಾಡಬೇಕು.

ಅಧ್ಯಕ್ಷರು :- ಅವರು clarify ಮಾಡಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ :- ಈಗ ಮಾಡಿದ್ದಾರೆ. ನಾನು ಒಂದು ಮಾತನ್ನು ಸ್ಪಷ್ಟ ಮಾಡುತ್ತೇನೆ.

ಡಾ|| ಬಿ.ಎಸ್. ಯಡಿಯೂರಪ್ಪ :- ನೀವು ಹೇಳುತ್ತಿರುವಂತಹ ಮಾತು ಸರಿಯಲ್ಲ. ನಾನು ಸರ್ಕಾರದ ಕಡೆಯಿಂದ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಈಗ ಎಪಿಎಲ್ ಕಾರ್ಡ್ ಇದ್ದು ಅವರು ಬಿಪಿಎಲ್ ಕಾರ್ಡ್‌ಗೆ eligible ಇದ್ದರೆ ಅವನು ಅದನ್ನು ಒಪ್ಪಿಕೊಂಡು ಅರ್ಜಿಯನ್ನು ಜಿಲ್ಲಾಧಿಕಾರಿಗಳಿಗೆ ಕೊಡಲು ಅವಕಾಶ ಕೊಟ್ಟಿದ್ದೇವೆ. ಅದನ್ನು ಅವನು ವಾಪಸ್ಸು fill-up ಮಾಡಿಕೊಡಬೇಕು. ಆ ರೀತಿಯಾಗಿ fill-up ಮಾಡಿ ಕೊಟ್ಟಿರುವವರೆಲ್ಲರಿಗೂ ಸಹ ನಾವು ಬಿಪಿಎಲ್ ಕಾರ್ಡ್‌ನ್ನು temporary ಯಾಗಿ ಕೊಡುತ್ತೇವೆ. ಅದಕ್ಕೆ ಆಹಾರಧಾನ್ಯವನ್ನು ಕೊಡುವುದಕ್ಕೆ ಶುರುಮಾಡುತ್ತೇವೆ. ಆಮೇಲೆ verification ಮಾಡುತ್ತೇವೆ. ನಾನು ಇನ್ನು ಏನು ಹೇಳಬೇಕು ಸ್ವಾಮಿ.

ಶ್ರೀ ಟಿ.ಬಿ. ಜಯಚಂದ್ರ :- ನಾನು ನಿಮ್ಮ ಹೇಳಿಕೆಯನ್ನು ಸ್ವಾಗತ ಮಾಡುತ್ತೇನೆ ಸ್ವಾಮಿ. ನೀವು ಒಂದು clear ಅಗಿ messageನ್ನು Deputy Commissioner ರವರಿಗೆ ಮಾಡಬೇಕು.

ಡಾ|| ಬಿ.ಎಸ್. ಯಡಿಯೂರಪ್ಪ :- ಅದು ಸಾಧ್ಯವಿಲ್ಲ. ಯಾರು ಬಡವನಿದ್ದಾನೆ ಅವನು ಕ್ಯೂನಲ್ಲಿ ನಿಂತುಕೊಂಡು ತೆಗೆದುಕೊಳ್ಳುತ್ತಾನೆ. ಈಗಾಗಲೇ ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ಅರ್ಜಿಯನ್ನು ಕೊಟ್ಟಿದ್ದಾರೆ. ಇನ್ನು 10 ದಿವಸದಲ್ಲಿ ನಿಶ್ಚಿತವಾಗಿ ಅರ್ಜಿಯನ್ನು ಕೊಡುತ್ತಾರೆ. ನಮಗೆ ಆ ಬಗ್ಗೆ ವಿಶ್ವಾಸವಿದೆ. ನೀವೇ ಸರ್ಕಾರ ನಡೆಸಿ ಅನುಭವ ಇರುವಂತಹವರು ಆಗಿದ್ದೀರಿ. ನಾವು ಜವಾಬ್ದಾರಿಯಿಂದ ಕೆಲಸವನ್ನು ಮಾಡುತ್ತೇವೆ.

(ಗೊಂದಲ)

ಅಧ್ಯಕ್ಷರು :- ಈಗ ಚರ್ಚೆಯನ್ನು ಮುಕ್ತಾಯಗೊಳಿಸಿದ್ದೇನೆ. ಮಾನ್ಯ ಸಚಿವರಾದಂತಹ ಬಸವರಾಜ ಬೊಮ್ಮಾಯಿಯವರು ಕರ್ನಾಟಕ ವಿಧಾನಸಭೆಯ ಎಲ್ಲಾ ಮಾನ್ಯಸದಸ್ಯರುಗಳಿಗೆ ಇವತ್ತಿನ ದಿವಸ ಭೋಜನಾಲಯದಲ್ಲಿ ಔತಣಕೂಟವನ್ನು ಏರ್ಪಡಿಸಿರುತ್ತಾರೆ. ಮಾನ್ಯ ಸದಸ್ಯರುಗಳು ದಯವಿಟ್ಟು ಆ ಒಂದು ಔತಣಕೂಟದಲ್ಲಿ